REGISTERED NO. M. 1393, ಈ ಪ್ರತಿ ಒಂದಾಣೆ

ಕಂಠೀರವ

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ।
ಶಸ್ತ್ರಸ್ತದ್ವದಮೂಷು ಸಂಭವಹೃತಿಪ್ರಾಗಲ್ಭ್ಯಮಾತ್ಮೋನ್ನಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ಶ್ರೀಕಂಠಕಂಠೀರವಃ ॥

KANTEERAVA
THE ONLY KANARESE
BI-WEEKLY.

ನರರ ಕುಲಗಳೊಳಾರ್ಯವಂಶವು, । ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಕರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವೆ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೪ VOL. XVIII | ಮಂಗಳೂರು, ೧೯೩೬ನೇ ಇಸವಿ ನವಂಬರ ತಾರೀಕು ೧೭ನೇ ಮಂಗಳವಾರ MANGALORE, TUESDAY, NOVEMBER 17, 1936. | ಸಂಚಿಕೆ ೬೫. NO. 65

ಅಮೃತಾಂಜನ

ಅಮೃತಾಂಜನ

(Regd.)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೀನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೊ

AMRUTANJAN DEPOTS BOMBAY. MADRAS. CALCUTTA

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Estd. 1908
Church Gate Street, Fort - - BOMBAY.

SPECIAL FEATURES.

(1) Rebate on yearly payment of policies.
(2) Rebate for larger assurances.
(3) Accident Risk covered on small extra premiums.
(4) Attractive Bonuses.

It pays you to represent this Company.
Wanted Agents in unrepresented parts.

APPLY TO:
KOCHIKAR BROTHERS,
Madras Branch Secretaries.

——1936——
OUR VALUATION YEAR

Take a BOMBAY LIFE Policy now, and share in the profits



Branches at:	P. B. 337 Mount Rd. Madras.	Visveswarapuram Circle Bangalore City.	Soumyalayam Puthiyara Calicut.	Car Street Mangalore.	Udipi S. India.	Charni Rd. Bombay No. 4.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನು ಪ್ರಚಾರ ಪಡಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು:—

ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಸ್ಟೋಕಿಸ್ಟರು:—**ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.**

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚೆದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ನೆಲ್‌ಸನ್ನ ಯುಟ್ರೋವನ್ ಹೆಂಗಸರ

ಎಲ್ಲಾ ರೋಗಗಳಿಗೂ ಖಂಡಿತವಾದ ದಿವ್ಯ ಔಷಧ

ಉಪಯೋಗಗಳು

ಅಲ್ಪ ಸಮಯದಲ್ಲಿ ಲುಕೋರಿಯಾ, ಮೆಟ್ರೊರೊಡಿಯ, ಮನೊರಿಜಿಯಾ, ಮಿಸ್‌ಕೆರಿಜ್, ಬೆನ್ನೋವು ಮತ್ತು ಡಿಸ್‌ಮೆನೊರಿಯಾ ಗುಣಪಡಿಸುತ್ತದೆ. ಅನೇಕ ಡಾಕ್ಟರುಗಳಿಂದ ಪರೀಕ್ಷಿಸಲಾಗಿರುತ್ತದೆ.

Nelson's Convulsion Cure

Best For

INFANTILE CONVULSIONS

ಇಂಪೀರಿಯಲ್ ಫಾರ್ಮಸ್ಯೂಟಿಕಲ್ ಕಂಪೆನಿ,

ಪೋಸ್ಟ್ ಬೋಕ್ಸ ನಂಬ್ರ 3559, :: ಬೊಂಬಾಯಿ.

ಇವರಿಂದ ತಯಾರಿಸಲ್ಪಡುತ್ತದೆ.

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೊಸತರುಗು ಹೇಟೆ, ಬೆಂಗಳೂರು ಸಿಟಿ.

ಕ್ಲೈಮ್ ಹಣ ರೂ. 3,16,400 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟು ಪಾವತಿಯಾಗಿರುತ್ತೆ.

ಮೈಸೂರು ಸರ್ಕಾರದ ಕಂಪೆನಿ ರೆಗ್ಯುಲೇಷನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಷ್ಯೂರೆನ್ಸ್ ಆಕ್ಟ್ VI (1912)ರ ಪ್ರಕಾರ ಶೇವಣಾತಿ (Deposit) ಇಟ್ಟು, ಅದರ ನಿಯಮುಗಳಿಗೊಳಪಟ್ಟಿದೆ.

ಈ ಕಂಪೆನಿಯ ಅತಿ ಮುಖ್ಯವಾದ ಮತ್ತು ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ವರ್ಷ ಒಂದಕ್ಕೆ ರೂ. 1000ಗೆ ರೂ. 15ರಂತೆ ಗ್ಯಾರಂಟಿಯೊಂದಿ ಬೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ 90% ರಷ್ಟು ಸಾಲ ಪಡೆಯುವಿಕೆ. (3) ಇಷ್ಟುಮಿಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಆಶಕ್ತತೆಯ ರಿಯಾಯಿತಿ; (5) ವೈದ್ಯಪರೀಕ್ಷೆಯೇ ಇಲ್ಲದೆ ಮಕ್ಕಳ ಹೆಸರಿನಲ್ಲಿ 5000 ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವ ವಿಮೆ ಮಾಡುವ ಕ್ರಮ. ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

1936ನೇ ಸಪ್ಟಂಬರ ತಿಂಗಳಲ್ಲಿ 16 ಮರಣಗಳು ರಿಪೋರ್ಟಾಗಿರುವದರಿಂದ ಮ್ಯೂಚುವಲ್ ಬೆನೆಫಿಟ್ ಸ್ಕೀಮಿನ ಎಲ್ಲಾ ಮೆಂಬರರೂ ಎಂಬಿಸಂತೆ ಒಂದು ತಿಂಗಳೊಳಗಾಗಿ ತಮ್ಮ ಚಂದಾ ಹಣವನ್ನು ಕಳುಹಿಸಬೇಕಾಗಿ ಅರಿಕೆ ಮತ್ತು ಅವರು ಇಷ್ಟಪಟ್ಟಲಿ ತಮ್ಮ ಸರ್ಟಿಫಿಕೇಟುಗಳನ್ನು ಜೀವವಿಮೆ ಪಾಲಿಸಿಗಳಿಗೆ ಬದಲಾಯಿಸಬಹುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ

ತಿರುಪತಿ ಬಲಿಜಾ ಅಂಡ್ ಕೆಂಪೆನಿ, ಮ್ಯಾನೇಜಿಂಗ್ ಏಜಂಟರುಗಳು.

ಸಾಹುಕಾರರಿಗೆ ನುಣ್ಣಗಾದ ಹಿಪ್ಪೆಯ ವರ್ತನಾನ.

ನಾನೆ ಕರಾಣಿ ಜೀವನು, ಕಟ್ಟಲಿ, ಕಪ್ಪಣದ ಸಾಮುಗ್ರಿ, ಗಾಜಿನ ಸಾಮಾನು, ಇಂಗ್ಲಿಷ್ ಪಟ್ಟಿ ಪೆಟ್ಟಿಂಟ್ ಪ್ರಪಂಚದೊಳು ಇದೇ ನೊದರಾದ ಪುತಿಯೊಂದು ಬಗೆಯ ಸರಕುಗಳನ್ನೂ ನಿತವಾದ ಕಮೀಶನ್ ದರದಲ್ಲಿ ಒದಗಿಸುವ ಕೆಲಸವನ್ನು ಕೈಕೊಳ್ಳುತ್ತೇವೆ. ಒಮ್ಮೆ ಪರೀಕ್ಷಿಸಿದಲ್ಲಿ ಯಜಮಾನರೂ ತಪ್ಪಿಸಿಕೊಳ್ಳಲಾರರು. ಇಂಗ್ಲೀಷಿನಲ್ಲಿ ನಡೆಯುತಕ್ಕದ್ದೆ.

ಎಸ್. ಎಸ್. ಟ್ರೇಡಿಂಗ್ ಕಂಪೆನಿ,

ಪೋಸ್ಟ್ ಬೋಕ್ಸ್ ನಂ. 1, ಕಲ್ಬಾದೇವಿ ರೋಡ್, ಬೊಂಬಾಯಿ.

1935ನೇ ಇಸ್ವಿಯ ಎ. ಐ. ಐ. ಪ್ರದರ್ಶನದಲ್ಲಿ ಬಂಗಾರದ ಬಹುಮಾನ ಪದಕವು ದೊರಕಿದೆ.

ನಿಮ್ಮ ಕೂದಲು ತನ್ನ ಸ್ವಾಭಾವಿಕ ಬಣ್ಣವನ್ನು ತಳೆಯುತ್ತದೆ ಮತ್ತೂ ಹೊಳಪಿನ ಮೃದುತ್ವವನ್ನು ಪಡೆಯುತ್ತದೆ— ಈ ನಿಮ್ಮ ಗುಟ್ಟನ್ನು ಯಾರೂ ತಿಳಿಯರು. ಇಂದೇ ಒಂದು ಬಾಟಲಿಯನ್ನು ತರಿಸಿ— ಆದರಪ್ಪು ಒಳ್ಳೆದು ಇಂಡಿಯದಲ್ಲಿ ಇನ್ನೊಂದಿಲ್ಲ.

1 ಪೆಟ್ಟಿಗೆಗೆ ರೂ. 1—2, 6 ಪೆಟ್ಟಿಗೆಗಳಿಗೆ ರೂ. 5-0.
3 ಪೆಟ್ಟಿಗೆಗಳಿಗೆ ,, 2-12. 12 ಪೆಟ್ಟಿಗೆಗಳಿಗೆ ರೂ. 9-0.
ಪೋಸ್ಟೇಜಿನ ಸಹಿತ ಬೆಲೆ ಇಂಡಿಯಕ್ಕೆ ಮಾತ್ರ.

ಇಂಡಿಯಕ್ಕೆ ಸೋಲ್ ಡಿಸ್ಟ್ರಿಬ್ಯೂಟರ್ಸ್:—

THE MAQBOOL AGENCY,
Bombay 3. Tel: "AGENCY."

ನ್ಯೂ ಮೊಡಲ್ ಗಡಿಯಾರ.

3 ವರುಷಗಳ ಗ್ಯಾರಂಟಿ.

(ವಿವರಕ್ಕೆ ಪೆಂಡಾವರ್ತಿ ಬೀಗ ಕೊಡುವುದು.)

ಈ ಗಡಿಯಾರಗಳು ಹೊಸದಾಗಿ ತಯಾರು ಮಾಡಿ ತರಿಸಿದ್ದೇವೆ. ನೀಮೆಯ ನಿಕ್ಕಲ್ ಲೋಹದ ಸ್ಟ್ಯಾಂಡಿನಲ್ಲಿ ತಯಾರಿಸಿದ್ದೇವೆ. ಈ ಗಡಿಯಾರವು ಖರಾರು ಗಂಟೆಯನ್ನು ತೋರಿಸುವುದು. ಖಾತ್ರಿಯಾದ 3 ವರುಷಗಳ ಗ್ಯಾರಂಟಿ ಕೊಡುವೆವು. ಈ ಗಡಿಯಾರಗಳನ್ನು ಗುಡಿ, ಸ್ಕೂಲು, ರೀಡಿಂಗ್ ರೂಮ್ ಹಾಲುಗಳಲ್ಲಿ ಮುಂತಾದ ಜಾಗದಲ್ಲಿ ಗೋಡೆಗೆ ತಗಲಿಸಿದರೆ ಅಂದವಾಗಿರುವುದು. ಕ್ರಯ ಗಡಿಯಾರ 1ಕ್ಕೆ ರೂ. 3. ಟಪಾಲು ಖರ್ಚು ಪ್ರತ್ಯೇಕ.

ವಿ. ಎಸ್. ವಾಚ್ ಕಂಪೆನಿ,
ಇರುಳಪ್ಪನ ಬೀದಿ, ಮದ್ರಾಸು.

8, 3-11.



ನಮ್ಮಲ್ಲಿ ಈ ಕೆಳಗಿನ ಸಾಮಾನುಗಳನ್ನು ದಾಸ್ತಾನು ಮಾಡಿರುತ್ತದೆ:—

1. ಪೆಟ್ರೊಮೆಕ್ಸ್ ದೀಪಗಳು ಮತ್ತು ಲಾಂಟನುಗಳು.
2. ಎವರ್‌ರೆಡಿ ಮತ್ತು ಡಯಮೆಂಡ್ ಟೋರ್ಚ್‌ಸ್, ಸೆಲ್ಸ್ ಮತ್ತು ಪ್ರೈಮಸ್ ಸ್ಟವ್‌ಗಳು.
3. ಎಲ್ಲಾ ತರದ ಜರ್ಮನ್ ಮತ್ತು ದೇಶೀ ಮೆಂಟಲುಗಳು.

ಕೂಡಲೇ ನಮ್ಮ ಕೆಟಲಾಗನ್ನು ಪಡೆದುಕೊಳ್ಳಿರಿ. ಧರ್ಮಾರ್ಥವಾಗಿ ರವಾನಿಸುವೆವು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳಿರಿ.

ಎಸ್. ಎನ್. ಗಾಂಧಿ,

ಧ್ರಾಂಗಧ್ರಾವಾಲಾ, ಪ್ಯಾಡೊನಿ,
ಗೊಡಿಜೀಸ್ ಚೊಲ್, ಬೊಂಬೆ, 3.
P. O. Box No. 3050.

For all kinds of.
NEAT AND ACCURATEP RINTING,
please consult
The Saraswathi Printing Works, Ltd.,
MANGALORE, S. K.

ಕಾರಣ ಪುತ್ತು
ಪರಿಣಾಮ

ಮೈಸೂರು ಗಂಧದ ಸಾಬೂನನ್ನು
ನಿತ್ಯವೂ ಉಪಯೋಗಿಸುವುದರ
ಪರಿಣಾಮವೇನೆಂದರೆ,
ಶಾರೀರಕ ಯೋಗ್ಯತೆಯು
ರಮ್ಯವಾದ ಅನುಭವವಾಗಿದೆ
ಅದು ಚರ್ಮವನ್ನು ಕೂಡ
ಕಾಪಾಡುತ್ತದಲ್ಲದೆ,
ಅದನ್ನು ಕೋಮಲವಾಗಿಯೂ
ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ,
ಬಿ. ಪಿ. ಗುಣವಿಶೇಷದ
ಶುದ್ಧವಾದ ಮೈಸೂರು
ಗಂಧದ ಎಣ್ಣೆಯು
ಈ ತಯಾರಿಯ ಸ್ವಚ್ಛ ದಿನಸುಗ
ಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು
ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
GOVT. SOAP FACTORY,
BANGALORE.

ಶಿಶುಸಂಬಂಧವಾದ

ಯಕೃತ್ತು ಮತ್ತು ಪ್ಲೀಹದೋಷಗಳಿಗೆ

ಶಿಶುಸಂಬಂಧವಾದ ಯಕೃತ್ತು ಮತ್ತು ಪ್ಲೀಹದೋಷಗಳು ದೇಹದಲ್ಲಿ ಅವರೂಪವಾಗಿ ಬರುವ ಜ್ವರದಿಂದಲೂ ಆಗಾಗ್ಗೆ ಮಲಬದ್ಧತೆಯಿಂದಲೂ ಆರಂಭವಾಗಿ,ಇದು ಗಣನೆಗೆ ಬಾರದೆ ಕ್ರಮೇಣ ಜ್ವರ, ಹೊಟ್ಟೆ ಬೆಳೆಯುವಿಕೆ, ವಾಂತಿ, ಲಕ್ಷಿಸತಕ್ಕ ಮಲಬದ್ಧತೆ ಅಥವಾ ಅನೇಕ ವೇಳೆ ಮಲವಿಸರ್ಜನೆಯುಂಟಾಗುತ್ತದೆ. ಶಿಶುವು ತನ್ನ ರುಚಿಯನ್ನೂ, ಉಲ್ಲಾಸವನ್ನೂ ಕಳಕೊಳ್ಳುತ್ತದೆ ಮತ್ತು ಕರ್ಕಶ ಸ್ವಭಾವಿಯೂ, ಕೃಶವೂ ಆಗುತ್ತಾ ಬರುತ್ತದೆ. ಮೋರೆಯು ಸಪ್ಪನಾಗಿ ಮೂತ್ರವು ಬಣ್ಣವನ್ನು ಹೊಂದಿ ಅದನ್ನು ಅಲ್ಲಿಯೇ ಅರಲು ಬಿಟ್ಟರೆ ಬಿಳಿ ಮಂಡಲವನ್ನು ಬಿಡುತ್ತದೆ. ಮಲವು ಬಹಳವಾಗಿಯೂ, ದೀರ್ಘವಾಗಿಯೂ, ಕೆಸರಿನಂತೆಯೂ ಆಗಿ ಪಚ್ಚೆಯಾ ಬಿಳಿ ವರ್ಣವುಳ್ಳದಾಗಿ ದುರ್ವಾಸನೆಯನ್ನು ಕೊಡುತ್ತದೆ.

ಯಕೃತ್ತು ಬಹಳ ನೋವನ್ನುಂಟುಮಾಡುತ್ತದೆ, ಜ್ವರವು ಏರುತ್ತದೆ ಮತ್ತು ಅರಸಿನ ಮುಂಡಿಗೆಯು ಆರಂಭವಾಗುವದು; ಅನಂತರ ವೃದ್ಧಿಯಾಗಿ, ಚರ್ಮ, ಕಣ್ಣುಗಳು ಮತ್ತು ಮೂತ್ರ ಕಡುಹಳದಿ ಬಣ್ಣವನ್ನು ಹೊಂದುತ್ತವೆ. ಕಾಲುಗಳು, ಕೈಗಳು ಮತ್ತು ಕೆಲವು ಸಲ ಮುಖ ಕೂಡ ಬಾತುಕೊಳ್ಳುತ್ತವೆ. ಹೊಟ್ಟೆಯ ಮೇಲಣ ನರಗಳು ಕಾಣುವಂತೆ ಹೊರಕ್ಕೆ ಬರುತ್ತವೆ. ರೋಗಿಯು ಸರಿಯಾದ ಔಷಧೋಪಚಾರವನ್ನು ಪಡೆಯದಿದ್ದಲ್ಲಿ ಮೂರ್ಚ್ಛಾಸ್ಥಿತಿಯಲ್ಲಿ ಮರಣವನ್ನು ಹೊಂದಬಹುದು.

ಅನೇಕ ವೈದ್ಯಕೀಯ ಜನರು ಈ ರೋಗವನ್ನು ಯಾವ ಔಷಧವೂ ಅಂಕೆಗೆ ತರುವದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದರೆ ರುಜುವಾತುಗಳು ಸಿದ್ಧಾಂತಿಸುವವೇನೆಂದರೆ ಈ ಭಯಂಕರ **ಯಕೃತ್ತು ಮತ್ತು ಪ್ಲೀಹದೋಷಗಳು** ಗುಣಕಾರಿಯಾಗುವ ಔಷಧೋಪಚಾರವೆಂದರೆ ಜನ್ಮಿ ವೆಂಕಟರಮಣಯ್ಯನವರ **ಲಿವರ್ ಕ್ಯೂರ್.**

ಪತ್ರಗಳಿಗೂ ವಿಶೇಷ ಮಾಹಿತಿಗೂ ಬರೆಯಿರಿ:—

ಡಾಕ್ಟರ್ ಜಮ್ಮಿ ವೆಂಕಟರಮಣಿಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಶಲಿಸ್ಟ್
ಮೈಲಾಪುರ್, ಮದ್ರಾಸು

THE
Popular Insurance Co., Ltd.
Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಪ್ರಥಮ ಮೌಲ್ಯವೇತನದಲ್ಲಿಯೇ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/- ಬೋನಸ್ ಹಂಚಲಾಗಿದೆ.

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

Absolute Safety of Investments. Complete Security to Depositors,
Comprehensive and Efficient Service to the Public,
ARE THE OUTSTANDING FEATURES OF

The Canara Industrial & Banking Syndicate, Limited,

(Incorporated in British India.)

THE PIONEER AND HIGHLY PROGRESSIVE COSMOPOLITAN BANK OF
KARNATAKA
With 25 Branches spreading over 8 Districts in South India.

ESTD. 1925.) Head Office:—"Mukunda Nivas", UDIPI.

ANNOUNCEMENT.

We have much pleasure in announcing that two Branches of our Bank have been opened in October, 1936, one at KASARGODE (S. Kanara Dt.) & the other at SAGAR (Shimoga Dt.) on the 24th and on the 29th respectively, where all kinds of Banking business are transacted. It gives us greater pleasure to announce that four more Branches will be opened in 1936 at Byadgi, Prodattur, Tadpatri, and Nandyal on the 29th November, 3rd December, 16th December, and 18th December respectively. The large number of our clients as well as the general public are requested to take advantage of the numerous facilities offered by us at low rates.

"Mukunda Nivas",
UDIPI,
3—11—1936.

P. A. Pai Brothers,
Managing Agents.

THE NEDUNGADI BANK, LIMITED.
ದಿ ನಡುಬೂಡಿ ಬೇಂಕ್, ಲಿಮಿಟೆಡ್,

ಹೆಡ್ ಆಫೀಸ್:—ಕಲ್ಲಿಕೋಟೆ. (ಸ್ಥಾಪನೆ 1899ರಲ್ಲಿ)

ಶಾಖೆಗಳು:—ಒಟ್ಟಪಾಲಂ, ಪಾಲ್ಘಾಟ್, ಬಡಗರ, ತಿರೂರ್, ಎರ್ನಾಕುಳಂ, ತ್ರಿಚೂರ್, ಆಲ್ಲಪ್ಪಿ, ಮಂಗಳೂರು, ತಲಚೇರಿ, ತ್ರಿವೇಂದ್ರಮ್, ಮದ್ರಾಸ್, ಕೊಯಂಬುತ್ತೂರು, ಕೊಚ್ಚಿ, ಮುಂಡೇರಿ, ಕ್ಯೊಲಾಂಡಿ ಮತ್ತೂ ಕುಮಾರಮೆಲ್ಲೂರು

ಇಂಡಿಯದ ಮತ್ತೂ ಬರ್ಮದ ಯಾವತ್ತು ಪ್ರಾಮುಖ್ಯ ಪಟ್ಟಣಗಳಲ್ಲಿಯೂ ಏಜನ್ಸಿಗಳು.

ಪ್ರತಿಯೊಂದು ಬಗೆಯ ಬ್ಯಾಂಕಿಂಗ್ ವಹಿವಾಟುಗಳು.

ಎಲ್ಲ ಠೇವಣಾತಿಗಳಿಗೂ ಆಕರ್ಷಕವಾದ ಬಡ್ಡೀ ದರಗಳು.

ಚೆಯರ್‌ಮ್ಯಾನರು:—ರಾವ್‌ಬಹದೂರ್ ಡಾಕ್ಟರ್ ಪಿ. ಕೆ. ವಾರಿಯರ್, ಮದ್ರಾಸಿನ ಸರ್ಜನ್ ಜನರಲ್ಲರ (ನಿವೃತ್ತ)
ಪರ್ಸನಲ್ ಅಸಿಸ್ಟಾಂಟರು.

ಯಾವತ್ತು ಪತ್ರವ್ಯವಹಾರವೂ ಸೆಕ್ರಟರಿಗಳೊಂದಿಗೆ.

ಈ ವಾರದ ಕಥೆ:—

ನಾಯಿ ಹುಚ್ಚು?

(ಶ್ರೀ. ಬಿ. ಶಂಕರ ಭಟ್ಟ, ವಿದ್ವಾನ್.)

ನಾವು ಹುಚ್ಚರ ಆಸ್ಪತ್ರೆಯನ್ನು ನೋಡಿ ಹಿಂದಿರುಗಿ ಡಾಕ್ಟರರೊಂದಿಗೆ ಅಂಗಳಕ್ಕೆ ಇಳಿದೆವು. ಅಲ್ಲಿ ಒಬ್ಬ ತೆಳ್ಳಗಿನ ಮನುಷ್ಯನು ನಿಂತುಕೊಂಡಿದ್ದನು. ಅವನ ವರ್ತನೆಯು ವಿಚಿತ್ರವಾಗಿತ್ತು. ಒಂದು ಕರಿನಾಯಿಯ ಗೊಂಬೆಯನ್ನು ಹತ್ತಿರ ಇಟ್ಟುಕೊಂಡು ಕೈಯಿಂದ ಚಿಟಿಕೆ ಹಾಕುತ್ತಾ—'ಮೋತೀ, ಮೋತೀ, ಮೋತೀತೀತೀ,' ಎಂದು ಕರೆಯುತ್ತಿದ್ದನು. ಇದನ್ನು ನೋಡಿದ ನಮಗೆ ಅವನ ವಿಷಯವಾಗಿ ಕುತೂಹಲ ಹುಟ್ಟಿತು. 'ಡಾಕ್ಟರರೊಡನೆ ಈ ವಿಚಿತ್ರಮನುಷ್ಯನ ವಿಷಯವಾಗಿ ತಮಗೇನಾದರೂ ಗೊತ್ತಿದ್ದರೆ ದಯಮಾಡಿ ತಿಳಿಸಲಾರಿರಾ?' ಎಂದು ಕೇಳಿದೆವು. ಡಾಕ್ಟರರು ಆ ಮನುಷ್ಯನ ಕಥೆಯನ್ನು ಈ ರೀತಿಯಾಗಿ ಹೇಳಿದರು:—

'ಮಂಗಳೂರಲ್ಲಿ ಒಬ್ಬ ಸಾಹುಕಾರರಿದ್ದಾರೆ. ಅವರ ಹೆಸರು ರಾಮರಾವ್. ರಾಯರ ಮನೆ ಜಪ್ಪಿನ ರೈಲುಸಂಕದ ಸವಿಾಪ ನೇತ್ರಾವತಿಯ ದಡದಲ್ಲಿ. ರಾಯರ ಭಂಡಸಾಲೆ ಬಂದರದಲ್ಲಿ. ಇವನ ಹೆಸರು ದೂಮ. ದೂಮನು ರಾಯರ ಗಾಡಿಯವಾಳು; ದಿಕ್ಕಿಲ್ಲದ ದೂಮನು ಸಣ್ಣದರಲ್ಲಿಯೇ ರಾಯರಲ್ಲಿ ಚಾಕರಿಗೆ ನಿಂತಿದ್ದನು. ದೂಮನು ಸಾಧುಗುಣದವನು; ನಂಬಿಗಸ್ಥನು; ಕಪಟವನ್ನರಿಯದವನು.

ಒಂದು ದಿನ ದೂಮನು ಕಾಯಿಪಲ್ಯ ತರಲಿಕ್ಕಾಗಿ ಮಾರ್ಕೆಟ್ಟಿಗೆ ಹೋಗಿದ್ದನು. ಮಾರ್ಕೆಟಿಂದ ಹಿಂದಿರುಗುವಾಗ ಒಂದು ಕರಿನಾಯಿಯು ಅವನ ಹಿಂದೆ ಬಂತು. ದೂಮನು ಹಿಂದಿರುಗಿ ಅದನ್ನು ಕಣ್ಣುಕೆರಳಿಸಿ ನೋಡಿದನು. ನಾಯಿಯು ಬಾಲವಾಡಿಸಿ ಹಲ್ಲು ಕಿರಿಯಿತು. ಅದಕ್ಕೆ ಆಹಾರವಿಲ್ಲದೆ ಬಹು ದಿನಗಳಾಗಿದ್ದಂತೆ ತೋರುತ್ತಿತ್ತು. ಹೊಟ್ಟೆಯು ಬೆನ್ನಿಗೆ ಹಿಡಿದಿತ್ತು. ಮೊಲೆಗಳು ನೆಲಕ್ಕೆ ಜೋಲುತ್ತಿದ್ದುವು. ಅದು ಹೆಣ್ಣುನಾಯಿ. ದೂಮನು ಮುಂದುವರಿದನು; ನಾಯಿಯು ಹಿಂಬಾಲಿಸಿತು. ಕಲ್ಲು ಹೊಡೆದು ನಾಯಿಯನ್ನೋಡಿಸಲಿಕ್ಕೆ ನೋಡಿದನು. ಕಲ್ಲಿಗೆ ಹೆದರಿ ಸ್ವಲ್ಪ ದೂರ ಓಡಿದ ನಾಯಿ ಪುನಃ ದೂಮನ ಬೆನ್ನು ಹಿಡಿಯಿತು. ದೂಮನು ಎಷ್ಟು ಪ್ರಯತ್ನಿಸಿದರೂ ನಾಯಿಯು ಅವನನ್ನು ಬಿಡಲಿಲ್ಲ. ಆಗ ಅವನಿಗೆ ಅದರ ಮೇಲೆ ದಯೆ ಬಂದು, ಅದನ್ನು ಮನೆಗೆ ಕರೆತಂದನು. ಕುದುರೆಲಾಯದಲ್ಲಿ ಹುಲ್ಲಿನ ರಾಶಿಯ ಮೇಲೆ ನಾಯಿಯನ್ನು ಇರಲಿಕ್ಕೆ ಹೇಳಿದನು. ಅಡಿಗೆಯವನಿಂದ ಇಷ್ಟು ಅನ್ನ ತಂದು ನಾಯಿಗೆ ಇಕ್ಕಿದನು. ಇಂದು ದೂಮನ ಲಾಯದಲ್ಲಿ ನಾಯಿಗೆ ಮೃಷ್ಟಾನ್ನವಾಯಿತು. ನಾಯಿಯು ಅನ್ನ ತಿಂದು ತನ್ನ ಹುಲ್ಲಿನರಾಶಿಯ ಹಾಸಿಗೆಯಲ್ಲಿ ಮುರುಟಿಕೊಂಡಿತು.

ಮರುದಿನ ರಾಯರನ್ನು ಬಂದರಕ್ಕೆ ಗಾಡಿಯಲ್ಲಿ ಕೊಂಡೊಯ್ಯುವಾಗ ದೂಮನು ಹಿಂದಿನ ದಿನದ ನಾಯಿಯ ವರ್ತಮಾನವನ್ನು ಹೇಳಿ ನಾಯಿಯು ಇರಲಿಕ್ಕಾಗಿ ರಾಯರಿಂದ ಅಪ್ಪಣೆ ಪಡೆದುಕೊಂಡನು.

ರಾಯರ ಮನೆಯ ಅನ್ನ ತಿಂದು ತಿಂದು ನಾಯಿಯು ಬೆಳೆಯಿತು. ಮೊದಲು ನೋಡಿದ ನಾಯಿಗೂ ಈಗ ನೋಡುವ ನಾಯಿಗೂ ಬಹಳ ಹೆಚ್ಚುಕಡಿಮೆ. ಬೆನ್ನು ಸೇರಿದ್ದ ಹೊಟ್ಟೆಯು ಉಬ್ಬಿ ನೆಲಮುಟ್ಟುವಂತಾಗಿದೆ. ದೂಮನು ನಾಯಿಗೆ ಪ್ರೀತಿಯಿಂದ 'ಮೋತಿ'ಯೆಂದು ಹೆಸರಿಟ್ಟನು. ಮತ್ತು ಒಂದು ಚರ್ಮದ ಪಟ್ಟಿ ಹೊಲಿಸಿ 'ದೂಮನ ನಾಯಿ ಮೋತಿ' ಎಂದು ಬರೆಯಿಸಿ ಅದರ ಕುತ್ತಿಗೆಗೆ ಕಟ್ಟಿದನು. ದೂಮನು ರಾಯರನ್ನು ಗಾಡಿಯಲ್ಲಿ ಕುಳ್ಳಿರಿಸಿ ಬಂದರಕ್ಕೆ ಹೊರಟಾಗ ನಾಯಿಯು ಅತನೊಡನೆ ಗಾಡಿಯ ವರೆಗೆ ಬಂದು ವಿದಾಯವೀಯುತ್ತಿತ್ತು. ಹಾಗೆ ಅವನು ಗಾಡಿ ತೆಗೆದುಕೊಂಡು ಮನೆಗೆ ಹಿಂದಿರುಗುವಾಗ ಕಾಲು ಹಲ್ಲು ಕಿರಿದು ಬಾಲವಾಡಿಸಿ ಸ್ವಾಗತವೀಯುತ್ತಿತ್ತು. ಯಲ್ಲಿ ಯಾವ ಕೊರತೆಗಳೂ ಸುರುವಿನಲ್ಲಿ ಕಂಡು

ಹೋಗುತ್ತಾ ಮೋತಿಯು ನೆರೆಕರೆಯ
ೇಮಪಾಶದಿಂದ ಬಂಧಿಸಿತು.
ೀಮಕ್ಕಾಗಿ ನಾಯಿಗಳು
ಬೊಬ್ಬೆಯಿಂದ
ಿಯಲ್ಲ.
ದ

ಮು
ವ್ಯಾ

ಎಂದೆರ್ಯ. ದೂಮನು ಮರುಮಾತಿತ್ತದೆ ಅದನ್ನು ಯಾರಿಗಾದರೂ ನೆರೆಯವರಿಗೆ ಕೊಡಲು ಆಶಿಸಿದನು. ಮೋತಿಯನ್ನು ಅರಿತವರು ಅದನ್ನು ಇಟ್ಟುಕೊಳ್ಳಲು ಇಚ್ಛಿಸಲಿಲ್ಲ. ಕಡೆಗೆ ದೂಮನು ಅದನ್ನು ಒಂದು ಮೋಟಾರ್ ಲೋರಿಯಲ್ಲಿ ಹಾಕಿ ಎಲ್ಲಿಗೋ ಕಳುಹಿದನು. ಆದರೆ ದೂಮನು ಬೆಳಗ್ಗೆ ಕುದುರೆಗೆ ಹುಲ್ಲು ಹಾಕಲಿಕ್ಕೆ ಹೋದಾಗ ಮೋತಿಯು ಹುಲ್ಲಿನ ರಾಶಿಯಿಂದೆದ್ದು ದೂಮನ ಪಾದಕ್ಕೆ ಬಿದ್ದಿತು. ನಾಲ್ಕು ದಿನ ಕಳೆಯಿತು. ರಾಯರು 'ಆ ನಾಯಿಯನ್ನು ಎಲ್ಲಿಯಾದರೂ ದೂರಕ್ಕೆ ಕಳುಹಿಸೋ' ಎಂದರು. ದೂಮನು ೨ ರೂಪ್ಯಾ ಖರ್ಚು ಮಾಡಿ ರೈಲುಹತ್ತಿಸಿ ಕಾಸರಗೋಡಿಗೆ ಕಳುಹಿಸಿದನು. ಮೂರನೆ ದಿನ ಬೆಳಗಾಗುವ ಮೊದಲೇ ಮೋತಿಯು ರಾಯರ ಮನೆಯನ್ನು ಸೇರಿತ್ತು. ರಾಯರಿಗೆ ನಾಯಿಯ ಮೇಲೆ ಕನಿಕರ ಹುಟ್ಟಿತು. ದೂಮನಿಗೆ ನಾಯಿಯ ಮೇಲಿನ ಪ್ರೀತಿ ಹೆಚ್ಚಾಯಿತು.

ಇಂದು ರಾಯರಲ್ಲಿ ಮಹಾಲಯ. ಅಡಿಗೆಯವರು ಮಿಂದು ಮಡಿಯುಟ್ಟು ಅಡಿಗೆಯ ಕೆಲಸದಲ್ಲಿ ತೊಡಗಿದ್ದರು. ಮೋತಿಯ ಪ್ರಿಯನೊಬ್ಬನು ಅಡಿಗೆಕೋಣೆಗೆ ನುಗ್ಗಿದನು. ಶಾಕ ಪಾಕಗಳನ್ನೆಲ್ಲಾ ಮೂಸಿ ಭ್ರಷ್ಟಮಾಡಿದನು. ರಾಯರಿಗೆ ದೂರು ಹೋಯಿತು. ರಾಯರಿಂದ ತಡೆಯಲಾಗಲಿಲ್ಲ, ಅವರು ಕೂಡಲೇ ದೂಮನನ್ನು ಕರೆದರು. 'ಇಂದು ಸಂಜೆಯ ಒಳಗೆ ಮೋತಿಯನ್ನು ಕುತ್ತಿಗೆಗೆ ಕಲ್ಲು ಕಟ್ಟಿ ನೇತ್ರಾವತಿಗೆ ಬಿಸಾಡದಿದ್ದರೆ ನಿನ್ನ ನೀರು ಇಂದಿಗೆ ಮುಗಿಯಿತೆಂದು ತಿಳಿ' ಎಂದು ರಾಯರ ಸುಗ್ರೀವಾಜ್ಞೆಯಾಯಿತು.

ದೂಮನು ಮಾತಿಲ್ಲದಾದನು. ಇಷ್ಟು ಪ್ರೀತಿಯಿಂದ ಸಾಕಿದ ನಾಯನ್ನು ಬಿಡಬೇಕೇ? ಅಲ್ಲಿ ಬಾಲ್ಯದಿಂದ ಅನ್ನ ತಿಂದು ಬೆಳೆದು ಬೇರು ಬಿಟ್ಟ ರಾಯರ ಮನೆಯನ್ನು ಬಿಡಬೇಕೆ? ಏನೇ ಇರಲಿ, ರಾಯರನ್ನು ಬಿಡಬಾರದು. ನಾಯಿ ಮೊನ್ನೆ ಬಂದದ್ದು, ಅಲ್ಪ ಪ್ರಾಣಿ, ಹೋದರೆ ಹೋಗಲಿ. ದೂಮನು ಇಷ್ಟು ಯೋಚಿಸಿ ಬೀದಿಯಲ್ಲಿ ತಿರುಗಲಿಕ್ಕೆ ಹೋಗಿದ್ದ ನಾಯಿಯನ್ನು ಕರೆದು ತನಗಾಗಿ ಕೊಟ್ಟಿದ್ದ ಗಂಜಿಯನ್ನು ಅದಕ್ಕಿರಿದನು. ಆ ಮೇಲೆ ಒಂದು ಹಗ್ಗ ಹಾಕಿ ಅದನ್ನು ಹೊಳೆಯ ಬದಿಗೆ ಎಳೆದುಕೊಂಡು ಹೋದನು. ಹಗ್ಗದ ಒಂದು ತುದಿಗೆ ಕಲ್ಲುಗುಂಡೊಂದನ್ನು ಕಟ್ಟಿದನು. ಒಂದು ಕ್ಷಣ ಯೋಚಿಸಿದನು. ಘನಸ್ಸು ಬಾರದು. ರಾಯರ ಅಪ್ಪಣೆಯು ಪ್ರೇರೇಪಿಸಿತು. ನಾಯಿಯನ್ನು ಕಡೆಯ ಬಾರಿ ಮುತ್ತಿಟ್ಟು ಅಪ್ಪಿಕೊಂಡು ಹೊಳೆಗೆ ಎತ್ತಿ ಹಾಕಿದನು. ಮೋತಿಯು ಈಜಲಿಕ್ಕೆ ಪ್ರಯತ್ನಿಸಿತು. ಆಗಲಿಲ್ಲ. ಕಲ್ಲು ನಾಯಿಯನ್ನು ಮುಳುಗಿಸಿತು. ನೀರೊಳಗಿಂದ ಗುಳುಗುಳು ಶಬ್ದ ಹೊರಟು ನೀರ ಮೇಲೆ ಗುಳ್ಳೆಯೆದ್ದಿತು. ದೂಮನು ವಿಚಾರಶೂನ್ಯನಾಗಿ ಮರಗಟ್ಟಿದನು. ಕಾರ್ಖಾನೆಯಿಂದ ೫ ಗಂಟೆಯ ಬಿಗಿಲು ಕೇಳಿಸಿತು. ದೂಮನಿಗೆ ಎಚ್ಚರವಾಯಿತು. ದೂಮನು ವೋರೆ ಬಾಡಿಸಿಕೊಂಡು ಮನೆಗೆ ಬಂದನು. ಒಂದೆರಡು ದಿನ ಆಲಸ್ಯದಿಂದಿದ್ದನು. ದಿನ ಕಳೆಯಿತು.

ದೂಮನು ೨ ತಿಂಗಳು ಕಳೆದ ಮೇಲೆ ಧನಗಳೊಂದಿಗೆ ಬಂಟವಾಳಕ್ಕೆ ಹೋದನು. ಅಲ್ಲಿ ಮಧ್ಯಾಹ್ನದಲ್ಲಿ ಹೊಳೆಯಲ್ಲಿ ಈಜಲಿಕ್ಕೆ ಹೋದನು. ಈಜುತ್ತಾ ಹೊಳೆಯ ನಡುವಿಗೆ ಹೋದಾಗ ಕಪ್ಪಾದ ಯಾವುದೋ ಒಂದು ಪ್ರಾಣಿಯು ಮುಳುಗಿ ಏಳುತಿತ್ತು. ದೂಮು ಆ ಪ್ರಾಣಿಯನ್ನು ಹಿಡಿದನು. ಅದೊಂದು ನಾಯಿ, ಅದರ ಪ್ರಾಣವು ಹೋಗಿತ್ತು. ಆದರೆ ಅದು ಕುತ್ತಿಗೆಯಲ್ಲಿ ದೂಮನು ಮೋತಿಯ ಕುತ್ತಿಗೆಗೆ ಹಾಕಿದ್ದ ಚರ್ಮದ ಪಟ್ಟಿಯಿತ್ತು. ಅದನ್ನು ನೋಡಿದ ದೂಮನಿಗೆ ತಲೆ ತಿರುಗಿತು. ನೀರಿಂದ ಮೇಲೆ ಬಂದನು. ಬರುವಾಗ ದೂಮನ ಅವಸ್ಥೆಯು ಈ ಸ್ಥಿತಿಗೆ ಬಂತು.' ಕಥೆ ಮುಗಿಯಿತು.

(ವೋಷಾಸಾಂತ)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

"ಗೊನೊಕಿಲರ್"
(ರಿಜಿಸ್ಟರ್ಡ್)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರಪಥಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೆಳುಪು ಹರಿಯುವಿಕೆ ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ನಕಲಿ ಮುದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ECONOMY

The Practice of rigid economy will make you a better businessman, a better man to your family and friends and a better citizen generally. We do not encourage any one to be stingy. But many persons have never stopped to consider, that between practicing economy and being stingy there is a vast difference.

A BANK ACCOUNT HERE WILL HELP YOU TO SAVE MONEY SENSIBLY.

THE PALAI CENTRAL BANK, LTD.,
(INCORPORATED IN TRAVANCORE.)
BUNDER ROAD, MANGALORE.
London Agents— Lloyds Bank, Ltd.
New York— National City Bank of New York

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಸಂಜಸ್ಸು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

THE RADHA BANK, LTD.
MANGALORE. (*Branch*)
'TEMPLE VIEW' GANAPATHI TEMPLE ST., WEST.

ದಿ ರಾಧಾ ಬೇಂಕ್, ಲಿಮಿಟೆಡ್,
ಮಂಗಳೂರು. (ಬ್ರಾಂಚ್)
'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ.

ಚಾಲ್ತಿ ಠೇವಣಾತಿಗಳು ಸಾ। ಶೇ। 2½.
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ। ಶೇ। 4.
ಕಾಯಂ ಠೇವಣಾತಿಗಳು.
3 ತಿಂಗಳ ಬಾಬ್ತು ಸಾ। ಶೇ। 3. 6 ತಿಂಗಳ ಬಾಬ್ತು ಸಾ। ಶೇ। 4½. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾ। ಶೇ। 6
ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತವೆ.
ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೂಡಾ ಕೊಡುತ್ತದೆ
H. S. RAMA RAO, *Manager.*




ಹರಳೆಣ್ಣೆ ಯೊಡನೆ
CASTOPHENE
COMPOUND
CASTOR OIL
CHOCOLATES
A delicious Chocolate Laxative.
ಕೆಸ್ಟೊಫೇನಿನೊಡನೆ
ಕೆಸ್ಟೊಫೇನ್
ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಅದರ್ಶಪ್ರಾಯದ್ದೂ, ಇನ್ನೊಂದನ್ನು ಪೂರ್ಣವಾಡಿದ್ದಾರೆ—ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು. ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಅದರೆ ವೃದ್ಧರಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ.
CASTOPHENE
CASTOR OIL CHOCOLATES

ಕೇರಳದ ಸಾಬೂನುಗಳು

ಪೂರ್ಣವಾಗಿಯೂ ಅವು ಸ್ವದೇಶಿಯಾದುದರಿಂದಲೇ ನೀವು ಉಪಯೋಗಿಸಿರೆನ್ನುವುದಲ್ಲ; ಅವೇ ಉತ್ಕೃಷ್ಟವಾದುವು. ಅವು ಉತ್ಕೃಷ್ಟವಾದ ಸಾಧನಗಳಿಂದ, ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:—ಶ್ರೀ. ಸಿ. ದಲಾಲ್, ಕಲ್ಲಿಕೋಟೆ.

ದಿ ಝಾಂಡು ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಮುಂಬಾಯಿ

ಜೀವಕಾಲದಲ್ಲೆಲ್ಲ ಆರೋಗ್ಯವಾಗಿರಲಿಕ್ಕೂ, ಆರೋಗ್ಯಕರವಾದ ದೀರ್ಘ ಜೀವನಕ್ಕೂ
ಝಾಂಡೂರವರ ಕೇಸರೀ ಜೀವನವನ್ನೇ ಸೇವಿಸಲು ಆರಂಭಿಸಿರಿ.
ನೂತನ ದೇಹದಾರ್ಢ್ಯವನ್ನೂ, ಹೊಸ ಶಕ್ತಿಯನ್ನೂ, ಧಾರಾಳವಾದ ರಕ್ತವನ್ನೂ ಉಂಟುಮಾಡುವ ಆದರ್ಶಪ್ರಾಯವಾದ 'ಟಾನಿಕ್' ಇದು.

ಝಾಂಡೂರವರ ಕೇಸರೀ ಜೀವನ

ಇದು, ವಕೀಲರು, ವಿದ್ಯಾರ್ಥಿಗಳು, ಪ್ರೊಫೆಸರುಗಳು ಇವರೇ ಮೊದಲಾದ ಮೆದುಳಿನ ಕೆಲಸ ಮಾಡುವವರಿಗೂ ಬಹಳ ಉಪಯೋಗಕರವಾಗಿದ್ದು ಅವರ ಮೆದುಳಿನ ಶಕ್ತಿಯನ್ನು ಹೆಚ್ಚಿಸುವುದೂ ಅಲ್ಲದೆ, ಜ್ಞಾಪಕಶಕ್ತಿಯನ್ನೂ ವೃದ್ಧಿಗೊಳಿಸುತ್ತದೆ.

1 ಪೌಂಡಿನ ಬುಡ್ಡಿ 1ಕ್ಕೆ ರೂ. 5—0—0. ½ ಪೌಂಡು ರೂ. 2—12—0.
¼ ಪೌಂಡು ರೂ. 1—9—0.

ನಮ್ಮ ಸೋಲ್ ಏಜಂಟರಲ್ಲಿ ದೊರಕುತ್ತವೆ. ನಮ್ಮ ಸಬ್ ಏಜಂಟರುಗಳಲ್ಲಿಯೂ ದೊರಕುತ್ತವೆ:—
(1) ಷಾ ಅಂಡ್ ಕೋ., ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು.
(2) ಪಿ. ಎ. ಪೈ ಬ್ರದರ್ಸ್, ಉಡುಪಿ. (3) ವಿ. ವಿ. ಶೆಣೈ, ಕಾರ್ಕಳ.
ಏಜೆನ್ಸಿ ಪರತ್ರುಗಳಿಗೆ ಸೋಲ್ ಏಜೆಂಟರಿಗೆ ಬರೆದುಕೊಳ್ಳಿ:—
ದಾಮೋದರ್ ಅಂಡ್ ಕೋ., 78, ಚೈನಾ ಬಜಾರ್ ರೋಡ್, ಮದ್ರಾಸ್.

'ಕಂಠೀರವ' ಪತ್ರಿಕೆಗೆ ಇಂದೇ ಚಂದಾದಾರರಾಗಿರಿ!

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರ ಭಾಷಣ.

(ಮುಂದುವರಿದುದು)

(ತೆರಿಗೆಪಾರರಿಂದ ಬಂದ ಹುಟ್ಟುವಳಿ.)

ವೆಚ್ಚದ ಬಾಬಿನಲ್ಲಿ, ಕಳೆದ ಜೂನ್ ಅಧಿವೇಶನದ ಭಾಷಣ ಮಾಡಿದಾಗ್ಗೆ, ಆಗ ನಡೆಯುತ್ತಿದ್ದ ಮುಖ್ಯವಾದ ಕೆಲವು ಹೊಸ ಕಟ್ಟಡಗಳ ಕಾಮಗಾರಿಗಳ ವಿಚಾರವನ್ನು ಸೂಚಿಸಿದ್ದೆನು. ಆ ಕಟ್ಟಡಗಳನ್ನು ಕಟ್ಟುವ ಕೆಲಸವು ಬೇಗ ಬೇಗ ಮುಂದುವರಿಯುತ್ತಿದೆ.

ರಸ್ತೆಗಳನ್ನು ಉತ್ತಮ ಪಡಿಸುವ ಕೆಲಸವೂ ನಡೆಯುತ್ತಿದೆ. ರಸ್ತೆಗಳ ಮೇಲುಮೈಗೆ ಕೀಲೆಣ್ಣೆ ಗಚ್ಚಿನ ದವ್ಮಸು, ಬಿಟ್ಯುಮೆನ್ ಗಚ್ಚಿನ ದವ್ಮಸು, ಮುಂತಾದುವುಗಳನ್ನು ಮಾಡಿಸುವುದು; ಜನಸಂಚಾರವು ಹೆಚ್ಚಾಗಿರುವ ಊರುಗಳ ಬಳಿಯಲ್ಲಿ ಮುಖ್ಯ ಮಾರ್ಗದಿಂದ ಬೇರೆ ಸೀಳು ಮಾರ್ಗಗಳನ್ನೇರ್ಪಡಿಸಿ ಅವು ಆಯಾ ಊರಿನ ಹೊರಗಡೆಯೇ ಸಾಗಿ ಮತ್ತೆ ಮುಖ್ಯ ಮಾರ್ಗಕ್ಕೆ ಸೇರುವಂತೆ ಏರ್ಪಡಿಸುವುದು; ಸೇತುವೆಗಳನ್ನು ಕಟ್ಟಿಸುವುದು; ಮುಂತಾದ ಕಾಮಗಾರಿಗಳೆಲ್ಲ ರಸ್ತೆಗಳ ಮೇಲ್ವಾಟನ ಕಾರ್ಯಕ್ರಮದಲ್ಲಿ ಸೇರಿವೆ. ನೀರಾವರಿ ಕಾಮಗಾರಿಗಳ ವಿಚಾರವನ್ನಂತು ನಾನು ಈ ಮೊದಲೇ ಸೂಚಿಸಿದ್ದೇನೆ. ಕೇವಲ ಪ್ರಾಸಂಗಿಕವಾಗಿ ನಾನು ಮತ್ತೊಂದು ಕಾಮಗಾರಿಯನ್ನೂ ಇಲ್ಲಿ ಸೂಚಿಸಬಹುದಾಗಿದೆ. ಅದು ನಮ್ಮ ದೇಶದ ಶಿಲ್ಪಕಲಾ ಸಂಪತ್ತನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಲು ಬೇಲೂರಿನ ಶ್ರೀ ಚನ್ನಕೇಶವಸ್ವಾಮಿ ದೇವಾಲಯಕ್ಕೆ ಮಾಡುತ್ತಿರುವ ರಕ್ಷಣೆ ಕಾಮಗಾರಿಯ ವಿಚಾರ. ಅಲ್ಲಿಯ ಕಲ್ಲು ವಿಭಜನೆ ಹೊಂದಿ ಕೆತ್ತನೆ ಕೆಲಸವು ಅಳಿದು ಹೋಗದಂತೆ ಮಾಡುವುದಕ್ಕಾಗಿ ನಿಪುಣರ ಸಮಿತಿಯೊಂದು ಏರ್ಪಟ್ಟಿದೆ. ಆ ಸಮಿತಿಯ ಮೇಲ್ವಿಚಾರಣೆಯಲ್ಲಿ ಕೆಲಸ ನಡೆಯುತ್ತಿದೆ. ಅದಕ್ಕಾಗಿ ನಾವು ೨೨,೦೦೦ ರೂಪಾಯಿಗಳನ್ನು ವೆಚ್ಚಮಾಡಲು ಉದ್ದೇಶಿಸಿದ್ದೇವೆ.

ವಿದ್ಯುಚ್ಛಕ್ತಿ ಇಲಾಖೆ.

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಗೆ ಗಿರಾಕಿ ಹೆಚ್ಚುತ್ತಿರುವ ಅಂಶವನ್ನು ಆಗಲೇ ಶ್ರುತಪಡಿಸಿದ್ದೇನೆ. ಇನ್ನೂ ಭಾರಿ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವಂತೆ ಮಾಡುವ ಉದ್ದೇಶದಿಂದ,, ಸರ್ಕಾರದವರು ಕೃಷ್ಣರಾಜಸಾಗರದಲ್ಲಿ ಶೇಖರವಾಗತಕ್ಕ ನೀರಿನ ಮಟ್ಟವು ೧೨೦ ಅಡಿಗಳಿಂದ ೧೨೪ ಅಡಿಗಳಿಗೆ ಹೆಚ್ಚುವ ಹಾಗೆ ಏರಿಯನ್ನು ಎತ್ತರಿಸುವ ಏರ್ಪಾಡನ್ನು ಮಂಜೂರು ಮಾಡಿದ್ದಾರೆ. ಹೀಗೆ ನೀರಿನ ಮಟ್ಟವು ಹೆಚ್ಚಿದಾಗ್ಗೆ ಮತ್ತಷ್ಟು ಪ್ರದೇಶವು ಮುಳುಗಡೆಗೆ ಬರುತ್ತದೆ. ಹದಿನೇಳು ಗ್ರಾಮಗಳ ಜಮೀನುಗಳು ಮುಳುಗಡೆಯಾಗುವುದಾಗಿ ಅಂದಾಜಾಗಿದೆ. ಹೀಗೆ ಜಮೀನುಗಳನ್ನು ಕಳೆದುಕೊಂಡ ಕುಟುಂಬಗಳವರಿಗೆ ಅವಕ್ಕೆ ಪ್ರತಿಯಾಗಿ ತಕ್ಕ ಜಮೀನುಗಳನ್ನು ಕೊಟ್ಟು ಅವರು ಅವುಗಳನ್ನು ಬೇಸಾಯ ಮಾಡಲು ಬೇರೆ ಸ್ಥಳಗಳಿಗೆ ಹೋಗಿ ನೆಲಸುವಂತೆ ಮಾಡುವುದು ಸೂಕ್ಷ್ಮವಾದ ಮತ್ತು ಕಷ್ಟವಾದ ಕೆಲಸ. ಅದನ್ನು ನೆರವೇರಿಸುವುದಕ್ಕೂ, ಅವರಿಗೆ ತೊಂದರೆಯಾಗದಂತೆ ಆ ರೀತಿ ಯೋಗ್ಯವಾದ ಜಮೀನುಗಳನ್ನು ಕೊಡುವುದಕ್ಕೂ, ಅವಶ್ಯಕವಾದ ಏರ್ಪಾಡುಗಳು ನಡೆದಿವೆ.

ಇದೇ ಸಂಬಂಧದಲ್ಲಿ, ವಿದ್ಯುಚ್ಛಕ್ತಿ ತಯಾರಿಯ ೯ನೆಯ ಯಂತ್ರಸ್ಥಾಪನೆಯು ಶಿವನಸಮುದ್ರದಲ್ಲಿ ನಡೆಯುವಂತೆಯೂ, ೨,೦೦೦ ಅಶ್ವಶಕ್ತಿಯ ಎರಡು ಯೂನಿಟ್ಟುಗಳ ಯಂತ್ರಗಳಿಗೆ ಬದಲಾಗಿ ೮,೦೦೦ ಅಶ್ವಶಕ್ತಿಗಳ ಒಂದೇ ಯೂನಿಟ್ಟಿನ ದೊಡ್ಡ ಯಂತ್ರವನ್ನು ಸ್ಥಾಪಿಸುವಂತೆಯೂ ಒಂದು ಏರ್ಪಾಡು ಮಂಜೂರಾಗಿದೆ. ಇದಕ್ಕಾಗಿ ೧೨.೬೮ ಲಕ್ಷ ರೂಪಾಯಿಗಳು ವೆಚ್ಚವಾಗಬಹುದೆಂದು ನಿರೀಕ್ಷಿಸಿದ್ದೇವೆ. ಹೊಸ ಹೊಸದಾಗಿ ನಾನಾ ಗ್ರಾಮಗಳಿಗೂ ಪಟ್ಟಣಗಳಿಗೂ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸುವ ಏರ್ಪಾಡು ಮುಂದುವರಿಯುತ್ತಿದೆ. ತಿನವೊಗ್ಲಿ, ಚಿಕ್ಕಮಗಳೂರು, ತರೀಕೆರೆ, ಹಾಸನ, ಹೊಳೆನರಸೀಪುರ—ಈ ಊರುಗಳಿಗೂ ಹಲವು ಗ್ರಾಮಗಳಿಗೂ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸಿದುದಾಯಿತು. ಇದರ ವೆಚ್ಚವೂ ಸೇರಿ ಈ ಬಗೆಯ ಉದ್ಯಮಗಳಿಗೆ ಮೊದಲಿನಿಂದಲೂ ಇದುವರೆಗೆ ವೆಚ್ಚವಾಗಿರುವ ಒಟ್ಟು ಮೊಬಲಗು ೨೬,೧೬,೪೬೨ ರೂಪಾಯಿಗಳು. ಹೀಗೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸುವ ಏರ್ಪಾಡು ಇನ್ನೂ ಮುಂದುವರಿದು ಇತರ ಅನೇಕ ಗ್ರಾಮಗಳಿಗೂ ಪಟ್ಟಣಗಳಿಗೂ ಸೌಕರ್ಯವು ದೊರೆಯಬೇಕೆಂಬುದು ಸರ್ಕಾರದವರ ಆಶೆ. ಆದ ಕಾರಣ ವೆಚ್ಚವಾದ ಬಂಡವಾಳದಲ್ಲಿ ಸೇಕಡ ೧೦ರಂತೆ ಒಟ್ಟು ಹುಟ್ಟುವಳಿಯು ಬರುವ ಭರವಸೆಯಿರುವ ಸ್ಥಳಗಳಿಗೆಲ್ಲ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸಬಹುದೆಂದು ಅಪ್ಪಣೆ ಮಾಡಿ ಆ ಮೂಲಕ ಸೇಕಡಾವಾರನ್ನು ಮೊದಲಿಗಿಂತ ಕಡಮೆಮಾಡಲಾಗಿದೆ. ಕೈಗಾರಿಕೆಯಂತ್ರಗಳಿಗಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುವ ಯಂತ್ರಸ್ಥಾಪನೆಗಳ ಮತ್ತು ಬೆಳಕಿಗಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುವ ಯಂತ್ರಸ್ಥಾಪನೆಗಳ ಒಟ್ಟು ಸಂಖ್ಯೆಯು ೨೬,೬೮೧ರಿಂದ ೩೧,೦೩೨ಕ್ಕೆ ಹೆಚ್ಚಿತು. ಕೈಗಾರಿಕೆಗಳಿಗಾಗಿ, ನೀರಾವರಿಗೆ ನೀರೆತ್ತುವುದಕ್ಕಾಗಿ, ಮತ್ತು ಮೂರಾಟದ ವಸ್ತುಗಳ ಜಾಹಿರಾತು ಕಾರ್ಯಗಳಿಗಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವವರು ಕೊಡಬೇಕಾದ ಮೊತ್ತದ ದರಗಳನ್ನು ತಗ್ಗಿಸಲಾಗಿದೆ. ಬೆಂಗಳೂರು ನಗರದಲ್ಲಿ ಪರಮಾವಧಿ ೨,೦೦೦ ಟೆಲಿಫೋನು ಯಂತ್ರಗಳನ್ನೂ, ಮೈಸೂರು ನಗರದಲ್ಲಿ ಪರಮಾವಧಿ ೬೦೦ ಟೆಲಿಫೋನು ಯಂತ್ರಗಳನ್ನೂ ಇಟ್ಟುಕೊಳ್ಳಲನುಕೂಲಿಸುವಂತೆ ಅವಕಾಶವನ್ನು ಕಲ್ಪಿಸಲು ತಕ್ಕ ಏರ್ಪಾಡುಗಳನ್ನು ಮಂಜೂರು ಮಾಡಿ ಆ ಸಂಬಂಧದಲ್ಲಿ ಶೀಘ್ರ ಶೀಘ್ರವಾಗಿ ಕೆಲಸ ನಡೆಯಿಸುತ್ತಿದ್ದೇವೆ. ಇಲ್ಲಿಯ ಟೆಲಿಫೋನುಗಳಿಂದ ಇಂಡಿಯಾ ಸರ್ಕಾರದ ಹತೋಟಿಯಲ್ಲಿರುವ ಟೆಲಿಫೋನುಗಳೊಡನೆ ಸಂಬಂಧವನ್ನು ಕಲ್ಪಿಸಿ, ಸಂಸ್ಥಾನದ ಹೊರಗಿರತಕ್ಕವರೂ ಸಂಸ್ಥಾನದಲ್ಲಿರತಕ್ಕವರೂ ಪರಸ್ಪರವಾಗಿ ಟೆಲಿಫೋನ್ ಮೂಲಕ ಮಾತನಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶವಿದೆ. ಈ ವಿಷಯದಲ್ಲಿ ಪತ್ರವ್ಯವಹಾರ ನಡೆಯುತ್ತಿದೆ.

ವ್ಯವಸಾಯದ ಇಲಾಖೆ.

ಕಬ್ಬನ್ನು ಕೊರೆಯುವ ಕೀಟಗಳ ಮತ್ತು ಕಾಫಿಗಿಡಗಳನ್ನು ಕೊರೆಯುವ ಕೀಟಗಳ ಹಾವಳಿಯನ್ನು ಅಡಗಿಸುವುದಕ್ಕಾಗಿ ವ್ಯವಸಾಯದ ಇಲಾಖೆಯವರು ನೆರವೇರಿಸಿದ ಪ್ರಯತ್ನಗಳಿಗೆ ಫಲವಾಗಿದೆ. ಆರ್ವಿನ್ ನಾಲಾ ಬಯಲಿನಲ್ಲಿ ಹತ್ತಿ, ನೆಲಗಡಲೆ, ಹೊಗೇಸೊಪ್ಪು ಮುಂತಾದ ವಾಣಿಜ್ಯದ ಬೆಳೆಗಳನ್ನು ಬೆಳೆಯುವುದು ಎಷ್ಟರ ಮಟ್ಟಿಗೆ ಸಾಧ್ಯವೆಂಬುದನ್ನು ಪರೀಕ್ಷಿಸಿ ನೋಡುತ್ತಿದ್ದಾರೆ. ಜವಿೂನುಗಳನ್ನು ಬೇರೆ ಬೇರೆ ಹಂತಗಳಾಗಿ ವಿಂಗಡಿಸಿ ಸರದಿಯ ಮೇಲೆ ಅವುಗಳಲ್ಲಿ ತರಿ, ಖುಷ್ಕಿ ಮುಂತಾದ ಬೆಳೆಗಳನ್ನಿಡುವ ಪ್ರಯೋಗ ಪರೀಕ್ಷೆಗಳು ನಡೆಯುತ್ತಿವೆ. ಜೌಳು ಮಿಶ್ರವಾಗಿರುವ ಜವಿೂನುಗಳ ಕ್ಷಾರವನ್ನು ಹೋಗಲಾಡಿಸಲು ಕಾಕಂಬಿಯನ್ನುಪಯೋಗಿಸಿ ಅವುಗಳಲ್ಲಿ ಚೆನ್ನಾಗಿ ಬೆಳೆಯಾಗುವಂತೆ ಮಾಡುವ ಪ್ರಯತ್ನವು ಮುಂದುವರಿದು ನಡೆಯುತ್ತಿದೆ. ಪರೀಕ್ಷಾರ್ಥವಾಗಿ ವರ್ಜಿನಿಯಾ ಹೊಗೆಸೊಪ್ಪಿನ ಬೆಳೆಯನ್ನಿಟ್ಟು ನೋಡಬೇಕೆಂಬ ವಿಚಾರದಲ್ಲಿ ಸರಕಾರದವರು ಮಂಜೂರು ಮಾಡಿದ ಕಾರ್ಯಕ್ರಮಕ್ಕನುಸಾರವಾಗಿ ಹಲವು ಪ್ರದೇಶಗಳಲ್ಲಿ ಅದರ ವ್ಯವಸಾಯವನ್ನಾರಂಭಿಸಲಾಗಿದೆ. 'ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್' ಎಂಬ ವ್ಯವಸಾಯ ಸಂಶೋಧನೆಯ ಸಂಸ್ಥೆಯವರೊಡನೆ ನಾವು ಸಹಕರಿಸಿ ವರ್ತಿಸುತ್ತಿದ್ದೇವೆ. ನಮ್ಮ ದೇಶದಲ್ಲಿ ಬೆಳೆದ ಯಾವ ಯಾವ ವಸ್ತುಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಮಟ್ಟಿಗೆ ಗಿರಾಕಿ ಇದೆ ಎಂಬ 'ಸರ್ವೇ' ಪರಿಶೀಲನೆಯೊಂದು ಅವರ ನೇತೃತ್ವದಲ್ಲಿ ನಡೆಯುತ್ತಿದೆ. ಹಣ್ಣಿನ ಗಿಡಗಳ ವ್ಯವಸಾಯಕ್ಕೆ ಸಂಬಂಧಪಟ್ಟ ಸಂಶೋಧನೆಗಳಿಗಾಗಿ ಆ ಸಂಸ್ಥೆಯವರು ದಯವಿಟ್ಟು ಗ್ರಾಂಟು ಮೊಬಲಗನ್ನು ಕೊಟ್ಟಿದ್ದಾರೆ. ಈ ಸಂಶೋಧನೆಗಳಿಗಾಗಿ ತಕ್ಕ ಏರ್ಪಾಡುಗಳು ನಡೆಯುತ್ತಿವೆ. ಸಂಶೋಧನೆಗಳ ('ರಿಸರ್ಚ್') ಕಾರ್ಯಕಲಾಪಗಳೊಡನೆ ನಮ್ಮ ಸಂಸ್ಥಾನದ ವ್ಯವಸಾಯದ ಇಲಾಖೆಯಲ್ಲಿ ನಡೆಯಬೇಕಾದ ಸಾಮಾನ್ಯ ಕಾರ್ಯಕಲಾಪಗಳೂ ಹೆಚ್ಚಿರುವುದು ಸಂತೋಷಕರವಾಗಿದೆ. ಉತ್ತಮವಾಗಿ ಫಸಲನ್ನು ಕೊಡುವ ಬೀಜಗಳ ಮೂರಾಟನವನ್ನು ಹೆಚ್ಚಿಸಲಾಯಿತು; ಕಾಫಿಗಿಡಗಳು, ಅಡಕೆಮರಗಳು ಮುಂತಾದುವುಗಳಿಗೆ ಕ್ರಿಮಿಕೀಟಗಳ ಬಾಧೆಗಳೂ ರೋಗಗಳ ಹಾವಳಿಯೂ ತಪ್ಪುವಂತೆ ಔಷಧದ್ರವ್ಯಗಳನ್ನು ಪಿಚಕಾರಿ ಯಂತ್ರಗಳಿಂದ ಎರಚುವ ಕೆಲಸವೂ ಹೆಚ್ಚಾಗಿ ನಡೆಯಿತು. ಇವುಗಳಿಂದ ಉತ್ತಮವಾದ ಫಲಿತಾಂಶಗಳು ದೊರೆತಿವೆ.

ಫಲಪುಷ್ಪ ವ್ಯವಸಾಯದ ಇಲಾಖೆಯವರು ಗ್ರಾಮಗಳ ಮತ್ತು ನಗರಗಳ ಅಲಂಕಾರವನ್ನು ಹೆಚ್ಚಿಸುವ ನಾನಾ ಕಾರ್ಯಗಳನ್ನು ನೆರವೇರಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದುವುಗಳು ಇವು: ಬೆಂಗಳೂರು ನಗರದಲ್ಲಿರುವ ಲಾಲ್ ಬಾಗ್ ಉದ್ಯಾನದ ಮತ್ತು ಅದರಲ್ಲಿದ್ದ 'ಗ್ಲಾಸ್ ಹೌಸ್' ಕಟ್ಟಡದ ಬಡಾವಣೆ; ಗ್ರಾಮಪಂಚಾಯಿತಿ ಉದ್ಯಾನಗಳ ಏರ್ಪಾಡು; ಸಾರ್ವಜನಿಕ ಸ್ಥದೇಶಗಳಲ್ಲಿ ಅಲ್ಲಲ್ಲಿ 'ಫೌಂಟನು'ಗಳೆಂಬ ಮನೋಹರವಾದ ಜಲಧಾರಾ ಯಂತ್ರಸಾಧನಗಳ ಸ್ಥಾಪನೆ; ಮತ್ತು ನಂದೀದುರ್ಗಕ್ಕೆ ಹೋಗುವ ರಸ್ತೆಯ ಮೇಲ್ವಾಟು. ನಂದೀದುರ್ಗದ ಮೇಲಕ್ಕೆ ಮೋಟಾರುಕಾರು ಮುಂತಾದುವುಗಳು ಹೋಗಲನುಕೂಲಿಸುವಂತೆ ಇಷ್ಟರಲ್ಲೇ ರಸ್ತೆಯು ಸಿದ್ಧವಾಗುವುದಾಗಿದೆ.

(ಮುಂದುವರಿಯುವುದು)

ಸೊಕ್ಕಿದ ನರಗಳಿಗೆ ಪಟುತ್ವವೀವುದು

ಜೀರ್ಣಶಕ್ತಿ ಮತ್ತು ದೇಹಬಲ ಹೆಚ್ಚಿಸುವ ಔಷಧಗಳಲ್ಲಿ ಅಲೆಂಬಿಕ್ ಹೆಮೋ ದ್ರಾಕ್ಸೋಮಾಲ್ಟ್ ಶ್ರೇಷ್ಠವಾದದ್ದು.

ಇದು ಬಲವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸಿ ನರಗಳಿಗೆ ಪಟುತ್ವವನ್ನು ಕೊಡುವುದೇ ಅಲ್ಲದೆ ಜೀವನಸೌಖ್ಯವನ್ನನುಭವಿಸಲು ಸಹಾಯಮಾಡುವುದು.

ಹೆಮೋ-ದ್ರಾಕ್ಸೊ-ಮಾಲ್ಟ್

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್.

ಮುಂಬಯಿ ಬರೋಡಾ ಮದರಾಸು.

"ಹತ್ತು ಗಂಟೆಯಷ್ಟೆಯೆ, ಅಷ್ಟರಲ್ಲಿಯೇ ನನ್ನ ಒಗೆಯುವ ಕಲಸವೆಲ್ಲ ಮುಗಿಯಿತು—501 ಸಾಬೂನಿಗೆ ವಂದನೆ."

501 ಸಾಬೂನು

ಹಣವನ್ನು ಉಳಿಸುತ್ತದೆ—ಬಟ್ಟೆಯನ್ನು ಕಾಪಾಡುತ್ತಿದೆ-ಕೆಲಸವನ್ನು ಉಳಿಸುತ್ತಿದೆ.

ಟಿವ್ಮೊ ಸೇಲ್ಸ್ ಶಾಖೆ TOMCo ಪೋ. ಬಾಕ್ಸ್ 528 ಬೊಂಬಯಿ

ದಿ ತಾತಾ ಆಯಿಲ್ ಮಿಲ್ಸ್ ಕೊ., ಲಿಮಿಟೆಡ್, ತಾತಾಪುರಂ ಮತ್ತು ಬೊಂಬಯಿ.

ಬಿಳೀ ಕುಷ್ಠ ಮತ್ತು ತೊನ್ನು.

ಈ ಔಷಧದ ಕೆಲವೇ ದಿನಗಳ ಲೇಪನವು ಬಿಳೀ ಕುಷ್ಠ ಮತ್ತು ತೊನ್ನನ್ನು ಸಂಪೂರ್ಣವಾಗಿ ಗುಣಪಡಿಸುವುದು. ನೂರಾರು ಹಕೀಮರು, ಡಾಕ್ಟರರು, ಕವಿರಾಜರು ಮತ್ತು ಜಾಹೀರಾತುಗಾರರಿಂದ ನಿಷ್ಫಲವಾಗಿದ್ದರೂ, ಈ ಔಷಧ ಲೇಪನದಿಂದ ಈ ಭಯಂಕರ ರೋಗಗಳಿಂದ ಪಾರಾಗಿರಿ. ಗುಣಕಾರಿಯಲ್ಲವೆಂದು ನಿಶ್ಚಾಂತಿಸಿದಲ್ಲಿ ರೂ. 500 ಬಹುಮಾನ. ಕ್ರಯ ರೂ. 1—8—0.

Vaidyaraja Birendra Prasad,
No. 11, P. O. Katrisarai, GAYA.

DIAMONDS! DIAMONDS!
BEST BRILLIANCY!

K. R. K. SHET,

Near Mission High School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟ್ಯಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಶಾಖೆಯು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಬಿಳೇ ತೊನ್ನು—
ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನು ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮುಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಸೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidya Raj Akhil Kishore Ram,
No. 223, P. O., Katri Sarai. (GAYA).
8, 11-2. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಮೋಡರ್ನ್ ಡ್ಯಾಮಂಡ್ಸ್.

MODERN DIAMONDS

ಅಧುನಿಕ ಕ್ರಮದಂತೆ ಸಾಣೆ ಹಿಡಿದ ಈ 'ನವೀನ ಮಾದರಿಯ ವಜ್ರಗಳು' ಹೃದಯರಂಜಿಸುವಂಥ ಶುಭ್ರ ಪ್ರಕಾಶದಿಂದ ಹೊಳೆಯುತ್ತಿದ್ದು ಅವನ್ನು ಧರಿಸುವವರ ಅಂಗಸೌಂದರ್ಯವನ್ನು ಅತಿಶಯವಾಗಿ ಹೆಚ್ಚಿಸುತ್ತಿವೆ.

ಕಲ್ಕತ್ತೆಯ ಹಂಗಾಮಿ ಚೀಫ್ ಜಸ್ಟೀಸರಾದ ಮಾನ್ಯ ಸರ್. ಎಮ್. ಎನ್. ಮುಖರ್ಜಿಯವರ ಅಭಿಪ್ರಾಯ.

ಈ ಅತ್ಯಪೂರ್ವವಾದ ವಜ್ರಗಳು, ಸ್ವಾಭಾವಿಕವಾದ, ಬಹಳ ಬೆಲೆಯುಳ್ಳ, ಅಪರೂಪವಾದ, ಅಮೂಲ್ಯ ರತ್ನಗಳಿಗೇ ಸರಿಸರಿಯಾಗಿವೆ ಎಂಬೀ ಸಂಗತಿಯು ನನ್ನ ಅನುಭವಕ್ಕೆ ಬಂದಿದೆ, ಸಂತೋಷವಾಗಿದೆ ಎಂಬುದನ್ನು ನಿಮಗೆ ನಾನು ತಿಳಿಸಬೇಕಾಗಿದೆ. ಈ ನಿಮ್ಮ ನಿರ್ಮಾಣವು ಎಲ್ಲರಿಂದಲೂ ಏಕರೀತಿಯಾದ ಮನ್ನಣೆಯನ್ನು ಪಡೆಯುವುದಲ್ಲದೆ, ನಿಮ್ಮ ಉದ್ಯೋಗಕ್ಕೂ, ಹಿಂದೀ ಸಾಹಸಕಾರ್ಯಕ್ಕೂ ಯಶಸ್ಸನ್ನೂ ಸಂಪಾದಿಸಿ ಕೊಡುವಲ್ಲಿಯೂ ಎಂದೂ ವಿಫಲವಾಗಲಾರದೆಂದೂ ನಾನು ನಂಬುತ್ತೇನೆ.
ವಿಚಾರಿಸಿದಲ್ಲಿ ಎಲ್ಲ ವಿವರಗಳನ್ನೂ ಉಚಿತವಾಗಿ ಒದಗಿಸಲಾಗುವುದು.

C. C. Acharyulu & Son,
Jewellers and Gem Experts,
Post Box No. 543, Park Town, Madras.

ಆರ್. ಮಾರ್ಟಿನ್ಸ್‌ರ

ಆಸ್ತಮೊಡಾಯನ್

ಈ ಪಚ್ಚು ಔಷಧವು ಬಹಳ ಕಾಲದಿಂದ ಉಪಯೋಗಿಸಿದ ಮತ್ತು ಅತೀ ಭಯಂಕರವಾದ ಕಫ, ಕೆಮ್ಮು, ದಮ್ಮು, ನೆಗಡಿ, ಗಂಟಲುನೋವು ಎಜೆನೋವು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶ ಮಾಡಿ ಉಸುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಶುಭ್ರ ಮಾಡುತ್ತದೆ. ಈ ಔಷಧದ ಪೂರ್ಣ ಗುಣಸಿಕ್ಕಬೇಕಾದರೆ ಒಂದೇ ಬಾಟ್ಲಿ ಮುಗ್ಸಿ ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ತೆಗೆದುಕೊಂಡವರಿಗೆ ಮೇಲೆ ವಿವರಿಸಿದ ಕಾಯಿಲೆಗಳು ಪುನಃ ಹಿಡಿಸುವುದಿಲ್ಲ. 60 ಗುಳಿಗೆಗಳ ಒಂದು ಬಾಟ್ಲಿಗೆ ಕ್ರಯ ರೂ. 1—4—0
12 ಬಾಟ್ಲಿಗಳಿಗೆ ಕ್ರಯ ರೂ. 13—8—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.,

Head Office: **MADRAS.** { ESTABLISHED: 1906. } Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:—

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

A Modern Way

A CURRENT Account saves you time and steps. The Bank keeps for you an excellent receipt—your paid cheque. And your cheque book gives you the whole story of just where every pie goes. It is a complete record on which to build your budget. Consider the advantages of this modern way to handle money and start a Current Account with any one of the offices of this Bank.

The Travancore National Bank, Ltd.

INCORPORATED IN TRAVANCORE 1912.
Head Office: ALLEPPEY.

Paid up Capital & Reserves ...	... Rs.	13,71,000
Deposits ...	... Rs.	1,49,00,000
Total Resources ...	... Rs.	1,84,00,000



ಕೋಯಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೭೭೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. ಮಸ್ಕೆ ಲವೆಂಡರ್—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.

೩. ಅನಂಸ್ ಸ್ನೋ—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. ಬ್ರಿಲಿಯೆಂಟಾಯಿನ್—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. ಬ್ರಾಹ್ಮೀ ಶೈಲ—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. ಟ್ರಾಕ್ಲಾಸೆವ—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ್ಮು, ಇತ್ಯಾದಿಗಳಿಗೆ ಅತ್ಯುತ್ತಮ. ದ್ವೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. ಆರಾಮೇತಿಹಾಲ್—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. ವೆಜಿಟೇಬಲ್ ಹೈನ್-ಹಂಟರ್—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳ ಗೋಸ್ಕರ ಕೂಡಿಯತಕ್ಕ ಔಷಧ.

೯. ರತ್ನಾಂಜನ ಹೇನ್ ಬಾಮ್—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. ಕ್ರೀಸೋರಿಂಗಾ—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. ಓಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್—ಕೇಶಗಳಿಗೋಸ್ಕರ ಗುಲಾಬಿಯ ಪುಷ್ಪರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

ಕಳೆದ ವಾರ

ಇಂಡಿಯಕ್ಕೆ ಬರಬೇಕಾದ ವಿಲಾಯಿತಿ ಪಂಡಿತರಲ್ಲಿ

ಇಬ್ಬರಾಗಲೇ ಇಲ್ಲಿಗೆ ತಲುಪಿರುವರು. ಇವರು ಬ್ರಿಟನಿನ ಕೃಷಿಶಾಸ್ತ್ರಪಂಡಿತರಾದ ಸರ್ ಝಾನ್ ರಸಲ್ ಮತ್ತೂ ಡಾ॥ ರೈಟ್‌ರವರು. ಕೆಲವು ವಾರ, ಇವರು ಭಾರತದಲ್ಲಿರುವರು; ನಮ್ಮ ದೇಶದ ಕೃಷಿಯ ಸ್ಥಿತಿಯ ಅನುಭವ ಪಡೆಯುವರು; ಆ ಮೇಲೆ ಬ್ರಿಟನಿನಲ್ಲಿಯೂ, ಇತರ ದೇಶಗಳಲ್ಲಿಯೂ ಅನುಸರಿಸಲಾಗುವ ಕ್ರಮಗಳಂತೆ, ಇಲ್ಲಿಯೂ ಕೆಲವು ಕೃಷಿಯ ಸುಧಾರಣೆಗಳನ್ನು ಸೂಚಿಸುವರು. ವಸ್ತುತಃ ಅವರು ನಮಗಾಗಿ ಮಾಡುವುದನ್ನೆಲ್ಲ, ಕೆಲವು ವಾರಗಳಲ್ಲೇ, ಹೆಚ್ಚಾದರೆ, ಕೆಲವು ತಿಂಗಳಲ್ಲೇ ಮುಗಾಡಿ ಹೋಗುವರು. ಆದರೆ, ಈ ಕುರಿತು, ನಾವೊಂದು ಮಾತನ್ನು ಮರೆಯಬಾರದು. ಹಿಂದೆ, ಇದೇ ಕೃಷಿಯ ಸಂಬಂಧವಾಗಿ, ರಾಯಲ್ ಕಮಿಶನ್ ಒಂದು ವಿಪರ್ಟ್ಟಿದ್ದು, ಆ ಕಮಿಶನಿನವರು ಭಾರತದ ಕೃಷಿಯ ಸುಧಾರಣೆಯ ಕುರಿತು ಎಷ್ಟೋ ಅಮೂಲ್ಯ ಸೂಚನೆಗಳನ್ನು ಕೊಟ್ಟಿದ್ದರಷ್ಟೆ. ಆದರೆ ಅವುಗಳಲ್ಲಿ ಆಚರಣೆಗೆ ತಂದ ಸೂಚನೆಗಳೆಷ್ಟು? ಎಲ್ಲಿಯೋ ಅಲ್ಪ ಸ್ವಲ್ಪ ಅನ್ನುವಾಗ, ಈ ವಿದ್ವಾಂಸರ ಸೂಚನೆಗಳೂ ನಮ್ಮಲ್ಲಿ ಎಷ್ಟು ಮಟ್ಟಿಗೆ ಮನ್ನಣೆಗೆ ಪಾತ್ರವಾಗುವುವೋ, ಹೇಳ ಕೂಡದಾದರೂ, ನಮ್ಮ ಕೃಷಿಯ ಅಭ್ಯುದಯವನ್ನು ಹಾರೈಸುತ್ತಿರುವ ಮಾನ್ಯ ವೈಸರಾಯ್ ಪ್ರಭುಗಳೇ ಈಗ ನಮ್ಮಲ್ಲಿರುವುದರಿಂದ, ಹಿಂದಿನಿಂದಲೂ ಆ ಸೂಚನೆಗಳಿಗೆ ಎಚ್ಚು ಮನ್ನಣೆ ದೊರಕದಿರದೆಂಬ ಭರವಸೆ ನಮಗೆ ಇದೆ.

× × × × ×

ನಮ್ಮ ಹಿಂದೀ ರೈಲ್ವೇ ಕಮಿಶನಿನ

ಸೃಷ್ಟಿಯೊಂದು ಆಗಿ ಮುಗಿದಿದೆ. ಆಶ್ಚರ್ಯವೆಂದರೆ, ಅದರಲ್ಲಿ ಒಬ್ಬನೇ ಒಬ್ಬ ಭಾರತೀಯನೂ ಇಲ್ಲ. ಈ ಕುರಿತು, ಈ ದೇಶದಲ್ಲಿನ ಬ್ರಿಟಿಷ್ ಬಂಡವಾಳಗಾರರ ಪತ್ರಿಕೆಯಾದ 'ಕ್ಯಾಪಿಟಲ್' ಈ ಕಮಿಶನಿನ ಈ ರೀತಿಯ ನಿರ್ಮಾಣದ ವಿಷಯದಲ್ಲಿ ಟೀಕೆ ಮಾಡುತ್ತ 'ಈ ಕಮಿಟಿಯಲ್ಲಿ ಹಿಂದೀಯ ವ್ಯವಹಾರಜ್ಞರಲ್ಲಿ ಒಬ್ಬರನ್ನೂ ಸೇರಿಸದಿರುವುದರಿಂದ, ಭಾರತಜನತೆಯಲ್ಲಿ ನಿರಾಶೆಯುಂಟಾಗಿದೆ. ಈ ನಿರಾಶೆಯು ಸಕಾರಣವಾದುದು. ಈಗ ಇದರ ವಿಚಾರಕ್ಕೆಂದು ನಿಯಮಿಸಲಾಗಿರುವ ಆ ಇಬ್ಬರು ವಿದ್ವಾಂಸರು, ಎಷ್ಟೇ ಬುದ್ಧಿಶಾಲಿಗಳಾದರೂ, ಎಷ್ಟೇ ಒಳ್ಳೆಯವರಾದರೂ, ಅವರ ಅಲ್ಪಾವಧಿಯ ಸಂದರ್ಶನದಿಂದ, ಹೊಸ ಸಂಗತಿಗಳೇನು ಹೊರಪಡುವುವೋ, ತಿಳಿಯದು' ಎಂದಿದೆ. ಅಷ್ಟೇ ಅಲ್ಲ; ಜನಮತವನ್ನು ಮೀರಿ, ಮತ್ತೊಬ್ಬ ಯುರೋಪೀಯರನ್ನೂ, ದಕ್ಷಿಣ ಆಫ್ರಿಕದ 'ರೈಲ್ವೆಗಳ ಟ್ರಾಫಿಕ್ ಮ್ಯಾನೇಜರ್ ವಿ॥ ಇ. ಎಚ್. ಚೀಡಲ್‌ರವರನ್ನೂ ನೇಮಿಸಿರುವುದು ಅತ್ಯಾಶ್ಚರ್ಯವನ್ನು ಉಂಟುಮಾಡಿದೆ. ಇದರಿಂದ ನಾಳೆ ಬರಲಿರುವ ಸುಧಾರಣೆಗಳ ಕಾಲದಲ್ಲಿಯೂ, ಜನಮತಕ್ಕೆ ಮನ್ನಣೆ ಇಸ್ಟೇ ಎಂದು ನಾವೂ, ನೀವೂ ಊಹಿಸಲು ಅವಕಾಶವಾಗದೇ?

× × × × ×

'ಇಂಡಿಯದಲ್ಲಿ ಜನತೆಯ ಶತ್ರುಗಳಲ್ಲಿ

ಪ್ರಥಮ ಸ್ಥಾನದಲ್ಲಿರುವುದೆಂದರೆ, ಜನರಲ್ಲಿರುವ ವಿದ್ಯಾಹೀನತೆ; ಅದನ್ನು ನಿವಾರಿಸಲು ಸರ್ವತೋಮುಖವಾದ ಪ್ರಯತ್ನಗಳು ನಡೆಯಬೇಕು' ಎಂದರು ಮೈಸೂರು ಕಾನ್ವಕೇಶನಿನ ಕಾಲದಲ್ಲಿ, ಆ ವಿಶ್ವವಿದ್ಯಾಲಯದ ಪ್ರೊ. ಚಾನ್ಸಲರ್ ಡಾ॥ ಮೆಟ್ಕಾಫರು. ಸರಿಯೇ; ಆದರೆ ಈ ಶತ್ರುವಿನ ಸ್ಥಾನ ಮಾತ್ರ ಪ್ರಥಮದ್ದಲ್ಲವೆಂದು ನಾವು ಭಾವಿಸುತ್ತೇವೆ. ನಮ್ಮ ಜನರ ಮೊದಲನೆಯ ಶತ್ರು ಬಡತನ; ಎರಡನೆಯದು ರೋಗರುಜನೆ; ಮೂರನೆಯದು ಇದೇ ವಿದ್ಯಾಹೀನತೆ. ಈ ಮೂರು ಶತ್ರುಗಳೂ, ದೇಶಕ್ಕೆ ಏಕ ಪ್ರಕಾರವಾಗಿ ಅಪಾಯಕಾರಿಗಳಾಗಿವೆ ಎನ್ನುವಾಗ, ಅವುಗಳನ್ನೆಲ್ಲ ಏಕಕಾಲದಲ್ಲಿಯೇ ಇದಿರಿಸಲು ಯತ್ನಿಸಬೇಕಾದುದು ಅಗತ್ಯವಲ್ಲವೇ? ಕಳೆದ ಒಂದೂವರೆ ಶತಮಾನಗಳಿಂದಲೂ ಈ ಶತ್ರುಗಳು ದೇಶವನ್ನಾಕ್ರಮಿಸಿ, ತಮ್ಮ ದಾಳಿಯನ್ನು ಸಾಧ್ಯವಿರುವಷ್ಟು ಮಟ್ಟಿಗೆ ನಡೆಸಿವೆ. ಇನ್ನೂ ಈಗಲೂ ಈ ಶತ್ರುಗಳನ್ನು ಹೊರಗೋಡಿಸಲು, ಅಥವಾ ಕನಿಷ್ಠಪಕ್ಷ ಅವುಗಳನ್ನು ತಹಬಂದಿಯಲ್ಲಿರಿಸಲು ಪ್ರಯತ್ನಗಳು ನಡೆಯದಿದ್ದರೆ, ಮುಂದೆ ಗತಿ ಏನು?

× × × × ×

ಸಮುದ್ರದ ಎಂಜಿನಿಯರುಗಳ ಸಂಸ್ಥೆಯ

ಔಂದು ವಿೂಟಿಂಗಿನಲ್ಲಿ, ಪಿ. ಅಂಡ್ ಒ. ಕಂಪೆನಿಯ ಚೆಯರ್‌ಮ್ಯಾನ್ ವಿ. ಅಲೆಕ್ಸಾಂಡರ್ ಷಾರವರು, ಬ್ರಿಟಿಶ್ ಹಡಗುಗಳ ಶೋಚನೀಯ ಪರಿಸ್ಥಿತಿಯನ್ನು ವಿವರಿಸಿ, ಬ್ರಿಟಿಶ್ ಸರಕಾರಕ್ಕೊಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಇದು ಆ ಸರಕಾರದ ಮೇಲೆ ಪರಿಣಾಮವಾಗಿ, ಬ್ರಿಟಿಶ್ ಹಡಗುಗಳ ವಿದ್ಯಮಾನವನ್ನು ಸುಧಾರಿಸದೆಂಬುದರಲ್ಲಿ ಅನುಮಾನ ತೋರದು. ಆಗಲೇ, ಬ್ರಿಟಿಶ್ ಸರಕಾರವು, ಈ ಹಡಗುಗಳ ವ್ಯಾಪಾರದ ಹಿತರಕ್ಷಣೆಗಾಗಿ, ವರ್ಷಕ್ಕೆ ೨ ಮಿಲ್ಯ ಪೌಂಡುಗಳ ಸಹಾಯದ್ರವ್ಯವನ್ನು

ESTD. 1906

CANARA BANK,

LIMITED.

OFFICES AT

ALLEPPEY	CHIKMAGALUR	KASARGOD
ARSIKERE	COCHIN	MANGALORE-BUNDER
BADAGARA	COONDAPOOR	MANGALORE-CITY
BANGALORE-CITY	DAVANGERE	MANJESHWAR
BOMBAY-FORT	DODBALLAPUR	MOOLKY
BOMBAY-MANDVI	ERNAKULAM	PAYYANNUR
BUNTWAL	GANGULI	PUTTUR
CALICUT	HUBLI	UDIPI
CANNANORE	KARKALA	

TOTAL WORKING FUNDS RS. 75,00,000

Spleen & Liver Enlargement. ಚಕ್ರಬಿಂದು (ರಿಜಿಸ್ಟರ್ಡ್)

ಮಕ್ಕಳ ಮರಣವನ್ನು ತಪ್ಪಿಸುವುದು. ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಅಜೀರ್ಣ, ಭೇದಿ, ಮಲಬದ್ಧತೆ, ಹಸುರು ನರಗಳು, ಕಾಮಾಲೆ, ಮೈ ಕೈ ಬಾವು, ಕ್ಷೀಣತ್ವಗಳಲ್ಲಿ ಒಂದೇ ವಾರದಲ್ಲಿ ಅತ್ಯಾಶ್ಚರ್ಯಕರವಾದ ಗುಣ ಕೊಡುವುದು. ವರ್ಷಗಟ್ಟಲೆ ಔಷಧವನ್ನು ಕುಡಿಸಿ ವ್ಯಥೆಪಡಬೇಡಿರಿ.

ಪ್ರಧಾನ ವೈದ್ಯರು:—**ಡಾ॥ ಎ. ಎಸ್. ಶ್ರೀನಿವಾಸ ರಾವ್, ಯಂ. ವಿ. ಪ್ರಾಸಾದಿಕ ಔಷಧಾಲಯ, ಶಿವಮೊಗ್ಗ. ಸಿಟಿ ಜನರಲ್ ಮೆಡಿಕಲ್ ಏಜನ್ಸಿ, ಬೆಂಗಳೂರು.**

ಕಿವುಡರಿಗೆ

"ಡೆಫ್‌ನೆಸ್ ಕಿಲ್ಲರ್" ಕಿವುಡತನವನ್ನೂ, ಕಿವಿಗೆ ಸಂಬಂಧಿಸಿದ ಇತರ ಎಲ್ಲ ರೋಗಗಳನ್ನೂ ಶಾಶ್ವತವಾಗಿ ಗುಣಪಡಿಸುವ ಹೊಸದೊಂದು ಅತ್ಯಾಶ್ಚರ್ಯಕರವಾದ ಔಷಧ. ಕಿವುಡತನವು ಎಷ್ಟೇ ಹಳೆಯದಾಗಿರಲಿ, ಅದು ಯಾವ ಸಂದೇಹವೂ ಇಲ್ಲದೆ, ಯಾವತ್ಕಾಲಕ್ಕೂ ಗುಣವಾಗುವುದು ಮತ್ತೂ ಕಿವುಡರು ಸಂಪೂರ್ಣವಾಗಿಯೂ, ಸ್ಪಷ್ಟವಾಗಿಯೂ ಕೇಳಲು ಆರಂಭಿಸುವರು. ಕಿವುಡತನವು ಸ್ವಲ್ಪವಾಗಿರಲಿ, ಪಾರ್ಶ್ವದ್ದಾಗಿರಲಿ, ಸಂಪೂರ್ಣವಾಗಿರಲಿ, ಅದು ಕಠಿಣವಾದ ನೆಗಡಿಯಿಂದಲೇ ಆಗಲಿ, ಜ್ವರದಿಂದಲೇ ಆಗಲಿ, ಮುದುಡಿಹೋದ ನರಗಳಿಂದ ಅಥವಾ ಗಂಟಲಿನ, ಮೂಗಿನ ಇಲ್ಲವೆ ಒಳಗಿನ ಅವಯವಗಳ ತೊಂದರೆಗಳಿಂದಲೇ ಉಂಟಾಗಿರಲಿ—ಏನೂ ಚಿಂತ್ಯವಿಲ್ಲ. ಕಿವಿ ಸೋರುವುದು ಕೂಡ ಇದರಿಂದ ನಿಲ್ಲುವುದಲ್ಲದೆ, ಸ್ಪಷ್ಟವಾಗಿ ಕೇಳುವ ಶ್ರವಣಶಕ್ತಿಯು ಶಾಶ್ವತವಾಗಿ ಹಿಂದಿರುಗುವುದು. ಈ ದಿವ್ಯೌಷಧದಿಂದ ಸಾವಿರಾರು ಮಂದಿ ಕಿವುಡರು ಯಶಸ್ವಿಯಾಗಿ ಗುಣಹೊಂದಿದ್ದಾರೆ. **ಬೆಲೆ ರೂ. 5. ಪೋಸ್ಟೇಜ್ ಆಣೆ 7.**

MAHAMBS TRADING COMPANY OF ASIA, Indian Depot, P. O. Box 2186, Bombay.

ನೀಡುತ್ತ ಬಂದಿದ್ದರೂ—ನೋಡಿ,—ಸ್ಪರ್ಧೆಯ ದಿಸೆಯಿಂದ ಅಲ್ಲಿನ ವರ ದೂರು; ಅಧಿಕಾರವಾಣಿಯ ಅವರ ಎಚ್ಚರಿಕೆ! ಅದೇ ಇಂಡಿಯದಲ್ಲಿ ಏನಾಗಿದೆ? ನವೆಂಬರ ತಾ. ೫ರಲ್ಲಿ, ಬೊಂಬಯಿಯಲ್ಲಿ, 'ಸಿಂಧ್ಯಾ ಹೌಸಿ'ನ ಶಂಕುಸ್ಥಾಪನೆ ಮಾಡುತ್ತ, ಶ್ರೀ. ಭಲ್ಲುಭಾಯ್ ದೇಸಾಯಿಯವರು, ಷಾರವರಂತೆಯೇ, ಈ ದೇಶದ ಹಡಗುಗಳ ದುರವಸ್ಥೆಯ ಕುರಿತೂ ಸವಿಸ್ತಾರವಾಗಿ ನಿವೇದಿಸಿದರು. 'ಸ್ಪರ್ಧೆಯ ಮೇಲಾಟ'ದಿಂದ ಇಲ್ಲಿ ನಡೆಯುವ ಅನರ್ಥಗಳನ್ನು ಪ್ರಸ್ತಾವಿಸಿದರು. ಈ ಮೇಲಾಟದಿಂದ, ಹಲವು ಹಡಗು ಕಂಪೆನಿಗಳು ತಮ್ಮ ಬಾಗಿಲನ್ನು ಮುಚ್ಚಿದವೆಂದರು. ಏನು ಫಲ? ಷಾರವರ ಅಧಿಕಾರವಾಣಿಯಂತೆ ಇಂಡಿಯದಲ್ಲಿ ಈ ಮಾತು ನಡೆದೀತೇ? ನಡೆಯುವುದಿದ್ದರೆ, ಹಲವು ಬಾರಿ ಮುಂದೆ ಬಂದ ಈ ಹಡಗು ಸಂಸ್ಥೆಗಳ ಗೋಳನ್ನು ಪರಿಹರಿಸಲು ಯಾರೂ ಪ್ರಯತ್ನಿಸಿಲ್ಲವೇಕೆ? ಇತರ ದೇಶಗಳಲ್ಲಿ ಹಡಗು ಸಂಸ್ಥೆಗಳ ವಿಚಾರದಲ್ಲಿ ಅಲ್ಲಿನ ಪ್ರಭುತ್ವದವರು ಪ್ರತ್ಯೇಕವಾದ ಶ್ರದ್ಧೆ ಇರಿಸುವರೆಂಬುದು ನಿಜವಾದರೂ, ಆ ಭಾಗ್ಯ ಇಂಡಿಯಕ್ಕಿಲ್ಲವೆಂಬುದರಿಂದಲೇ ಏನು,—ನಮ್ಮ ಹಡಗಿನ ಗೋಳು ಆಗಾಗ ಗುಡುಗಿ ಗುಡುಗಿ ಅಲ್ಲಲ್ಲಿಯೇ ಅಡಗಿಹೋಗುತ್ತಿದೆ?

× × × × ×

'ಡೆಮೊಕ್ರೆಸಿಯಲ್ಲಿಯೇ ದೃಢವಿಶ್ವಾಸ' ಎಂಬುದು

ಅಮೇರಿಕದಲ್ಲಿನ ಪ್ರೆಸಿಡೆಂಟ್ ರೂಸ್‌ವೆಲ್ಟರ ಅಧ್ಯಕ್ಷ ಪದವಿಯ ಚುನಾವಣೆಯಿಂದ ಖಚಿತವಾಗುತ್ತಿದೆ. ಪೋಲುಗಳಲ್ಲಿ ರೂಸ್‌ವೆಲ್ಟರಿಗೆ, ಅತ್ಯಧಿಕ ಸಂಖ್ಯೆಯ ಓಟುಗಳು ದೊರಕಿವೆ. ಜನತೆಯ ಬಹುಮತದಂತೆ ಅವರು ಪುನಃ ಪ್ರೆಸಿಡೆಂಟರಾಗಿದ್ದಾರೆ. ಇವರ ಇದಿರಾಳಿಗಳಾದ ವಿ. ಲ್ಯಾಂಡನ್‌ರವರು, ಚುನಾವಣೆಯ ರಣಭೇರಿಯನ್ನು ದೊಡ್ಡದಾಗಿ ಬಾರಿಸಿ, ಓಟರರಿಗಿಂತಲೂ ಹೆಚ್ಚು ಸದ್ದನ್ನು ಮಾಡಿದರೂ, ಅವರಿಗೆ ತಮ್ಮ ಜನ್ಮಸ್ಥಾನದ ಸಂಸ್ಥಾನದಲ್ಲಿಯೇ ಬಹುಮತದ ಓಟುಗಳು ಸಿಕ್ಕಲಿಲ್ಲವೆಂದಷ್ಟೇ ಅಲ್ಲ,—ಅವರ ಗವರ್ನರ್ ಪದವಿಯೂ ಜಾರಿ ಹೋಯಿತು. ಆಶ್ಚರ್ಯವೇನು? ರೂಸ್‌ವೆಲ್ಟರ ಆಡಳಿತೆಯಲ್ಲಿ, ಬಡವನಿಗೆ ಜೀವನಕ್ಕೆ ಸೌಕರ್ಯ, ನಿರುದ್ಯೋಗಿಗೆ ಉದ್ಯೋಗ, ಜನರ ಹಿತರಕ್ಷಣೆಗಾಗಿ ಪ್ರಭುತ್ವದ ಮಾರ್ಪಾಟು ಇವಿಷ್ಟೂ ದೊರೆಯಬಹುದೆಂಬ ದೃಢವಿಶ್ವಾಸ ಜನರಲ್ಲಿರುವಾಗ, ' ಲ್ಯಾಂಡನ್ ' ಸಾಹೇಬರಿಗೆ ಜಯವೆಲ್ಲಿ? ಪ್ರೆಸಿಡೆಂಟ್‌ತನವೆಲ್ಲಿ? 'ಇದ್ದುದೂ ಹೋಯ್ತು ಮದ್ದಿನ ಗುಣದಿಂದ' ಎಂದೂ ಆಗಲಿಲ್ಲವೇ?

× × × × ×

ಲಾರ್ಡ್ ಲಿನ್‌ಲಿತ್‌ಗೋರವರು,

ನೀರಾವರಿಯ ಕೇಂದ್ರ ಎಡ್ವೈಜರಿ ಬೋರ್ಡಿನಲ್ಲಿ ಮುಖ್ಯವಾದುದೊಂದು ವಿಷಯದ ಕುರಿತು ಪ್ರಸ್ತಾವಿಸಿದ್ದಾರೆ. 'ವರ್ಷಕ್ಕೆ ೪ ಮಿಲ್ಯದಂತೆ ಇಂಡಿಯದಲ್ಲಿ ಜನಸಂಖ್ಯೆ ಹೆಚ್ಚುತ್ತ, ೧೯೪೧ರಲ್ಲಿ ಪ್ರಜಾಸಂಖ್ಯೆ ೪೦೦,೦೦೦,೦೦೦ರಷ್ಟಾಗುವುದು. ಆಗ ಇಷ್ಟು ಜನರಿಗೆ ಅನ್ನ ದೊರೆಯುವ ಸಂಭವವಿಲ್ಲ. ಆಹಾರ ಸಾಮುಗ್ರಿಗಳ ಬೆಳೆಗಾಗಿ ಈಗ ಇರುವ ಕೃಷಿಕ್ಷೇತ್ರ, ಪ್ರಜಾಸಂಖ್ಯೆಯ ತಲೆಯೊಂದಕ್ಕೆ ಸರಾಸರಿ ಮುಕ್ಕಾಲು ಎಕ್ಕರೆ ಮಾತ್ರ. ಆದ್ದರಿಂದ ಜನಾಂಗದ ಸಂಖ್ಯೆ ಬೆಳೆದು ಬರುವಾಗ ಅನ್ನಾಭಾವ ಉಂಟಾದೀತು.' ಈ ಕಷ್ಟನಿವಾರಣೆಗಾಗಿ, ಸರಕಾರದ ನಾನಾ ಶಾಖೆಗಳೇನೋ ಹಲವು ಪರಿಶೋಧನಾಕಾರ್ಯಗಳನ್ನೇನೋ ನಡೆಸುತ್ತಿವೆ, ನಿಜ; ಆದರೆ ಮುಖ್ಯವಾದ ನೀರಾವರಿ ಕಾಮಗಾರಿಗಳೂ ಧಾರಾಳವಾಗಿ ನಡೆಯಲೇ ಬೇಕಾಗಿದೆ. ಇವು, ಸರಕಾರದ ಉದಾರವಾದ ಧನಸಹಾಯವಿಲ್ಲದೆ ನಡೆವುದು ಹೇಗೆ ಎಂಬುದೇ ತೀರ್ಮಾನಿಸಲಾಗದ ಕಷ್ಟದ ಪ್ರಶ್ನೆಯಲ್ಲವೇ?

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯವಿತ್ತವರ ಪಟ್ಟಿ.

(ಮುಂದುವರಿದುದು)

ರೂಪ್ಯಾ ಎರಡರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಪಠೇಲ ಕುಂಞಂಬು ನಾಯರ್, ಪುಡುಕಾಯಿ; ಅಂಡಾರ್ ಸಯ್ಯದ್ ಅಬ್ದುಲ್ ರಹಿಮಾನ ಸಾಹೇಬ, ಕಾರ್ಕಳ; ಮುದೆರ ಯಾನೆ ಮುತ್ತಪ್ಪ, ನರಿಕೊಂಬು; ಚಂದಯ್ಯ ಕಂಬಳಿ, ಮಹಾಬಲ ಭಂಡಾರಿ, ಮಾಲೊತ್ ಚೆರಿಪಾಡಿ ಕುಂಞಂಬು ನಾಯರ್, ಪಠೇಲ ಶೀನಪ್ಪ ಹೆಗ್ಡೆ, ಸೂಡ; ಶ್ರೀ ದುರ್ಗಾಪರಮೇಶ್ವರಿ, ಉಪ್ಪುಂದ; ಬೈಂದೂರು ಪಠೇಲ ಬುದ್ರು ಸೆಟ್ಟಿ, ಬಿಜೂರು ಶ್ಯಾನುಭಾಗ ಕೃಷ್ಣಯ್ಯ ಹೆಬ್ಬಾರ; ಉಳ್ಳೂರು ಪಠೇಲ ವೆಂಕಪ್ಪ ಸೆಟ್ಟಿ, ಹೇರೂರು ಪಠೇಲ ಚೆನ್ನಪ್ಪ ಸೆಟ್ಟಿ, ಪಠೇಲ ಮಂಜಯ್ಯ ಸೆಟ್ಟಿ, ಕಂಬಾದ್ ಕೋಣೆ; ನಾರಾಯಣ ಮೆರಾಟ, ಹೆರೆಂಜಾಲ್; ಪಠೇಲ ರಾಮಕೃಷ್ಣಯ್ಯ, ಹಡವು; ಇರುವೈಲ್ ಗುಣಪಾಲ ಸೆಟ್ಟಿ, ಜಾನಕಿ ಯಾನೆ ಲಕ್ಷ್ಮಿದೇವಿ, ಪಠೇಲ ಅಣ್ಣು ಮರಿಯ, ಈಡು; ಪಠೇಲ ಅಂತಯ್ಯ ಸೆಟ್ಟಿ, ಕಾಲ್ತೋಡು; ಸಿ. ಕರುಣಾಕರ ನಂಬಿಯಾರ್, ಟಿ. ಸಿ. ಸಿ. ಕೃಷ್ಣ ವರ್ಮ ರಾಜ, ಕಾಂತು ಭಂಡಾರಿ, ಹೇರೂರು; ಕಾವೂರು ಮುತ್ತಯ್ಯ ಹೆಗ್ಡೆ, ತೇಜಾವತಿ ಯಾನೆ ಧರ್ಮಮ್ಮ, ಮಂಡೆಕೋಲ್ ಪಠೇಲ ಯಂ. ಶೇಷಪ್ಪಯ್ಯ, ಎಡಮಂಗಳ ಪಂಚಾಯತ ಬೋರ್ಡು, ಕಿರೋಡಿ ಪಠೇಲ ವೀರಣ್ಣ ಸೆಟ್ಟಿ, ಉದೆನೂರು ಪಠೇಲ ಕುಂಞಂಬು ನಾಯರ್, ಬಾಯಾರ್ ಕೃಷ್ಣ ಭಟ್, ಬಾಯಾರ್ ಕೇಶವ ಭಟ್, ಸೇವಗುರ ರಾಮಚಂದ್ರ ಕಾಮತ್ ಮತ್ತು ಸನ್ಸ್, ಮಂಗಳೂರು; ಮಧೂರು ಪಠೇಲ ಶಂಕರನಾರಾಯಣಯ್ಯ, ಪೆರೋಡಿ ಪಠೇಲ ಪದ್ಮರಾಜ ಸೆಟ್ಟಿ, ನರಿಮೊಗ್ರು ಸುಬ್ರಾಯ, ಗೋಲ್ತಮಜ್ಲು ಕುಂಞ ಸೆಟ್ಟಿ.

ರೂಪ್ಯಾ ಒಂದೂವರೆಯಂತೆ ಕೊಟ್ಟವರು.

ಕಡಬ ಲೋಕಲ್ ಫಂಡ್ ಡಿಸ್ಪೆನ್ಸರಿಯ ನೌಕರರಿಂದ, ಮ. ರಾ. ರಾ.ಗಳಾದ ಪೂವಾನಿ, ನಡ; ದುಗ್ಗಣ್ಣ ಪೆರ್ಗಡೆ, ಕೂವೆಟ್ಟು; ಸಿ. ಶಂಕರನಾರಾಯಣರಾವ್, ವಿ. ಸಿ. ಕೇರಳ ವರ್ಮ ರಾಜ, ಸಿ. ಕೆ. ರಾಘವನ್ ನಂಬಿಯಾರ್, ನಡ ಚೆನ್ನಪ್ಪ ಗೌಡ, ಯಂ. ಇದಿನೆ ಬ್ಯಾರಿ, ಕೂವೆಟ್ಟು; ಜಿ. ಚಂದಪ್ಪ; ನಡ, ದೇವು ಪೂಜಾರಿ, ನಾವೂರು; ಚೆನ್ನ ಗೌಡ, ಅಲಂಕಾರ್; ದುಮಿಂಗ ರುಜಾರಿ ಸೋಸ, ನಡ.

ರೂಪ್ಯಾ ಒಂದೂಕಾಲರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಪಠೇಲ ತ್ಯಾಂಪಣ್ಣ ಶೇಕೆ, ದರ್ಬೆ ವೆಂಕಪ್ಪ ನಾಯ್ಕ.

ರೂಪ್ಯಾ ಒಂದರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಕಂಡ್ಲೂರು ಕಾಸಿವಿೂರ ಸಾಹೇಬ, ನಾರಾಯಣ ಟಿಕ್ಕತ್ತಿಲ್ಲಾಯ ಪುಲ್ಲೂರು, ಕೇಶವ ಕಾರ್ತಾಯರ್, ಗಾಣಿಗ ಅಂಬು, ಬಿ. ಚಿಕ್ಕಯ್ಯ, ಮಾನ ಬಂಟ, ಕೂಡ್ಲು; ಈಶ್ವರ ಶ್ಯಾನುಭಾಗ, ಕೂಡ್ಲು; ಆರ ಲಿತ್ತಾಯ, ಕೂಡ್ಲು; ಲಕ್ಷ್ಮಿ ಅಮ್ಮ ಕೂಡ್ಲು; ಮಧೂರು ಸುಬ್ರಾಯ ಶ್ಯಾನುಭಾಗ, ಗೋಪಾಲಕೃಷ್ಣ ಭಟ್ಟ, ನಾರಾಯಣ ಅಡಿಗ, ಕೆ. ಯಂ. ಸೀದಿ ಕುಂಞಿ, ಕೇಶವ ಕಾಮಡ, ಮುಟ್ಟತ್ತೋಡಿ; ಜಾರಪ್ಪ ಪೂಜಾರಿ, ನರಿಕೊಂಬು; ಪಾಂಡ್ಯಪ್ಪ ಅರಸು, ನರಿಕೊಂಬು; ಯಚ್. ಡಿ. ರಾವ್, ಸುರತ್ಕಲ್; ಶೇಷ ಸೆಟ್ಟಿ; ಯಂ. ಗುದ್ದಣ್ಣ ಆಳ್ವ, ಸೀತಾರಾಮು ಭಟ್ಟ, ಚೇಳ್ಯಾರು ವೀರಭದ್ರ ದೇವಸ್ಥಾನ, ಮಾಲೊತ್ ವಿ. ಕೇಳು ನಾಯರ್, ಮಾಲೊತ್ ಕೊಡೊತ್ ಕುಂಞಿಕಣ್ಣ ನಾಯರ್, ಮಾಲೊತ್ ಕುಂಞಿ ರಾಮನ್ ನಾಯರ್, ಮಾಲೊತ್ ಪಿ. ದೆರ್ಮನ್ ನಾಯರ್, ಮಾಲೊತ್ ಯಂ. ಅಂಬು ಕುಂಞಿ ಚುಲ್ಲ, ಮಾಲೊತ್ ಚೆರು ಪುರಾತ್ ಅರ್ಮುಲ್ಲನ್ ಸಾಹೇಬ, ಚೆರ್ವತ್ತೂರು ಪುಡಿಯಮಾಲಿಗೆಯಿಲ್ ಅಬ್ದುಲ್ ರಹಿಮಾನ್ ಸಾಹೇಬ, ಮಮ್ಮದ್ ಕುಂಞಿ ಸಾಹೇಬ, ತೈಲುಕಂಡಿ ಪುದಿಯಪುರಾಯಿಲ್ ಕುಂಞಿ ಕುಟ್ಟಿಯಾಲಿ ಹಾಜಿ, ಟೆಕ್ಕೆಕೊಲತ್ ಅಬ್ದುಲ್ ಖಾದರ್ ಹಾಜಿ, ವಿ. ಕೆ. ಕುಂಞಿ ಮೊಯಿದಿನ್ ಕುಟ್ಟಿ ಪಡ್ಡೆ, ಪಿ. ವಿ. ಅಬ್ಬು ಬಕ್ಕರಿ ಸಾಹೇಬ, ಪಡ್ಡೆ, ಸುಳ್ಯ ಕುಶಾಲಪ್ಪ ಗೌಡ, ಉಲ್ಪೆ ಶಿವರಾವ್, ಕೃಷ್ಣಯ್ಯ ಪುಣಚ; ಪಠೇಲ ಶಂಕರನಾರಾಯಣಪ್ಪ, ಪುತ್ತೂರು ಕೊಕ್ಕಡ ಯಚ್. ತ್ಯಾಂಪ ನಾಯ್ಕ, ಕೊಳ್ತಿಗೆ ಕೆಮ್ಮಾರ ತ್ಯಾಂಪ ಗೌಡ.

ರೂಪಾಯಿ ಒಂದರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಶ್ರೀನಿವಾಸ ಉಪಾಧ್ಯ, ತಣ್ಣೀರುಭಾವಿ; ಬಿ. ಶಾಮರಾವ್, ಪುತ್ತೂರು; ಎಲ್. ಟಿ. ಸಿ. ಲೋಬೊ, ಪಿ. ಕಣ್ಣನ್, ಮೈಡೈತಿ ಶಿವಣ್ಣ ಗೌಡ, ಮಾಣಿಬೆಟ್ಟು ವೆಂಕಪ್ಪ ಗೌಡ, ಹೊಸಗದ್ದೆ ದೇವಪ್ಪ ಗೌಡ, ಕೆ. ಪಿ. ಮಹಬಲೇಶ್ವರ ಭಟ್ಟ, ಕರೋಪಾಡಿ; ಸಿ. ಬಯ್ಯಣ್ಣ ಗೌಡ, ಐವರ್ನಾಡ್; ಶೇಶಪ್ಪ ಮಾರ್ತ, ಮಾಣಿ; ಲಿಂಗಪ್ಪ ಪೂಜಾರಿ, ಕಯ್ಯೂರ್; ಚೆನ್ನಪ್ಪ ಪೂಜಾರಿ, ಮಚ್ಚಿನ; ಕೊರಾಡಿ ಚೆನ್ನ ಶೇರಿಗಾರ, ಬೆಕಡೆ ಐತಪ್ಪ ಪೂಜಾರಿ, ಕೆ. ಚೆರ್ಡಪ್ಪ ಯಾನೆ ವೆಂಕಟೇಶ ಶ್ಯಾನುಭಾಗ, ಕೆ. ತಿಮ್ಮಯ್ಯ ಚೌಟ, ಪಿ. ನಾರಾಯಣ ಉಪ್ಪುಂತಾಯ, ಎ. ವೆಂಕಪ್ಪ ಪೂಜಾರಿ; ಲೋಕಯ್ಯ ಸೆಟ್ಟಿ, ಕೂವೆಟ್ಟು; ಪಿ. ಮಂಜಪ್ಪ ಗೌಡ, ಗುತ್ತಿಯಡ್ಕ ಕಾಂತಪ್ಪ ಪೂಜಾರಿ, ಪೆರ್ಣಾಲೆ ಚೆನ್ನಣ್ಣ, ಪಾದೆ ಸಿದ್ದ ಗೌಡ, ಗುತ್ತಿನಡ್ಕ ಡೊಂಬ ಪೂಜಾರಿ, ಕೆ. ಕೊರಗ ಸೆಟ್ಟಿ, ಹಾಲೆಕ್ಕಿ ನೇಮು ಮಲ್ಯ; ಕೆ. ನರಸಿಂಹ ಭಟ್ಟ, ಟಿ. ನಾಗೇಶ ರಾವ್, ಜೆ. ಸಿ. ಪಾಲನ್ನ, ಸೆರ್ಕಳ ವೆಂಕ ಮಾಡ, ನರ್ಸ ವೆಂಕಟ್ರಮಣ ಬಲ್ಯುರಾಯ, ಪೂರ್ಲುಪಡಿ ಊವಯ್ಯ ಗೌಡ, ಎರ್ಮೆನಿಲೆ ರಾಮಾಳ್ವ, ಐ. ಹೂವಯ್ಯ ಪೂಜಾರಿ, ಕುಳಾಯಿ.

ಗವರ್ನಮೆಂಟ್ ಕೋಲೇಜು, ಮಂಗಳೂರು, ರೂ. ೫೧೪; ಬೋರ್ಡು ಹಾಯರ್ ಎಲಿಮೆಂಟರಿ ಶಾಲೆ, (ಹುಡುಗಿಯರ) ಕುಂದಾಪುರ, ರೂ. ೧೧೧—೧೨—೨; ಸೈಂಟ್ ಎನ್ಸ್ ಸೆಕೆಂಡರಿ ಟ್ರೈನಿಂಗ್ ಶಾಲೆ ಮತ್ತೂ ಹೈಸ್ಕೂಲ್, ರೂ. ೫೦; ಹೆಡ್‌ಮಾಸ್ಟರ್, ಮಿಶನ್ ಸ್ಕೂಲ್, ಉಡುಪಿ, ರೂ. ೨೬—೬—೦; ಎಡಟರೆ ಕೃಷ್ಣಪ್ಪ ಸೆಟ್ಟಿ, ರೂ. ೨೫; ಜಯಲಕ್ಷ್ಮಿ ಬೇಂಕ್, ಮಂಗಳೂರು, ರೂ. ೧೫; ಬೋರ್ಡು ಹೈ ಸ್ಕೂಲ್, ಮೂಲ್ಕಿ, ರೂ. ೧೩—೧೨—೦; ಬಿಸೆಂಟ್ಸ್ ಹುಡುಗಿಯರ ಶಾಲೆ, ರೂ. ೧೨; ಮಾನಿಪಾಡಿ ಭೀಮ ಭಟ್ಟ, ಬಾಯಾರ್, ರೂಪಾಯಿ ಸೌತ್ ಇಂಡಿಯ ರೇಲ್ವೆಯ ನೌಕರರಿಂದ, ರೂ. ೭—೫—೦; ಬೋರ್ಡ್ ಹೈಸ್ಕೂಲ್, ಮೂಲ್ಕಿ, ರೂ. ೬.

ರೂಪಾಯಿ ಐದರಂತೆ ಕೊಟ್ಟವರು.

ಮೂಡಬಿದ್ರೆ ಗ್ರಾಮು ಪಂಚಾಯತ ಕೋರ್ಟು, ಮ. ರಾ. ರಾ.ಗಳಾದ ರಾಮಕೃಷ್ಣಯ್ಯ, ನರಿಕೊಂಬು; ಯಸ್. ನಾಗರಾಜಯ್ಯ, ಎಡ್ವಕೇಟ್; ಡಾ. ಯಸ್. ಸುಬ್ಬರಾವ್, ಪುಂಜಲ್‌ಕಟ್ಟೆ; ಮಾಲೊತ್ ಪಠೇಲ ಕುಂಞಿ ಕಣ್ಣನ್ ನಾಯರ್, ಗುತ್ತೆದಾರ್ ಕುಂಞಣ್ಣ ಪೂಜಾರಿ, ಅಡೂರು; ಕೊಡೊತ್ ಪಠೇಲ, ಕೆದಂಬಾಡಿ ಪಠೇಲ ಸಾಂತಪ್ಪ ರೈ, ಮಡಿಕ್ಯಾ ಪಠೇಲ ಕೇಳು ನಾಯರ್, ಕೊಡೊತ್ ಪಠೇಲ, ಉಳಿಯತಯ್ಯ ನಾರಾಯಣ ಅರಸು, ಮಧೂರ್; ರೆವೆರೆಂಡ್ ಫಾದರ್ ಎ. ಗೈರಾಗಿ, ನೆಲ್ಲಿಕಾರ್; ಕಡಂದಲೆ ದೇಜು ಸೆಟ್ಟಿ, ರೆವೆರೆಂಡ್ ಫಾದರ್ ಯಲ್. ಪಿ. ಡಿ'ಸೋಸ, ಬೈಂದೂರು.

ರೂಪ್ಯಾ ನಾಲ್ಕರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಮಿತ್ತಬಾಗಿಲು ಪದ್ಮರಾಜ ಸೆಟ್ಟಿ, ಮುಡಾರ್ ಕೊರಗ ಪೂಜಾರಿ, ನಾವೂರು ಮಂಜಪ್ಪ ಆಜ್ರಿ, ಗುರುವಾಯನಕೆರೆ ಪಂಚಾಯತ ಬೋರ್ಡು, ಟಿ. ಕೃಷ್ಣ ಭಟ್ಟ, ಕರೊಪಾಡಿ; ಪೆರಾಡಿ ಗುಮ್ಮಣ್ಣ ಬಲ್ಲಾಳ.

ರೂಪ್ಯಾ ಮೂರರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಕೆಡಿಂಜೆ ತಿಮ್ಮಪ್ಪ ಹೆಗ್ಡೆ, ಚೆರ್ಡಯ್ಯ ಭಟ್ಟ, ಪಠೇಲ, ಕೆರ್ಗಾಲ; ಕೊಲ್ಕೆಬೈಲು ರಾಮಣ್ಣ ಹೆಗ್ಗಡೆ, ಶೆರೆಯೂರ್; ಜಯವತಿ, ಹಲೆಪ್ಪಡಿ.

ಶ್ರೀರಾಮು ಹೈಯರ್ ಎಲಿಮೆಂಟರಿ ಶಾಲೆ, ಫರೆಂಗಿಪೇಟೆ, ರೂ. ೨—೧೨—೦; ಕೆ. ರಾಮಕೃಷ್ಣರಾವ್, ನೀಲೇಶ್ವರ, ರೂ. ೨-೮-೦; ತೆಂಕ ಮಿಜಾರ್ ಪಠೇಲ ಸುಬ್ಬಯ್ಯ ಸೆಟ್ಟಿ, ರೂ. ೩—೯—೦.

(ಮುಂದುವರಿಯುವುದು)



ನಿಮ್ಮ ರಕ್ತವನ್ನು ಪುಷ್ಟಿಗೊಳಿಸಿ
ಕಳೆಗುಂದಿದ ರಕ್ತ ಮತ್ತು ರಕ್ತ ಕೆಡಿನಿಯಾಗಿರುವಿಕೆಯ ಎಲ್ಲಾ ಸಂದರ್ಭಗಳಲ್ಲಿ— ಹೆಪಿಲೆಕ್ಸ್‌ನ ಆಶ್ಚರ್ಯಕರವಾದ ಪರಿಣಾಮವು – ರಕ್ತವನ್ನು ಕ್ರಮಗೊಳಿಸಲೂ ಪುಷ್ಟಿಗೊಳಿಸಲೂ ಅತ್ಯಗತ್ಯವಾಗಿರುವ ತಾಜಾ ಕಲಿಜಸಾರವನ್ನು ಕಬ್ಬಿಣ, ಕ್ವೀನೀನು, ಕ್ಯಾಲ್ಶಿಯಂ, ಪೊಟ್ಯಾಶಿಯಂ ಇತ್ಯಾದಿಗಳೊಡನೆ ಒಳಗೊಂಡಿರುವುದರಿಂದಾಗಿರುತ್ತದೆ. ನೀರು, ಹಾಲು ಅಥವಾ ಹಣ್ಣಿನ ರಸದಲ್ಲಿ ಸೇವಿಸಿ,
ಹೆಪಿಲೆಕ್ಸ್— ತೂಕವನ್ನು ಹೆಚ್ಚಿಸುತ್ತದೆ ಮತ್ತು ಚೈತನ್ಯವನ್ನು ಕಳೆಗೊಳಿಸುತ್ತದೆ.
HEPILEX
HEPILEX
ಸೋಲ್ ಏಜೆಂಟರು:
ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ,
ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,
6, ಫ್ರಿನ್ಸೆಸ್ ಸ್ಟ್ರೀಟ್,- ಮುಂಬಾಯಿ.

ಉಡುಪಿ **ಶ್ರೀ ಕೃಷ್ಣ ಭವನ, ಮಂಗಳೂರು.**

ಹೆಡ್ ಆಫೀಸು:—ವೌಂಟ್ ರೋಡ್, ಮದ್ರಾಸ್

ಬ್ರಾಂಚ್:— ಗಣಪತಿ ಹೈಸ್ಕೂಲಿನ ಸವಿೂಪ

ಅನುಭವಸ್ಥ ಬ್ರಾಹ್ಮಣರಿಂದ ವಿಧಿಯುಕ್ತವಾಗಿ ಸಿದ್ಧಗೊಳಿಸಲ್ಪಡುವ ಉತ್ತಮವಾದ ತಿಂಡಿತಿನಸು ಮತ್ತು ಭೋಜನ!

ವಿದ್ಯುದ್ದೀಪಗಳುಳ್ಳ ಜೊಕ್ಕಟ ಕೊಠಡಿಗಳು. ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು.

ಯಾತ್ರಿಕರಿಗೂ ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸಗೃಹ!

ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ಪೂರ್ಣ ತೃಪ್ತಿಗೊಳಿಸುವಂಥವುಗಳೇ.

ಪ್ರೊಪ್ರೈಟರ್:— ಕೆ. ಕೃಷ್ಣರಾವ್.

'ಧೋಲ್ ಬಜಾವ್'

ಎಲ್ಲಿ ನೋಡಿದ್ರೂ, ಈಗ ಕಾಂಗ್ರೆಸಿನ ಪರವಾಗಿ ಇಲೆಕ್ಶನ್ 'ಧೋಲ್ ಬಜಾವ್' (ನಮ್ಮ ಜಿಲ್ಲಾದೊಳಗೆ) ಸ್ವಾವಿಾ!—'ಅವಳೇ ಇಲ್ಲ; ಆದರೂ ಅಷ್ಟ ಪುತ್ರರು' ಅಂದ ಹಾಗೆ! ದೇವ್ರೂ!

ಅಲ್ಲ, ಸ್ವಾವಿಾ! ಕರ್ನಾಟಕ ಪ್ರಾಂತೀಕ ಕಮಿಟೀ ದೊಳಗಣ ಪುಡಾರಿಗಳು, ನಮ್ಮ ಜಿಲ್ಲಾದ ಹುರಿಯಾಳುಗಳಾಗಿ, (ಅಥವಾ ಹುರಿದಾಳುಗಳಾಗಿ) ಯಾವ ಜಂಟಲ್‌ಮ್ಯಾನರನ್ನ ಆರಿಸಿದ್ದಾರೋ ಇನ್ನೂ ಗೊತ್ತಿಲ್ಲರಿ. ಅಷ್ಟರಲ್ಲೇ 'ನಾನು ಹುಮೇದುವಾರ, ನಾನು 'ಕ್ಯಾಂಡಿಡೇಟ್, ನಾನು ಅಪ್‌ಟುಡೇಟ್' ಅಂತ 'ಧೋಲ್ ಬಜಾವ್' ಆರಂಭವಾಗೈತ್ರಿ!

ಇದೇನ್ರಪ್ಪ! ಆ ಪ್ರಾಂತೀಕ ಕವಿಟೀಯವರು ಏನಾದ್ರೂ ಈ ಉಮೇದ್ವಾರರ ಕಿವೀದೊಳಗೆ 'ನಿಮಗೇ ಪಟ್ಟಾ ಕಟ್ಟೀದೀವಿ' ಎಂತ ಗುಟ್ಟಿನಲ್ಲಿ ಏನಾರಾ ಹೇಳ್ಯಾರೇನು? ಹಾಗೆ ಅವರ ಕಿವೀಲಿ ಮಾತ್ರ ಹೇಳಿದ್ದವರು ನಮ್ಮ ಕವಿ, ನಿಮ್ಮ ಕವೀ ಇವನ್ನಾದರೂ ಯಾತಕ್ಕೆ ಬಿಟ್ಟಿರಬಹುದರಿ? ಜನರು, 'ಮಾಸಸ್' ಅಂದರೆ ಕಾಂಗ್ರೆಸಿನ ತಳಹದಿ; ಕಾಂಗ್ರೆಸಿನ ಮನೇ ದೇವರು. ಅಂದ ಮ್ಯಾಲೆ, ಮನೇ ದೇವರನ್ನ ಹೊರಗಿಟ್ಟ ಈ ಒಳಗಿನ ವ್ಯಾಪಾರ ಎಂಥಾದ್ರಿ? ಹುಮೇದ್ವಾರರು ಹೆಚ್ಚು, ಓಟರರು ಕಡಿಮೆ,—ಕಾಂಗ್ರೆಸಿನ ಕೈಲಿ ಇಂಥಾ ಬೆಪ್ಪುತಕ್ಕಡಿ ಕೂಡ ಇದೆಯೇನ್ರಿ? ದ್ಯಾವ್ರೆ!

ನಮ್ಮ ಸಂಸ್ಥಾನದ ಮಿನಿಸ್ಟರ್, ಮಿಸ್ಟರ್ ರಾಜನ್‌ರವರ ಸನ್ನಿಧಾನಕ್ಕೆ ಇಲ್ಲಿಂದ ಒಂಡು ಡುಪ್ಲಿಟೇಶನ್ ಮದ್ರಾಸಿಗೆ ಡಯೆ ಮಾಡ್ಸಿಕೊಂಡು, ನಮ್ಮಲ್ಲಿ 'ಅಡಿಕೆ ಕೊಳೆ ರೋಗ'ವಿಂದು ಊರೆಲ್ಲಾ ಬರೆಡಾಯ್ತು ಡ್ಯಾವ್ರೆ!' ಎಂತ 'ಧೋಲ್ ಬಜಾವ್' ಮಾಡಿದ್ದ್ರೂ. ಇದು ಗೊತ್ತಸ್ಟೆ!

ಇದರ ಮ್ಯಾಲೆ; ನಮ್ಮ ರೆವಿನ್ಯೂ ಮೆಂಬರರು, ಈ ಕೊಳೆ ರೋಗ ನೋಡಲಿಕ್ಕೆ ಇಲ್ಲಿಗೆ ಬಂದರು; ಆ ಮ್ಯಾಲೆ ಮಂತ್ರಿಗಳೂ ದಯ ಮಾಡಿಸಿದರು. ಇದೂ ಗೊತ್ತಸ್ಟೆ.

ಆದರೆ ಮಂತ್ರಿಗಳು ಬಂದದ್ದು ಜಸ್ಟೀಸ್ ಪಾರ್ಟಿ ಪರವಾಗಿ! ಹೊಸ ಚುನಾವಣೆಯ ಪ್ರಚಾರಕಾರ್ಯ ನಡೆಸಲಿಕ್ಕೆ! ಅಂತ 'ಧೋಲ್ ಬಜಾವ್' ಮಾಡಿಬಿಟ್ಟರು! ಬನ್ನಿ ಅಂತ ಅವರನ್ನು ಅಲ್ಲಿಗೆ ಹೋಗಿ ಕರದದ್ದು ಬೇರೆ; ಅವರು ಅಲ್ಲಿಂದಿಲ್ಲಿಗೆ ಬಂದ ಮ್ಯಾಲೆ ಈ ರೀತಿ ರಂಗು ಹಾಕಿ ದೂರಿದ್ದು ಬೇರೆ. ಬಂದು ಮುಖದಲ್ಲಿ ಎಷ್ಟು ಜಾಯಿ, ಆ ಬಾಯಿಗೆ ಎಷ್ಟು ನಾಲಿಗೆ ಸ್ವಾಮೀ!

ಅಷ್ಟೇ ಅಲ್ಲರಿ; ರೆವಿನ್ಯೂ ಮೆಂಬರ್ ಮಿಸ್ಟರ್ ಸೂಟರ್ ಸಾಹೇಬರು ಇಲ್ಲಿಗೆ ಬಂದ ಕೂಡಲೇ, ಅವರಿಗೆ ಕೊಟ್ಟ ಸಂಭ್ರಮದ ಸ್ವಾಗತವೇನು? ಓ—ಹೊ—ಹೊ! ನಮ್ಮ ಎಂ. ಎಲ್. ಸಿ. ಗಳು ಕೆಲವರು ಆಗ ಬಹಳ ಉಮೇದಿನಲ್ಲಿ ಕುಣಿದಾಡುತ್ತಾ ಇದ್ದರು. ರೈಲ್ವೇ ಸ್ಟೇಶನುಗಳಲ್ಲಿ ನೋಡಿದರೆ ಅವರೇ; ಅಡಿಕೆ ತೋಟಗಳಿಗೆ ಹೋದರೆ ಅಲ್ಲೂ ಅವರೇ! ಏನಿವರ ಪ್ರಜಾ ಸೇವೆ, ಏನಿವರ ದೇಶಾಭಿಮಾನೆ ಅಂತ ಇವರನ್ನ ಆಕಾಶಕ್ಕೇರಿಸಿ ಕೊಂಡಾಡುವ ಹಾಗಿತ್ರಿ—ಅಷ್ಟು ದೊಡ್ಡ ಹೊಗಳಿಕೆ ಕ್ಯಾಟಲಾಗು.

ಆದರೆ, ಮಾನ್ಯ ಮಿನಿಸ್ಟರರು ಇಲ್ಲಿಗೆ ಬಂದಾಗ, ಈ ಎಂ. ಎಲ್. ಸಿ.ಗಳಲ್ಲಿ ಎಷ್ಟು ಮಂದಿ ರೈಲ್‌ಸ್ಟೇಶನಿಗೆ ಹೋಗಿದ್ದರಂತೆ? ಅಡಿಕೆತೋಟಕ್ಕೆ ಹೋಗಿದ್ದರಂತೆ? ನಮ್ಮ ಶ್ರೀ ಸೆಟ್ರಾಗಲೀ, ಭಟ್ರಾಗಲೀ ಹೋಗಿದ್ದರಂತೆಯೇ? ಬನ್ನಿ ಎಂತ ಕರೆದು ಬಂದವರಲ್ಲಿ ಸೆಟ್ರು ಒಬ್ಬರಾಗಿದ್ದರೇನು ಧ್ಯಾವರೆ? ಬನ್ನಿ ಅಂತ ಕರೆಯೋದು ಬೇರೆ, ಬಂದಾಗ ಕಾಣೆ ಆಗುವುದು ಬೇರೆ—ಇದು ಗೃಹಸ್ಥವಾಳಿಕೆಯೋ, ತಿದ್ದಿದ ನಾಗರಿಕ ತತ್ವಗಳ ಅನುಸರಣೆಯೋ? ನಾವಾಗಿ ನಮ್ಮ ಕೆಲ್ಸಕ್ಕೆ ಕರೆದು, ನಾವಾಗ (ನಮ್ಮ ಕಾರಣದಿಂದ?) ಗೈರುಹಾಜರಾದ ಸಂದರ್ಭದಲ್ಲಿ ಇದು (ಮಿನಿಸ್ಟರರನ್ನು) ಮನೆಬಾಗಿಲಿಗೆ ಕರೆದು ಬೇಕೆಂದು ಮಾಡಿದ ಅಪಮಾನವೆಂದು ಹೇಳುವವರು ಹೇಳಲಾರರೇನ್ರಿ? ಹೊಟ್ಟೆಯಲ್ಲಿ ಅಷ್ಟು ಇಷ್ಟಿದ್ದವರು, ಉದ್ದೇಶಪಟ್ಟು ಮಿನಿಸ್ಟರರನ್ನು ಕರೆದದ್ದು ಯಾಕೆ? ಆ ಒಣ ಡೌಲು ಯಾಕೆ? ಅನಂತರ ಜಾರಿದ್ದು ಯಾಕೆ? ಇದರಿಂದ 'ಅಡಿಕೆತೋಟಗಳಿಗೆ ದೊರಕಿದ ಲಾಭ'ದ ಖಂಡಿ ಇಂತಿಷ್ಟೆಂದು ಹೊಸ ಚುನಾವಣೆಯ ಜಾಹಿರಾತಿನಲ್ಲಿಯಾದರೂ 'ಧೋಲ್ ಬಜಾವ್' ಮಾಡಬಾರದೇನ್ರಿ?

ಆದರೆ ಪುಣ್ಯಕ್ಕೆ ನಮ್ಮಲ್ಲಿನ ಕಾಂಗ್ರೆಸಿನ ಪ್ರಮುಖ ಮೆಂಬರರಲ್ಲಿ ಒಬ್ಬರೆಂದು ಆಗಿರುವ ಪುಣ್ಯಾತ್ಮರು ಮಿನಿಸ್ಟರರನ್ನು ತಮ್ಮಲ್ಲಿಗೆ ಊಟಕ್ಕೆ ಕರೆದರಂತಯ್ಯ! ಬಚಾವ್! ಆಗ 'ಜಸ್ಟೀಸ್ ಪಾರ್ಟಿ' 'ಕಾಂಗ್ರೆಸ್ ಪಾರ್ಟಿ' ಎಲ್ಲಾ ಪ್ರಾಯಶಃ ಬೇಂಕಿನಲ್ಲಿ ಡಿಪೋಜಿಟ್ ಇತ್ತಯ್ಯ. ಅಲ್ಲದಿದ್ದರೆ ತಾಜಾ ಕಾಂಗ್ರೆಸ್‌ವಾಲರು, ಜಸ್ಟೀಸ್ ಪಾರ್ಟಿಯ ಮಿನಿಸ್ಟರರನ್ನು ಔತನಕ್ಕೆ ಕರೆಯುವ ಈ 'ಧೋಲ್ ಬಜಾವ್' ಯಾಕೆ ಮಾಡಬೇಕಿತ್ತಯ್ಯಾ? ಅವರನ್ನು ರೈಲ್ವೆ ಸ್ಟೇಶನಿನಲ್ಲಿ ಎದುರ್ಗೊಳ್ಳಲಿಕ್ಕಾಗಿ ಹೋಗದ, ಅವರೊಡನೆ ತೋಟಗಳಿಗೆ ದಯಮಾಡದ ಈ ನ್ಯೂನತೆಗೆ ಇದು ಅರಿಕೆವೋ? ಮೇಲಿಂದ ಮೇಲೆ ಒರೆಸಿದ ಗಿಲೀಟೋ? ವಿಾಸೆಯ ವಾಸಿ ಎಲ್ಲೋ ಇಟ್ಟ ಹಾಗಿದೆಯಲ್ಲ—ಈ 'ವಜಾವಟ್ಟು'? ಕಾಣದ ಪರಿಹಾರಕ್ಕೆ ಔತನದ ಉಪಚಾರವೇ? ಸ್ವಾವಿಾ!

ಅಥವಾ ಈ ಔತನವನ್ನು ಮಾಡಿಸಿದವರಾಗಲೀ, ಭಾಗಿಗಳಾದ ಎಂ. ಎಲ್. ಸಿ.ಗಳಿದ್ದರೆ ಅವರಾಗಲೀ, ಕೊನೆಗೆ ಕೊಂಗ್ರೆಸ್ ಪಕ್ಷದ ಹೊಸ ಕೌನ್ಸಿಲಿನ ಹಳೇ ಉಮೇದುವಾರರಾಗಲೀ, ಒಮ್ಮೆ ಈ ಸಮಾಚಾರದ ಸತ್ಯತೆಯ ಕುರಿತು 'ಧೋಲು ಬಜಾಯಿಸಬಾರದೇ?'

ಶ್ರೀ. ಸೆಟ್ಟರ ಸೆಟ್ಲ್‌ಮೆಂಟಿನ ಸೂಚನೆ ನಮ್ಮ ಮುದ್ರಾಸ್ ಕೌನ್ಸಿಲಿನಲ್ಲಿ ಬಂದಾಗ, ಆಗ 'ಜಸ್ಟೀಸ್ ಪಾರ್ಟಿಯ ಮೆಂಬರರೆಲ್ಲ ನಾವು ಹಾಕಿದ್ದಾರೆ ಎಂತ 'ಧೋಲ್ ಬಜಾವ್' ಮಾಡಿದ್ದಾರ್ರಿ! ಇದು ನಿಜವೇ, ಸ್ವಾವಿಾ? ಆಗ ಸಭೆಯಲ್ಲಿದ್ದ ಮೆಂಬರರಲ್ಲಿ ೧೮ ಮಂದಿ ಜಸ್ಟೀಸ್ ಪಾರ್ಟಿಯವರು, ಈ ಸೂಚನೆಯ ಪರವಾಗಿ ಓಟ್ ಕೊಟ್ಟಿದ್ದಾರೆಂದು ಖಾತ್ರಿ ವರ್ತಮಾನವಿದೆ. ದಾಖಲೆಗಳೂ ಇರಬಹುದು. ಇದು ಸತ್ಯವಾದರೆ, ಈ ಹಸೀ ಹಸೀ ಸುಳ್ಳು ಸುಳ್ಳು 'ಧೋಲ್ ಬಜಾವ್' ಎಲ್ಲಿಂದ ಹೊರಟದ್ದು—ಸತ್ಯವಂತರಾದ (ಕಾಂಗ್ರೆಸ್) ಉಮೇದುವಾರರ ಕಡೆಯಿಂದ ಅಲ್ಲವೆನ್ನಿ—ಯಾರು ಹೇಳಿಯಾರು?

ಹೊಸದಾಗಿ ಚರ್ಮ ಹೊದಿಸಿದ ಈ 'ಇಲೆಕ್ಶನ್ ಧೋಲು' ಅಖಿಲಾಂಡ ಕೋಟಿ, ಬ್ರಹ್ಮಾಂಡನ್ಯಾಕರ ಧೋಲು ಬಹಳ ದೊಡ್ಡದಾಗಿರುತೈತ್ರಿ. ಚರ್ಮ ಕೂಡಾ ಬಹಳ ದಪ್ಪ—ಆಫ್ರಿಕದಿಂದ ತರಿಸಿದ ಫೇಂಡಾ ಮೃಗದ್ದು ಕೂಡ ಅಲ್ಲ! ಈ ಚುನಾವಣೆ ರಣಭೇರಿಗಿನ್ನು ಪುರ್ಸೊತ್ತಿಲ್ಲರಿ. ಅನೇಕ ಮಂದಿಗಳನ್ನ 'ಜಂಟಲ್‌ಮ್ಯಾನ'ರನ್ನಾಗಿ ಮಾಡಿ, ಅವರ ಹೊಗಳಿಕೆಯ ಹಾಡು ಹೇಳುವ ಕೆಲಸ, ಈ 'ಧೋಲ್ ಬಜಾವ್' ಕೆಲಸ, ಈ ಭೇರಿಗೆ ಮುಂದೆ ತುಂಬಾ ಜನರಿ. ಸ್ವಾವಿಾ! ನೀವೆಲ್ಲಾ ಕಿವಿ ಬಿಟ್ಕೊಂಡಿರಿ; ನಾನು ಕಣ್ಬಿಟ್ಕೊಂಡಿರುತೇನ್ರಿ.

BALANCE SHEET OF

Sri Umamaheshwar Temple as at 23-3-1936 (Yuva Samvatsara)

LIABILITIES

	Rs. As. Ps.	Rs. As. Ps.
General fund		
At the beginning of the year	11821-12—5	
Add excess receipts over expenditure as per Income & Expenditure account	538-12—8	12360—9—1
Special Funds:—		
Nithyaseva Fund	3190—0—0	
Dathatriya Devara Fund	955—5—5	
Karthika Deepothsava Fund	1803—6—3	
Shasti Fund	250—0—0	
Upanayana Fund	95—2—0	
Cremation Fund	341—8—6	
Dattajayanthi Fund	1651—5-10	
Mangesh Devara Fund	5025—0—0	13311-12—0
Loan from Jaya Laxmi Bank, Ltd.		500—0—0
Total Rs.		26172—5—1

ASSETS

	Rs. As. Ps.	Rs. As. Ps.
Landed properties at cost	5500—0—0	
Buildings and gardens at cost	7146-13—4	
Thombatkar's property at cost	5025—0—0	17671-13—4
Fixed deposits in Jaya Laxmi Bank, Ltd.		6675—0—0
Deposit in Electric Company		25—0—0
Copper vessels		41-11—6
Rents receivable:—		
(1) Lands	1058—5—0	
(2) Buildings	332-13—2	1391—2—2
Receivable towards Ananthavratha		20—0—0
Current account in Banks		310-13—3
Cash in hand		36-12-10
Total Rs.		26172—5—1

1. (*Sd.*) U. Rama Rao
2. (*Sd.*) L. V. Bhavanishanker Rao
3. (*Sd.*) A. Gopal Bhat

TRUSTEES.

I have examined the above balance sheet with the books and vouchers, verified the cash and securities and hereby certify that the balance sheet is, in my opinion, drawn up in conformity with law and that it exhibits a true and correct view of the state of affairs of the Temple according to the best of my information and explanation given to me and as shown by the books of the Temple.

Mangalore,
26—8—1936.

(*Sd.*) M. S. Krishna Rao,
Certified Auditor.

ವಿದೇಶ

ಸೊಸ್‌ಕವಸ್ಕಿ ಎಂಬ ಗುಪ್ತ ಪೋಲಿಸ್ ನಾಯಕನನ್ನು, ಅತನು ಸ್ಪೇಲಿನನ ಮೇಲೆ ಒಳಸಂಚು ನಡೆಸಿದನೆಂಬ ಕಾರಣದಿಂದ, ಗುಂಡು ಹೊಡೆದು ಕೊಂದರೆಂದು ಬರ್ಲಿನಿನ ನಾಯಿ ಪತ್ರಿಕೆಗಳು ಸಾರಿದ್ದುವು. ಅದು ಸುಳ್ಳೆಂದು ಸೋವಿಯಟ್ಟಿನ ಅಧಿಕಾರಿಗಳು ಹೇಳುತ್ತಿದ್ದಾರೆ.

ಪ್ಯಾರಿಸಿನಲ್ಲಿ ಡಿಪ್ಯುಟಿಗಳ ಜೇಂಬರಿನಲ್ಲಿ ಸುಮಾರು ೧೫೦ ಮಂದಿ ಡಿಪ್ಯುಟಿಗಳು ಸಭೆ ಸೇರಿ ಚರ್ಚಿಸುತ್ತಿದ್ದ ಹಾಗೆ ಭಿನ್ನಾಭಿಪ್ರಾಯ ಉಂಟಾಗಿ, ಮಾತಿಗೆ ಮಾತು ಬಂದು, ಹೊಡೆತಬಡಿತಗಳೂ ಆಗಿಹೋದುವು. ಸಭಾಕಾರ್ಯವು ನಿಲ್ಲಿಸಲ್ಪಟ್ಟಿತು.

ಹಿಂದೂದೇಶದಲ್ಲಿ ಅಧಿಕಾರಿಗಳು ಚುನಾವಣೆಯ ಕಾರ್ಯದಲ್ಲಿ ಕೈ ಹಾಕುತ್ತಾರೆ, ಕಾಂಗ್ರೆಸಿನವರಿಗೆ ವಿರುದ್ಧವಾಗಿ ಕೆಲಸ ನಡೆಯುವಂತೆ ಪ್ರೋತ್ಸಾಹಿಸುತ್ತಾರೆ ಎಂಬುದರ ನಿದರ್ಶನವಾಗಿ, ಸಂಯುಕ್ತ ಪ್ರಾಂತದ 'ಕೋರ್ಟ್ ಆಫ್ ವಾರ್ಡ್ಸ್'ರವರು ಹೊರಡಿಸಿದ ಒಂದು ಸರ್ಕ್ಯೂಲರಿನ ಕುರಿತು ಹಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ, ಮಿ. ಬಟ್ಲರ್ ಸಾಹೇಬರು, ಆ 'ಕೋರ್ಟ್ ಆಫ್ ವಾರ್ಡ್ಸ್' ಆಡೊಂದು ಒಫೀಶಿಯಲ್ ಸಂಸ್ಥೆಯಲ್ಲವೆಂದರು. ಈ ಸಂದರ್ಭದಲ್ಲಿ ಆ ಸಂಸ್ಥೆಯ ಪ್ರೆಸಿಡೆಂಟರೂ, ಸೆಕ್ರಟರಿಗಳೂ ಸರಕಾರದ ಆಫೀಸರರೆಂಬುದೂ ಗಣನೆಗೆ ಬರಲಿಲ್ಲ.

ಇಟೆಲಿಯ ಒಂದು ಬಾಂಬು ಹಾರಿಸುವ ವಿಮಾನವು ತರಸೀನ ಎಂಬಲ್ಲಿ ಮುರಿದು ಬಿದ್ದು, ೪ ಮಂದಿ ಅಧಿಕಾರಿಗಳೂ, ೫ ಮಂದಿ ಗ್ರಾಮಸ್ಥರೂ ಮೃತಪಟ್ಟರು.

ಆಸ್ಟ್ರಿಯಾ ಮತ್ತು ಹಂಗೇರಿ ಸಂಸ್ಥಾನಗಳು, ಆಯುಧಧಾರಣೆಯ ವಿಚಾರದಲ್ಲಿ ತಮಗೆ ಸ್ವತಂತ್ರವಿದೆ ಎಂದು ಪ್ರಕಟಿಸಿದ್ದಾವೆ. ಅಲ್ಲದೆ ಅಬಿಸೀನಿಯದ ಮೇಲಿನ ಇಟೆಲಿಯ ಪ್ರಭುತ್ವವನ್ನು ಅವು ಒಪ್ಪಿಕೊಂಡೂ ಇದ್ದಾವೆ. ಹೀಗೆ ಇಟೆಲಿ, ಜರ್ಮನಿ, ಆಸ್ಟ್ರಿಯ, ಹಂಗೇರಿಗಳು ಒಂದೇ ಸಾಲಿನಲ್ಲಿ ನಿಂತಿರುವುದು ಯುರೋಪಿನ ಇತರ ರಾಷ್ಟ್ರಗಳಿಗೆ ತುಂಬ ಕಳವಳವನ್ನು ಉಂಟುಮಾಡಿವೆ. ಈ ಮಧ್ಯೆ, ರಾಜಕುಮಾರ ಒಟೋ ಹೆಪ್ಸ್‌ಬರ್ಗರನ್ನು ಆಸ್ಟ್ರಿಯದ ಸಿಂಹಾಸನಕ್ಕೇರಿಸುವರೆಂದೂ, ಡ್ಯಾನ್ಯೂಬ್ ಪ್ರಾಂತದ ಪ್ರಶ್ನೆಯನ್ನು ಇತ್ಯರ್ಥಿಸುವಲ್ಲಿ ಅವೆಲ್ಲಾ ಸಂಸ್ಥಾನಗಳು ಒಮ್ಮತದಿಂದ ವರ್ತಿಸುವವೆಂದೂ ವದಂತಿ.

ನಮ್ಮ ಚಕ್ರವರ್ತಿಗಳು ಎರಡು ದಿನ ತಮ್ಮ ಯುದ್ಧನೌಕಾಬಲವನ್ನು ಸಂದರ್ಶಿಸಿದ ಕಾಲದಲ್ಲಿ ಪೋರ್ಟ್‌ಲ್ಯಾಂಡ್ ಬಂದರದ ಬಳಿಯಲ್ಲಿ ಅತ್ಯಪೂರ್ವವಾದ, ಅತ್ಯಂತ ಭೀಕರ ಸ್ವರೂಪದ ಬಿರುಗಾಳಿ ಎದ್ದಿದ್ದರೂ, ಚಕ್ರವರ್ತಿಗಳು ಸುಕ್ಷೇಮಿಗಳಾಗಿ ಹಿಂದಿರುಗಿ ಬಂದುದರಿಂದ ಪ್ರಜೆಗಳೆಲ್ಲ ತುಂಬ ಆನಂದವಾಗಿದೆ.

ಸ್ವೀಡಿಶ್ ಎಕಾಡಮಿಯವರು, ನೋಬಲ್ ಪ್ರಾಜುಗಳನ್ನು ಈ ಕೆಳವರಿಗೆ ಹಂಚಿರುವರು—ಸಾಹಿತ್ಯಕ್ಕಾಗಿ ಅಮೆರಿಕದ ನಾಟಕಕಾರ ಇಯೋನ್ ಒನೆಲ್‌ರಿಗೆ; ಫಿಜಿಕ್ಸ್‌ನ ಬಹುಮಾನ ಇನ್ಸ್‌ಬ್ರುಕ್ ವಿಶ್ವವಿದ್ಯಾಲಯದ ಪ್ರೊ. ವಿ. ಎಫ್. ಹೆಸ್ ಮತ್ತು ಕಾಲಿಫೋರ್ನಿಯನ್ ಟೆಕ್ನೊಲಜಿ ಸಂಸ್ಥೆಯ ಪ್ರೊ. ಕಲ್ ಡೇವಿಡ್ ಎಂಡರ್‌ಸನ್ ಇವರಿಬ್ಬರೊಳಗೆ; ಕೆಮಿಸ್ಟ್ರಿಯ ಬಹುಮಾನ, ಬರ್ಲಿನಿನ ಪ್ರೊ. ಪೀಟರ್ ಡೀಬಯ್ಕ್ ಇವರಿಗೆ.

ಬ್ರಿಟಿಶ್ ಯುದ್ಧನಾವೆಗಳು ಕಳೆದ ಒಂದು ವಾರದಲ್ಲಿ ೩೫೦ ಸಲ ಪ್ರಯಾಣ ಬೆಳೆಯಿಸಿ, ೭೬ ಸಾವಿರ ಮೈಲು ಸಂಚಾರಮಾಡಿ, ಸ್ಪೈನಿನಿಂದ ೧೧,೧೯೫ ಮಂದಿಯನ್ನು ಈಚೆಗೆ ಹಾಟಿಸಿ ರಕ್ಷಿಸಿತು.

ಸ್ಪೈನಿನ ಯುದ್ಧ ಬಹಳ ಜೋರಾಗಿ ನಡೆಯುತ್ತಿದೆ. ಎರಡು ಕಡೆಯ ಹೋರಾಟವೂ ಪ್ರಬಲವಾಗಿದೆ. ಜಯಾಪಜಯ ಕ್ಷಣಕ್ಕೊಂದು ರೀತಿ. ದಂಗೆಗಾರರ ಕೆಲವು ವಿಮಾನಗಳನ್ನು ಸರಕಾರದ ಬಲ ಧ್ವಂಸ ಮಾಡಿ, ಜಯಲಾಭ ಸಂಪಾದಿಸಿತೆಂದು ಕೇಳುವಾಗಲೇ, ದಂಗೆಗಾರರ ನಾಯಕನೂ ಸರಕಾರದ ಸೈನ್ಯಗಳನ್ನು ಹಿಂದಕ್ಕೆ ಅಟ್ಟಿರುವುದಾಗಿ ಸಾರುತ್ತಾನೆ. ಅಂತೂ ಯುದ್ಧದ ಕೊನೆಯ ವಿಜಯವು ಯಾರದಾಗುವುದೆಂದು ತಿಳಿಯಲು ಇನ್ನೂ ಕೊಂಚ ಸಮಯ ಬೇಕು.

ಪಿಲೋ ಪೊನ್ಸೆಸ್ ಯೂಸ್ ದ್ವೀಪದಲ್ಲಿ ಇಬ್ಬರು ಹೆಂಗಸರು; ಇಬ್ಬರದೂ ೬ ತಿಂಗಳ ಮಗು ತಮ್ಮದೆಂದು ಕೋರ್ಟಿನಲ್ಲಿ ಅವರವರ ಸಾಧನೆ. ಮಗು ಖಂಡಿತವಾಗಿ ಯಾರದೆನ್ನಲು ಸಾಕಾದ ಆಧಾರಗಳಿಲ್ಲ. ಜಡ್ಜರು, ತಮಗೆ ತಿಳಿದ ಉಪಾಯದಂತೆ, ಚೂರಿಯನ್ನು ತರಿಸಿ, ಮಗುವನ್ನು ಕತ್ತರಿಸಿ ಪಾಲು ಮಾಡುತ್ತೇನೆಂದರು. ಆದರೆ ಆ ಚದುರೆಯರು ಅದಕ್ಕೆ ಒಟ್ಟಾರೆ? 'ಹಾಗೆ ಮಾಡಬೇಡಿರಿ; ಅದಕ್ಕಿಂತಲೂ ನೀವೇ ಮಗುವನ್ನು ಇಟ್ಟುಕೊಳ್ಳಿ' ಎಂದು ಇಬ್ಬರೂ ಸಾಕಿತ್ತ ಆವರಿಬ್ಬರೂ ಜಡ್ಜರ ತಲೆ ಖರಡು ಮಾಡಿ ಕೋರ್ಟಿನಿಂದ ಓಡಿಬಿಟ್ಟರು. ಈಗ ಸದ್ಯ ಆ ಜಡ್ಜರೇ ಆ ಮಗುವಿನ ತಾಯಿಯಾಗಿ ಸಂರಕ್ಷಣೆ ಮಾಡಬೇಕಾಗಿದೆ.

ಗರ್ಭಸ್ರಾವಗಳನ್ನು ಶಾಸ್ತ್ರೋಕ್ತವಾಗಿ ನಡೆಸಲು ತಕ್ಕ ಡಾಕ್ಟರರುಗಳು, ಲಾಯರುಗಳು, ಆಸ್ಪತ್ರೆಗಳು ಮೊದಲಾದುವನ್ನು ಏರ್ಪಡಿಸಿಕೊಂಡು, ಈ ವ್ಯಾಪಾರವನ್ನು ಸಾಗಿಸುತ್ತಿದ್ದ ಕೆಲವು ಅಪರಾಧಿಗಳೀಗ ಅಮೆರಿಕದಲ್ಲಿ ಸಿಕ್ಕಿಬಿದ್ದಿರುವರು. ಈ ಹದಿನಾಲ್ಕು ಮಂದಿಯ ವಿಚಾರಣೆ ಲಾಸ್ ಏಂಜಲ್ಸಿನಲ್ಲಿ ನಡೆಯುತ್ತಿದೆ. ಈ ದುರ್ವ್ಯಾಪಾರದಿಂದ ಮಿ. ರ್ಯಾಂಕಿನ ಎಂಬ ಪುಣ್ಯಾತ್ಮನು ಕಳೆದ ವರ್ಷ ಒಂದು ಮಿಲ್ಯ ಡಾಲರುಗಳನ್ನೇ ಸಂಪಾದಿಸಿರುವನಂ.

ಇಂಡಿಯದವರ ಅಹಿಂಸೆ, ಪ್ಯಾಲಸ್ತೈನಿನವರ ಹಿಂಸೆ ಇವನ್ನು ಹೋಲಿಸಿ ಬ್ರಿಟಿನಿನ ಪತ್ರಿಕಾ ಉದ್ಯೋಗಿಗಳು ಇಂಡಿಯವನ್ನು ಹೊಗಳುತ್ತಿದ್ದಾರೆ. ಕೊನೆಗೆ ನಮ್ಮ ಅಹಿಂಸೆಗೆ ಬಹುಮಾನವೆಂದರೆ—ಇದೇ ಕೊಂಡಾಟ ಮಾತ್ರ.

ಮರೀಸಿಯಸ್ ದ್ವೀಪದಲ್ಲಿ ಮಿ. ಆರ್. ಎ. ಒಸ್ಮಾನ್ ಎಂಬವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಕಹೊಂದಿದ್ದಾರೆ. ಈ ಹುದ್ದೆಯಲ್ಲಿ ಹಿಂದೀಯರೆಂದರೆ ಇವರೇ ಮೊದಲನೆಯವರು.

ಜಗತ್ತಿನಲ್ಲಿ ನಿಖಿಲ ರಾಷ್ಟ್ರಗಳು ಎಷ್ಟು ಹಣವನ್ನು ಕಳೆದ ವರ್ಷ ಸೈನ್ಯದ ಯುದ್ಧಸಾಮಗ್ರಿಗಳನ್ನು ಹೆಚ್ಚಿಸುವಲ್ಲಿ ವೆಚ್ಚ ಮಾಡಿರುವವೆಂದು ಇನ್ನೂ ನಿರ್ಧರವಿಲ್ಲ. ಆದರೂ ಆ ಸಂಬಂಧದ ವೆಚ್ಚ ೧೯೩೫ರಲ್ಲಿ ೬೫೦,೦೦೦,೦೦೦ ಪೌಂಡುಗಳು; ೧೯೩೪ರಲ್ಲಿ ೧,೬೫೦,೦೦೦,೦೦೦ ಪೌಂಡುಗಳು; ೧೯೩೫ರಲ್ಲಿ ೧,೮೦೦,೦೦೯,೦೦೦ ಪೌಂಡುಗಳು ಎಂದು ಅಂದಾಜಾಗಿದೆ.

ನಿಮ್ಮ ಹಕ್ಕು ಮತ್ತು ಹೆಮ್ಮೆ.



ಮನೆಯಜಮಾನಿಕೆಯನ್ನು ಕುಂದುಕೊರತೆಗಳಿಲ್ಲದೇ ನಡೆಸುವುದು ಸಾಧಾರಣ ಕೆಲಸವಲ್ಲ. ಎಷ್ಟು ಚೆನ್ನಾಗಿ ಮಾಡಿದರೂ ಕೊರತೆಗಳಿರುವುವು. ಹಗಲಿರುಳೂ ರುಚಿಕರವಾದ ಚಾ ತಯಾರಿಸಿ ಕೊಟ್ಟು ಅದರ ಸೇವನೆಯಿಂದ ಪತಿಗೆ ಮನೆಯನ್ನು ಸ್ವರ್ಗವೆನ್ನಿಸುವುದು ಮನೆಯಾಕೆಯ ಒಂದು ಮುಖ್ಯ ಕೆಲಸ ಮತ್ತು ಉಪಾಯ.

ಚಾ ತಯಾರಿಸುವ ವಿಧಾನ. ನಿರ್ಮಲವಾದ ನೀರನ್ನು ಕಾಸಿ, ಶುಚಿಯಾದ ಪಾತ್ರೆಯೊಂದನ್ನು ಬೆಚ್ಚಗೆ ಮಾಡಿ, ಅದರಲ್ಲಿ ತಲಾ ಒಬ್ಬರಿಗೊಂದು ಚಂಚಾ, ಕೊಸರಿಗೊಂದು ಚಂಚಾ, ಉತ್ತಮವಾದ ಭಾರತೀಯ ಚಾಸೊಪ್ಪನ್ನು ಹಾಕಿ, ನೀರು ಚೆನ್ನಾಗಿ ಕುದಿದ ಮೇಲೆ, ಅದರ ಮೇಲೆ ಬಿಡಿ. ಐದು ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ, ಹಾಲು ಸಕ್ಕರೆ ಬೆರಸಿ ಸೇವಿಸಿ.



ಸಂಸಾರಕ್ಕೊಂದೇ ಪಾನ - ಭಾರತೀಯ ಚಾ.

I.K. 33 RS.

ಕುಡಿಯಿರಿ! ಕುಡಿಯಿರಿ!!

ಕಣನ್ ದೇವನ್ ಟೀ ಚಹಾರಾಜಾ

ಗುಣದಲ್ಲಿ ಅತ್ಯುತ್ತೀಯವಾದುದು

ಮಹಾಜನರಾಯಿಯ ಚಹಾ

ಪರಿಶುದ್ಧತೆಯ ಗುರುತಿಗಾಗಿ

ನೋಡಿ

SOLE S. K. AGENTS:

THE KERALA TEA SYNDICATE,

PONANI-MALABAR.

IMPERIAL BANK OF INDIA.

ಇಂಪೀರಿಯಲ್ ಬೆಂಕ್ ಒಫ್ ಇಂಡಿಯಾ.

Reserves exceed Rs. 5 crores. ಕ್ಷೇಮನಿಧಿಯು ರೂ. 5 ಕೋಟಿ ಮಿಕ್ಕಿದೆ.

More than 200 branches and offices throughout India & Burma, a branch in Colombo and a branch in London.

Correspondents all over the world.

Every type of Banking business, both inland and foreign, transacted.

Advances on Government securities and gold at very fine rates.

For full particulars apply to the MANGALORE BRNCH.

ಭಂಗಾರದ ನಗಗಳ ಈಡಿನ ಮೇಲೆ ಬಹು ಕಡಿಮೆ ಬಡ್ಡಿಯಲ್ಲಿ ಸಾಲಗಳನ್ನು ಕೊಡಲಾಗುವುದು.

ಸಾಲದ ಮೊಬಲಗು ನೂರಕ್ಕೆ ಕಡಿಮೆಯಾದರೆ ವರ್ಷಕ್ಕೆ ಸೇಕಡಾ 7ರ ಬಡ್ಡಿ.

100ರಿಂದ 499ರ ವರೆಗೆ ಸೇಕಡಾ 6ರ ಬಡ್ಡಿ. 500 ಯಾ 500ಕ್ಕೆ ಮೇಲ್ಪಟ್ಟು ಸೇಕಡಾ 5ರ ಬಡ್ಡಿ.



ಇತರರು ಮಾಡಿದ ಕಿಂಚಿದುಪಕಾರವನ್ನು ಆವಾಗಲೂ ಸ್ಮರಿಸುತ್ತಿರುವುದು; ಅಪಕಾರಗಳೆಷ್ಟಿದ್ದರೂ, ಅವುಗಳನ್ನು ಸ್ಮರಣೆಗೇ ತಂದುಕೊಳ್ಳದಿರುವುದು;— ಇವೆರಡೂ ಸತ್ಪುರುಷರ ಲಕ್ಷಣಗಳು.

—ಸೂಕ್ತಿಮಾಲೆ.

XVIII] ಮಂಗಳೂರು, ತಾ. ೧೭—೧೧—೧೯೩೬ [೬೫
೧೮೫೫ ಧಾತು ಸಂ। ಕಾರ್ತಿಕ ಶು। ೩ ಭೃಗುವಾರ

ಇಟೆಲಿಯ ಹುಂಕಾರ

ಸಾಮುದಾಯಿಕ ರಕ್ಷಣೆಯ ಸಂದೇಶವನ್ನು ಬಾಯಲ್ಲಿ ಚಪ್ಪರಿಸುತ್ತಿರುವ ನಮ್ಮ ಜನಾಂಗಸಂಘವು, ಆ ರಕ್ಷಣೆಯನ್ನು ಎಲ್ಲ ಜನಾಂಗಗಳಿಗೂ ಕೈನೀಡಿ ಕೊಡುವಲ್ಲಿ ಕಾಲು ಜಾರಿ ಬಿದ್ದಿದೆ ಎಂಬುದು ಇಡೀ ಪ್ರಪಂಚವೇ ತಿಳಿವ ಸಂಗತಿ. ಆದುದರಿಂದ, ಸಂಘೆದ ಹೃದಯಚಲನೆ ಪಕ್ಕನೆ ನಿಂತು ಅದು 'ನಾರಾಯಣ'ವೆಂದಲ್ಲಿ, ಫ್ರಾನ್ಸ್ ಮೊದಲಾದ ಒಂದೆರಡು ಮಹಾರಾಷ್ಟ್ರಗಳು ಮಾತ್ರವೇ ಅತ್ತು ಗೋಳಾಡಿ, ಸೂತಕಪಾತಕಗಳ ನ್ನಾಚರಿಸಿದರೆ ಅತಿಶಯವೇನೂ ಇಲ್ಲ. ಈಗ ಯುರೋಪೀಯ ರಾಷ್ಟ್ರಗಳು, ಅಧಿಕಾರದ ಸಮತೋಲನದ ಒಂದು ತಕ್ಕಡಿಗಾಗಿ ಕಾತರಿಸುತ್ತಿವೆ; ಅದೂ ಸಹಜವಾಗಿಯೇ. ಆರಂಭದಿಂದಲೂ ಈ ಜನಾಂಗಸಂಘೆ, ವಿಜಯಿಗಳಾದ ಕೆಲ ಇಂಪೀರಿಯಲ್ ರಾಷ್ಟ್ರಗಳಿಂದಲೇ ಸೃಷ್ಟಿಸಲ್ಪಟ್ಟ ಒಂದು ಸಂಸ್ಥೆಯಾಗಿದ್ದು, ಆ ರಾಷ್ಟ್ರಗಳು ತಮ್ಮ ದಿಗ್ವಿಜಯದಿಂದ ಸಂಪಾದಿಸಿದುದನ್ನು ದಕ್ಕಿಸಿಕೊಳ್ಳಲು ಆ ಸಂಸ್ಥೆ ವಿಶೇಷವಾಗಿ ಸಹಾಯವಾಡುತ್ತಿದ್ದಿತು. ಇದರಿಂದ ಇತರ ರಾಷ್ಟ್ರಗಳಿಗೆ ಈ ಮಹಾರಾಷ್ಟ್ರಗಳ ಮೇಲೆ ಹೊಟ್ಟೆಯುರಿಯೂ, ಅತೃಪ್ತಿಯೂ ಉಂಟಾದುದು ಮಾತ್ರ ತಲ್ಲದೆ, ಅವು ಒಂದೊಂದಾಗಿ ಜನಾಂಗಸಂಘೆದ ಮೆಂಬರಿಕೆಗೆ ರಾಜಿನಾಮೆಯನ್ನೂ ಕೊಟ್ಟು, ಪ್ರಕೃತ ಅವುಗಳೇ ಒಂದು ಪ್ರತ್ಯೇಕ ಸಂಘವನ್ನು ಸ್ಥಾಪಿಸಿಕೊಳ್ಳಲು ಕೂಡ ಸಿದ್ಧವಾಗಿವೆ. 'ನೀವು ಮಾಡಿರುವುದನ್ನೆಲ್ಲ ಸಮುಪಾಲಾಗಿ ಹಂಚಿಕೊಳ್ಳೋಣ'ವೆಂದೂ ಅವು ಆ ಮಹಾರಾಷ್ಟ್ರಗಳನ್ನು ಕೇಳಿವೆ. ಆದರೆ ಎಷ್ಟೋ ಕಷ್ಟಪಟ್ಟು ಸಂಪಾದಿಸಿದ ಆ ಕೊಳ್ಳೆಯನ್ನು ಇದ್ದವರಿಗೆಲ್ಲ ಹಂಚಿಬಿಡಲು ಆ ರಾಷ್ಟ್ರಗಳಿಗೇನು ಗ್ರಹಚಾರವೇ? ಬೇಕಾದರೆ ಯುದ್ಧವೇ ಆಗಲಿ! ಎಂದು ಕೈ ನೋಡಿ ಬಿಡೋಣವೆಂದೇ ಅವೂ ಸೊಂಟಕಟ್ಟುತ್ತಿವೆ!

ಇಟೆಲಿ ಜನಾಂಗಸಂಘದಲ್ಲಿ ತೃಪ್ತಿಗೊಂಡು ನಿಲ್ಲದೆಂಬುದು ಮೊದಲೇ ತಿಳಿದ ವಿಚಾರ. ಮುಸಲೋನಿ, ತನ್ನ ಮಾರ್ಗವೇ ತನಗೆ, ತನ್ನ ಸ್ವತಂತ್ರಕ್ಕೆ ಯಾರೂ ಅಡ್ಡ ಬರಕೂಡದು ಎಂಬುದನ್ನು ಆರಂಭದಿಂದಲೂ ಸೂಚಿಸುತ್ತ ಬಂದಿದ್ದಾನೆ. ಫ್ಲೂಮಿನ ಪ್ರೀ ಸ್ಟೇಟಿನ ನಿರ್ಮಾಣ—ಇದು ಮಿತ್ರಮಂಡಲಿಯವರ ಸೃಷ್ಟಿ—ಇದನ್ನು ಆತನು ಒಪ್ಪಲೇ ಇಲ್ಲ. ಯುಗೋಸ್ಲಾವಿಯದವರೊಡನೆ ಏನೋ ಒಂದು ಖಾಸಿಗೆ ವಿಷಾಡು ಮಾಡಿಕೊಂಡು ಫ್ಲೂಮಿನುನ್ನು ಒಳಗೆ ಹಾಕಿದ. ಹಾಗೆಯೇ ಮಿತ್ರಮಂಡಲಿಯವರ ಇನ್ನೊಂದು ಸೃಷ್ಟಿಯಾದ ಅಲ್ಬೇನಿಯದ ಸ್ವತಂತ್ರ ದೇಶಕ್ಕೆ ಬೇಕಾದಷ್ಟು ಸಾಲ ಕೊಟ್ಟು—ಹಿಂದಿರುಗಿಸಲು ಸಾಧ್ಯವೇ ಇಲ್ಲದಷ್ಟು ಸಾಲ ಕೊಟ್ಟು—ಅಲ್ಬೇನಿಯವು, ಇಟೆಲಿಯ ಸಾಂಪತ್ತಿಕ ಮತ್ತೂ ಮಿಲಿಟರಿಯ ಮೇಲಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದ. ಅನಂತರ 'ಶಸ್ತ್ರತ್ಯಾಗ'ದ ಚಳವಳಿಯಲ್ಲಿ 'ತ್ಯಾಗ' ಬೇಕೆಂದು ಹಲವರೊಡನೀತನೂ 'ಗೋವಿಂದ' ಹಾಕುತ್ತಿದ್ದರೂ, 'ಶಸ್ತ್ರಧಾರಣೆ'ಯಲ್ಲಿ ತನಗೆ ಮಾತ್ರ ಯಥೇಷ್ಟವಾದ ಹಕ್ಕುಬಾಧ್ಯತೆಗಳಿವೆ ಎಂಬುದನ್ನು ಈತನು ಮರೆತ ಗಳಿಗೆಯೇ ಇಲ್ಲ. ಮತ್ತೆ ಈತನು 'ಕಾಲನಿಗಳ ಆಕ್ರಮಣ'ಗಳು ಶುದ್ಧ ಅಸಂಬದ್ಧ'ವೆಂದು ಪಲ್ಲವಿ ಹಾಡಲು ಆರಂಭಿಸಿದುದೆಂದು ಬಲ್ಲಿರಾ? ೧೯೩೧ರಲ್ಲಿ! ಅಷ್ಟರಲ್ಲಿ ಜರ್ಮನಿಯಲ್ಲಿ ಹಿಟ್ಲರ್ ಸಾಹೇಬನೂ ತಲೆ ಎತ್ತಲು, ಇಟೆಲಿಗೆ ಧೈರ್ಯ ಹೆಚ್ಚಿತು; ಬಲ ಹೆಚ್ಚಿತು. ಮುಸಲೋನಿ ಗಟ್ಟಿಯಾಗಿ ಬಿಟ್ಟ.

ಈ ಪ್ರಕರಣದಲ್ಲಿ, ಬ್ರಿಟಿಶರು ಅನುಸರಿಸಿದ ಧೋರಣೆಯು ಸ್ವಾರಸ್ಯವಾಗಿದೆ. ಮೊದಮೊದಲು ಒಂದು ಕಡೆ, ಇಟೆಲಿಯವರ ಆಶಾಕಾಂಕ್ಷೆಗಳಿಗೆ ತಕ್ಕಷ್ಟು ಗಾಳಿ ಹಾಕಿದರು; ಇನ್ನೊಂದು ಕಡೆ ಜರ್ಮನಿಯವರ 'ಆಯುಧಧಾರಣೆ'ಗೆ ತಥಾಸ್ತು ಎಂದರು. ಆದರೆ ಮುಂದೆ ಇದೇ ಧೋರಣೆಯೇ ಬ್ರಿಟಿಶರ ಕುತ್ತಿಗೆ ಹಿಡಿಯಿತು. ಅಬಿಸೀನಿಯದ ಸ್ವತಂತ್ರ ರಾಜ್ಯವು ಧ್ವಂಸವಾಗುವಲ್ಲಿ ಅಲ್ಲಿ ಬ್ರಿಟಿಶರ ಹಿತರಕ್ಷಣೆಗೆ ಹಾನಿಯುಂಟಾಗುವುದರಿಂದ, ಇಟೆಲಿಗೆ ಇದಿರು ನಿಲ್ಲಬೇಕೇ ಅಥವಾ ಇಟೆಲಿಯು ಬೆಂಬಲಕ್ಕೆ ನಿಂತು ತಮ್ಮ ಕಲ್ಯಾಣವನ್ನು ಸಾಧಿಸಬೇಕೇ ಎಂಬುದು ಬಹಳ ಸಂದಿಗ್ಧಕ್ಕಿಟ್ಟಿತು. ಬಾಯಲ್ಲೇನೋ ವೇದಾಂತತತ್ವಗಳನ್ನು ಸಾರುತ್ತಿದ್ದರೂ, ಸಾಮುದಾಯಿಕ ಭದ್ರತೆಯ ಕುರಿತು ವ್ರಜಂಡ ಉದ್ಗಾರಗಳನ್ನು ಸುರಿಸುತ್ತಿದ್ದರೂ, ಮೇಲಾಗಿ ಜನಾಂಗಸಂಘವನ್ನೂ, ಇತರ ಜನಾಂಗಗಳನ್ನೂ ಈ ಸಾಮುದಾಯಿಕ ಭದ್ರತೆಯ ಮತ್ತೂ ಲೋಕಕಲ್ಯಾಣದ ಹೆಸರಲ್ಲಿ, ಇಟೆಲಿಯ ವಿರುದ್ಧವಾಗಿ ಮುಂದೆ ನೂಕುತ್ತಿದ್ದರೂ, ತಾನು ಮಾತ್ರ, ಅಬಿಸೀನಿಯವನ್ನು ಇಟೆಲಿಯ ಲೆಕ್ಕಕ್ಕೆ ಖರ್ಚು ಬರೆದಾದರೂ, ಇಟೆಲಿಯಿಂದ ಸ್ವಪ್ರಯೋಜನವನ್ನು ಪಡೆಯಬೇಕೆಂಬಲ್ಲಿ ಬ್ರಿಟನು ಎಂದೂ ಹಿಂದುಳಿದಿರಲಿಲ್ಲ. ಹಾಗೇ ಫ್ರಾನ್ಸೂ ತನ್ನನ್ನು ತಾನು ಮರೆತಿರದೆ,—ಜರ್ಮನಿಯೊಡನೆ ಬ್ರಿಟನು ಗೆಳೆತನದಿಂದ ಇದ್ದರೂ ಪರಿಗಣಿಸದೆ,—ಮಾಡಿಕೊಂಡಿತು ಒಂದು ಸಂಧಿಯನ್ನು ಇಟೆಲಿಯೊಡನೆ! ಅನ್ನುವಾಗ ಬ್ರಿಟನಿನ ಆಶ್ರಯ, ಫ್ರಾನ್ಸಿನ ಗೆಳೆತನ ಇವೆರಡೂ ಸಿಕ್ಕಿದ ಇಟೆಲಿಯ ಕೈಯಲ್ಲಿ ಬಡ ಅಬಿಸೀನಿಯ ಧ್ವಂಸವಾದುದೊಂದು ಆಶ್ಚರ್ಯವೇ?

ಇನ್ನು 'ಅಬಿಸೀನಿಯವನ್ನು ಜಯಿಸಿದ ಇಟೆಲಿಯನ್ನು ಹಿಡಿಯುವರಾರೂ ಇಲ್ಲ. ಕಾಲನಿಗಳನ್ನು ಹೊಡೆದು ಹಾಕಬೇಕೆಂಬ ಅದರ ಉತ್ಕಟೇಚ್ಛೆಗೆ ಯಾರು ಪ್ರತ್ಯುತ್ತರ ಕೊಡುವವರು? ಬಾಲ್ಕನ್, ಆಫ್ರಿಕಾ, ಮೆಡಿಟರೇನಿಯನ್ ಇವುಗಳಲ್ಲೆಲ್ಲಾ ಇಟೆಲಿಯ ಅಧಿಕಾರ ಅವ್ಯಾಹತವಾಗಿ ನಡೆಯಬೇಕೆಂದು ಮುಸಲೋನಿಯ ಮನೋಗತ. ಅಲ್ಲಿ ನಮ್ಮವರಿಗೂ ಕಾಲನಿಗಳುಂಟು; ದೊಡ್ಡ ಕಣ್ಣೂ ಉಂಟು. ಮುಂದೆ ಮುಸಲೋನಿಯ ಹಿಡಿತದಿಂದ ತೊಂದರೆಯೂ ಉಂಟು. ಕಾರಣ, ಸಾಮುದಾಯಿಕ ಭದ್ರತೆ, ಇಲ್ಲಿ ಭದ್ರವಾಗಿರಲೇಬೇಕೆಂದು ಬ್ರಿಟನರು ಹೇಳಬಹುದಾದರೂ, ಸಡಿಲವಾಗಿದ್ದರೆ ಬಾಧಕವಿಲ್ಲವೆಂದು ಮುಸಲೋನಿಯೂ ಹೇಳಬಹುದು. ಇಲ್ಲಿ ಒಬ್ಬರು ಹೇಳಿದುದು ಮತ್ತೊಬ್ಬರಿಗೆ ಸರಿ ಬೀಳದಿದ್ದರೆ, ಮತ್ತೆ ದೊಣ್ಣೆ ಕತ್ತಿ—ರಣ ಭೇರಿ!

ವಿದ್ಯಮಾನಗಳು ಹೀಗಿರುವಾಗ, ಮುಸಲೋನಿಯವರ ಈಚಿಗಿನ ಪ್ರಕಟಣೆ, 'ಹೂಂಕಾರ'ದಂತೆ ಭಾವಿಸಲ್ಪಟ್ಟಿರುವುದು ವಿಚಿತ್ರವಲ್ಲ. ಇದರ ಪರಿಣಾಮವಾಗಿ, ಬ್ರಿಟನು ಇಟೆಲಿಯನ್ನು ಅಬಿಸೀನಿಯದ ವಿಜಯಿಯೆಂದು ಒಪ್ಪಿಕೊಳ್ಳಲೇ ಬೇಕು; ಇಲ್ಲದಿದ್ದರೆ, ಮುಸಲೋನಿ ಯಾವ ದೊಣ್ಣೆಯಪ್ಪ ನಾಯಕನಿಗೂ ಬೆದರದೆ, ಇಟೆಲಿಯಲ್ಲಿ ಯುದ್ಧದ ಶಸ್ತ್ರಾಸ್ತ್ರಗಳನ್ನು ಕ್ಷಣಕ್ಷಣಕ್ಕೂ ಹೆಚ್ಚಿಸುತ್ತ ಹೋಗುವುದು ಖಂಡಿತ. ಮೆಡಿಟರೇನಿಯನಿನಲ್ಲಿ ಬ್ರಿಟಿಶರ ಹಾದಿಗೆ ಕಲ್ಲು ಮುಳ್ಳು ಹಾಕಬೇಕೆಂಬ ದುರುದ್ದೇಶವೇನೋ ಇಟೆಲಿಗಿಲ್ಲ; ನಿಜ. ಆದರೆ ಇಟೆಲಿಯ ಒಳಗಿನ ಪ್ರಾಣವೇ ಅಲ್ಲಿದೆ ಎಂಬುದನ್ನು ಬ್ರಿಟನ್ ಮರೆತರೆ, ಕೆಲಸ ಕೆಟ್ಟೀತು. ಬ್ರಿಟನು ತನ್ನ ನೌಕಾಪಡೆಯನ್ನು ಹೆಚ್ಚಿಸುತ್ತ ಹೋಗುವಲ್ಲಿ, ಇದು ಯಾರಿಗಾಗಿ ಎಂಬುದು ಇಟೆಲಿ ತಿಳಿಯದೆ ಹೋಗದು. 'ಹೂಂಕಾರ'ವೆಂದರೆ ಏನು ಸುಮ್ಮನೆಯೇ?

ಬರ್ಲಿನಿನಲ್ಲಿ ಈ ಭಾಷಣವನ್ನು ಎಲ್ಲರೂ ಪ್ರಶಸ್ತವೆಂದು ಕೊಂಡಾಡುತ್ತಿರುವಾಗ, ಜಿನೇವಾದಲ್ಲಿ ಇದನ್ನು ಅಪಾಯಕಾರಿಯಾದ ಹೂಂಕಾರವೆಂದೇ ಅರ್ಥವಾಡಿದ್ದಾರೆ. ಒಂದೇ ಭಾಷಣಕ್ಕೆ, ಎರಡು ಅರ್ಥ ಕೊಡುವ, ಎರಡು ದಿಕ್ಕಿನೆರಿಗೆಳೆಲ್ಲಿಂದ ಇವರಿಬ್ಬರಿಗೆ ಸಿಕ್ಕಿದುವೋ, ಅದೇ ಇದರಲ್ಲಿ ಬಲು ಸ್ವಾರಸ್ಯ. ಅದು ಹೇಗಿದ್ದರೂ, ಯುರೋಪಿನ ರಾಜಕೀಯ ಪರಿಸ್ಥಿತಿಯು ಇದರಿಂದ ಬಹಳ ಗೊಂದಲದಲ್ಲಿ ಬಿದ್ದಿದೆ. ಈ ಗೊಂದಲವನ್ನು ನಿವಾರಿಸುವುದು ಒಂದೇ ಪಂಗಡದ ಪ್ರಾಬಲ್ಯವುಳ್ಳ ಜನಾಂಗ ಸಂಘೆಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ಸಂಘ, ವಿಜಯಿಗಳು ನುಂಗಿದುದನ್ನು ಇತರರಿಗೂ ಹಂಚಿ ಕೊಡಿಸಬೇಕು; ಇಲ್ಲದಿದ್ದರೆ ಗೊತ್ತೇ ಇದೆ—ಯುದ್ಧ!

ಮಂಗಳೂರು

ಇದೇ ತಾ. ೧೮ನೇ ಬುಧವಾರ ಅಪರಾಹ್ನ ೫ ಗಂಟೆ ೪-೩೦ಕ್ಕೆ ಗವರ್ನಮೆಂಟ್ ಕಾಲೇಜ್ ಹಾಲಿನಲ್ಲಿ ಜಿಲ್ಲಾ ಕಲೆಕ್ಟರರವರ ದರ್ಬಾರ್ ನಡೆಯುವದು. ಅಂದು ನೋರ್ತ್ ಮಂಗಳೂರು ಡಿವಿಜನಿನ ಡಿಸ್ಟ್ರಿಕ್ಟ್ ಫೊರೆಸ್ಟ್ ಅಫೀಸರರಾದ ಮು. ರಾ. ರಾ. ಇ. ವಿ. ಪದ್ಮನಾಭ ಪಿಳ್ಳೈ ಯವರಿಗೆ ರಾವ್‌ಸಾಹೇಬ್ ಬಿರುದು ಪ್ರಯಪಾಲಿಸಲ್ಪಡುವದು.

ಇದೇ ತಿಂಗಳ ತಾ. ೨೮—೨೯ರಲ್ಲಿ ಬೆಳಗಾವಿಯಲ್ಲಿ ಜರುಗಲಿರುವ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿ ನಮ್ಮ ಜಿಲ್ಲೆಯ ಉಡುಪಿಯವರೂ, ಮದ್ರಾಸಿನ ಪ್ರಸಿದ್ಧ ಡಾಕ್ಟರರೂ, ಕೌನ್ಸಿಲ್ ಆಫ್ ಸ್ಟೇಟಿನ ಕೌನ್ಸಿಲರಾಗಿದ್ದ ಕಾಲದಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ತುಂಬ ಪರಿಶ್ರಮದಿಂದ ಕೆಲಸ ಮಾಡಿದವರೂ ಆಗಿರುವ ರಾವ್ ಸಾಹೇಬ್ ಡಾ॥ ಯು. ರಾಮರಾಯರು ಇವರು ಆರಿಸಲ್ಪಟ್ಟಿರುತ್ತಾರೆ. ಶ್ರೀಯುತರನ್ನು, ಕಾಂಗ್ರೆಸ್ ಮಂಡಲದವರು ಮದ್ರಾಸಿನ ಹೊಸ ನ್ಯಾ॥ ವಿ॥ ಸಭೆಗಳ ಅಪ್ಪರ್ ಜೇಂಬರಿಗೆ ನಮ್ಮ ಜಿಲ್ಲೆಯ ಪರವಾಗಿ ಉಮೇದುವಾರರನ್ನಾಗಿ ಆರಿಸುವ ಭರವಸೆಯು ಈ ಪ್ರಾಂತದವರಿಗಾಗಿದೆ.

ಉಡ್ಪಿ ಕೋರ್ಟಿನ ವಕೀಲರಾದ ಶ್ರೀ. ನೀನಪ್ಪ ಹೆಗ್ಗಡೆ, ಬೀ. ಏ. ಬಿ. ಎಲ್. ಇವರಿಗೆ 'ಕೋರ್ಟಿನ ಅವಮಾನ'ದ ಆರೋಪದ ಮೇಲೆ, ಆ ಕೋರ್ಟಿನಲ್ಲಿ ೫ ರೂಪಾಯಿಗಳ ಜುಲ್ಮಾನೆಯಾಗಿದ್ದು, ಆ ಸಂಬಂಧ ಆ ವಕೀಲರ ಅಪೀಲು ಇಲ್ಲಿನ ಡಿ॥ ಕೋರ್ಟಿನಲ್ಲಿ ತನಿಖೆಗೆ ಬಂದಲ್ಲಿ, ನಮ್ಮ ಡಿ॥ ಜಡ್ಜರು ವಿಷಯಗಳ ಸಂಪೂರ್ಣ ವಿಚಾರ್ಶ ಮಾಡಿ, ಜುಲ್ಮಾನೆಯನ್ನು ರದ್ದು ಪಡಿಸಿರುವರು.

ಹಂಗಾಮಿ ಡಿ॥ ಬೋ॥ ಇಂಜಿನಿಯರಾಗಿರುವ ಶ್ರೀ. ಕೆ. ಕುಥಿಷ್ ರಾಮನ್ ನಂಬಿಯಾರರವರು, ನಮ್ಮ ಜಿಲ್ಲೆಯ ಡಿ॥ ಬೋರ್ಡ್ ಇಂಜಿನಿಯರರ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಕಳೆದ ಆದಿತ್ಯವಾರ, ಇಲ್ಲಿಯ ಸರ್ಕಲ್ ಇನಸ್ಪೆಕ್ಟರ್ ಶ್ರೀ. ಗಣೇಶ ಸುಂದರ ರಾಯರವರು, ತಮ್ಮ ಪೋಲೀಸ್ ಬಲದೊಡನೆ, ಇಲ್ಲಿನ ಹೂ ಮಾರ್ಕೆಟಿನ ಬಳಿ ನಡೆಯುತ್ತಿದ್ದ ಒಂದು ಜುಗಾರಾಟದ ಪಂಗಡವನ್ನು ಹಿಡಿದಿರುವರು.

ಇಲ್ಲಿ ಕಡ್ರಿಯಲ್ಲಿ ಮಾಮೂಲಿನಂತೆ ಜರಗುವ ವರ್ಷಾವಧಿ ಕಂಬಳವು ಇದೇ ತಾ. ೨೯ನೇ ಆದಿತ್ಯವಾರ ನಡೆಯುವುದು.

ಸೈಂಟ್ ಅಗ್ನೆಸ್ ವಿದ್ಯಾಸಂಸ್ಥೆಯ ಮೊದಲನೇ ಹೆತ್ತವರ ದಿನಾಚರಣೆಯು, ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾದ ಮಿ॥ ಮೋರ್ ಅಮೀರುದ್ದೀನ್ ಸಾಹೇಬ್ ಬಹದೂರರ ಅಧ್ಯಕ್ಷತೆಯಲ್ಲಿ ಕಳೆದ ತಾ ೧೫ರಲ್ಲಿ ನೆರವೇರಿತು. ಜಡ್ಜರ ಪತ್ನಿ ತರಗತಿಯಲ್ಲಿ ಹೆಚ್ಚು ಚಟುವಟಿಕೆ ತೋರಿಸಿದವರಿಗೆ ಬಹುಮಾನ ಹಂಚಿದರು. ಆ ಮೇಲೆ ನಾಟಕಾದಿಗಳು ನಡೆದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸ್ತ್ರೀವಿದ್ಯಾಭ್ಯಾಸದ ಅವಶ್ಯಕತೆಯನ್ನು ಸಮರ್ಥಿಸಿ ಕಾನ್ವೆಂಟಿನವರ ನಿಷ್ಕಾಮ ಸೇವೆಯನ್ನು ಹೊಗಳಿ ಸುಮಾರು ೪೫೦ ಮಂದಿ ವಿದ್ಯಾರ್ಥಿನಿಗಳಿರುವ ಈ ಸಂಸ್ಥೆಯು ಅಭಿವೃದ್ಧಿಪಡಿಸಿದ ಪಡತಕ್ಕ ವಿಷಯವೆಂದು ಮುಕ್ತಾಯ ಮಾಡಿದರು.

ಮೂಸ್ಸರ್ ಎಚ್. ನಾರಾಯಣ ರಾಯರ ಸ್ವಕೀಯ 'ಲಲಿತಕಲಾ ಪ್ರದರ್ಶಕ ಸಂಗೀತಶಾಲೆ'ಯಲ್ಲಿ ಇದೇ ನವೆಂಬರ ತಿಂಗಳ ೧೭ನೇ ತಾರೀಕಿನಲ್ಲಿ ಶ್ರೀ. ಲಕ್ಷ್ಮಣದೇವ ವಿದ್ಯಾರ್ಥಿಯವರ 'ಪತಿಭಕ್ತಿ'ಯೆಂಬ ವಿಷಯವನ್ನೊಳಗೊಂಡ ಹರಿಕಥಾ ಕಾಲಕ್ಷೇಪವೂ ತಾ. ೨೮ರಲ್ಲಿ ಶ್ರೀ. ಶಂಕರ ನಾರಾಯಣ ಸಾಮುಕರೆಂಬವರ 'ರುಕ್ಮಾಂಗದ' ಎಂಬ ಪೌರಾಣಿಕ ವಿಷಯದ ಹರಿಕಥೆಯೂ ನಡೆದುವು. ಈ ಶಾಲೆಯಲ್ಲಿ ಪ್ರತಿ ತಿಂಗಳ ೧೭ನೇ ತಾರೀಕಿಗೆ ಎಲ್ಲಾ ವಿದ್ಯಾರ್ಥಿಗಳು ಹಾಗೂ ಪೋಷಕರು, ಹಿತಚಿಂತಕರು ಸೇರಿ, ಸಾರ್ವಜನಿಕ ಸಂಗೀತ ಭಜನೆಯನ್ನು ಸಾಯಂಕಾಲ ೬ರಿಂದ ೧೦ರ ವರೆಗೆ ನಡೆಯಿಸುವ ವ್ಯವಸ್ಥೆಯು ಮಾಡಲ್ಪಟ್ಟಿರುವುದು. ಈ ಸಮಾರಂಭಕ್ಕೆ ಗಾನಪ್ರಿಯರೆಲ್ಲರಿಗೂ ಎಲ್ಲಾ ಸಂದರ್ಭಗಳಲ್ಲಿಯೂ ಆಮಂತ್ರಣವಿದೆ. ತೃಪ್ತಿಕರವಾಗಿ ಕಲಾಪ್ರಚಾರವನ್ನು ಮಾಡಲು ಯೋಗ್ಯತೆ ಇರುವ ಮಹನೀಯರು ಅಪೇಕ್ಷಿಸಿದಲ್ಲಿ, ಶಾಲೆಯು ಕಡೆಯಿಂದ ಯೋಗ್ಯತಾಪತ್ರವನ್ನು ಕೊಡಿಸುವ ವ್ಯವಸ್ಥೆಯನ್ನು ಕೂಡ ಮಾಡಿರುವುದು ಎಂದು ಅದರ ಪ್ರೊಪ್ರೈಟರರಾದ ಮೂಸ್ಸರ್ ಎಚ್. ನಾರಾಯಣ ರಾವ್, ಇವರು ತಿಳಿಸುತ್ತಾರೆ.

ರಾ. ದೇಪ್ಪಣಿಗುತ್ತು ಕೋಚಣ್ಣ ಶೆಟ್ಟಿಯವರಿಗೆ ಇಲ್ಲಿಯ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರವರಿಂದ ವಿಧಿಸಲಾಗಿದ್ದ ಶಿಕ್ಷೆಯು ಅಪೀಲಿನಲ್ಲಿ ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರವರಿಂದ ತೆಗೆದುಹಾಕಲ್ಪಟ್ಟಿದೆ. ಹಾಗೇ ಮು। ಪಿ. ಗೋಪಾಲಕೃಷ್ಣ ಶಿವ್ರಾರಾಯರನ್ನೂ ನಿರಪರಾಧಿಗಳೆಂದು ತೀರ್ಮಾನಿಸಲಾಯಿತು.

ಹಿಂದೂದೇಶ

ತಿರುಚಿನಾಪಳ್ಳಿಯಲ್ಲಿ ಪಳಕೆಡೈ ಎಂಬಲ್ಲಿ ಪಟಾಕಿ, ಬಾಣ ಬಿರುಸುಗಳನ್ನು ನೂರುವ ಒಂದು ಅಂಗಡಿಗೆ ಬೆಂಕಿ ಬಿದ್ದು ಸುಮಾರು ೨ ಸಾವಿರ ರುಪಾಯಿಗಳು ಬಾಳುವಷ್ಟು ಸಾಮುಗ್ರಿಗಳು ಸುಟ್ಟುಹೋದುವು.

ಗುಂಟೂರು ಜಿಲ್ಲೆಯಲ್ಲಿ ನೆರೆಹಾವಳಿಗೆ ತುತ್ತಾದ ಪ್ರದೇಶಗಳನ್ನು ನಮ್ಮ ಫ್ಯಾನೆನ್ಸ್ ಮೆಂಬರರು ಸಂದರ್ಶಿಸಿ, ಅಲ್ಲಿನ ಅಪಾರವಾದ ನಷ್ಟಕಷ್ಟಗಳನ್ನು ಕಣ್ಣಾರೆ ಪರಾಂಬರಿಸಿ, ಕೂಡಲೇ ನಿವಾಸಗಳಿಗೆ ಅಗತ್ಯವಿರುವ ಸಾಮುಗ್ರಿಗಳನ್ನು ಒದಗಿಸುವ ಯತ್ನದಲ್ಲಿರುವರು. ಈ ಹಾವಳಿಯ ನಷ್ಟ ಇಂತಿಷ್ಟೇ ಎಂದು ನಿರ್ಧಾರವಾಗಿ ಎಣಿಸಲು, ಈಗಿನ ಪರಿಸ್ಥಿತಿಯಲ್ಲಿ ಇವರಿಗೂ ಸಾಧ್ಯವಾಗಿಲ್ಲ.

ನಮ್ಮ ವೈಸರಾಯರು ಅನುಗ್ರಹಪೂರ್ವಕವಾಗಿ ಅಪ್ಪಣೆ ಕೊಡಿಸಿರುವ ಮೇರೆಗೆ, ಇನ್ನು ಮುಂದೆ ಘನವನ್ನೈದಿದ ನೈಝಾಂರವರು, ಹೈದರಾಬಾದು ಮತ್ತೂ ಬೀರಾರಿನ ಮಾನ್ಯ ನೈಝಾಂರವರೆಂಬ ಅಭಿಧಾನದಿಂದ ಪ್ರಸಿದ್ಧಿಗೊಳ್ಳುವರು. ಇದುವರೆಗೆ ಅವರು ಹೈದರಾಬಾದಿಗೆ ಮಾತ್ರ ನೈಝಾಮರಾಗಿದ್ದರು; ಬೀರಾರು ಬ್ರಿಟಿಶರ ಅಧಿಕಾರದಲ್ಲಿದ್ದಿತು. ಇನ್ನು ಸಂತಾನಪಾರಂಪರ್ಯವಾಗಿ ಈ ಘನ ಅಭಿಧಾನವು, ನೈಝಾಂರವರಿಗೆ ಸಲ್ಲುವುದು ಬಹಳ ಸಂತೋಷ. ಇದರಂತೆ ನಮ್ಮ ಬೆಂಗಳೂರು ದಂಡಿನ ಪ್ರಶ್ನೆಯೂ ಮೈಸೂರು ಶ್ರೀಮನ್ಮಹಾರಾಜರವರ ಪರವಾಗಿಯೇ ತೀರ್ಮಾನವಾದರೆ, ನಮ್ಮ ಕರ್ಣಾಟಕಕ್ಕೂ ಭೂಷಣವೆನಿಸುತ್ತಿದ್ದಿತಲ್ಲವೇ?

ಹೈದರಾಬಾದು ಸಿಂಹಾಸನಕ್ಕೆ ಹಕ್ಕುದಾರರಾದ ವೇಜರ್ ಜನರಲ್ ವಾಲಾಶನ್ ಪ್ರಿನ್ಸ್ ಜಾಹ್ ಬಹದೂರರವರೇ ಬೀರಾರಿನ ಪ್ರಥಮ ರಾಜಕುಮಾರರಾಗುವರು.

ಶ್ರೀ. ಅಬ್ದುಲ್ ಗಫೂರ್ ಖಾನರನ್ನು, ಯಾವುದೊಂದು ಶರ್ತವೂ ಇಲ್ಲದೆ, ಗಡಿನಾಡಿನೊಳಗೆ ಪ್ರವೇಶಿಸಲು ಬಿಡಬೇಕೆಂದು ಫ್ರಾಂಟಿಯರ್ ನ್ಯಾಯವಿಧಾಯಕ ಸಭೆಯ ಮುಂದೆ ಬಂದ ಠರಾವು ಬಹುಮತ ಸಾಲದೆ ವಿಫಲವಾಯಿತು.

ಮುಲ್ತಾನಿನಲ್ಲಿ ಮುನಿಸಿಪಲ್ ಕವಿೂಶನರರೂ, ಸಮಗ್ರ ಭಾರತದ ಇತಿಯದ್ ಮಿಲ್ಲಟಿನ ವೈಸ್ ಪ್ರೆಸಿಡೆಂಟರೂ, ಒಂದು ಮಸೀದಿಯ ಕಟ್ಟೋಣದ ವಿಷಯದಲ್ಲಿ, ತಮ್ಮ ತಮ್ಮ ಮುಸ್ಲಿಂ ಪಂಗಡಗಳೊಡನೆ ಹೊಡೆದಾಡಿಕೊಂಡು ಹಲವರಿಗೆ ಗಾಯಗಳಾಗಿವೆ. ಕವಿೂಶನರರ ಮತ್ತೂ ವೈಸ್‌ಪ್ರೆಸಿಡೆಂಟರೊಡನೆ ಇತರ ಹಲವರ ಕೈದೂ, ಜಾವಿೂನು ಮುಚ್ಚಳಿಕೆಗಳೂ ನಡೆದಿವೆ.

ಕೊಲೊಂಬೋದಲ್ಲಿ ಸಮುದ್ರತೀರದಲ್ಲಿ ಸಂಚರಿಸುತ್ತಿದ್ದ ಅಮೃತಲಾಲ್ ಎಂಬ ಒಬ್ಬ ಹಿಂದೀ ಫರ್ಮಿನ ಉದ್ಯೋಗಿಯು ಅಲೆಯ ಹೊಡೆತಕ್ಕೆ ಸಿಕ್ಕಿ ಸಮುದ್ರದ ಪಾಲಾದನು.

ಗುಂಟೂರು ಪ್ರಾಂತದ ಅನಾಹುತದಿಂದ ೯ ಕೋಟಿ ರುಪಾಯಿಗಳ ನಷ್ಟವಾಗಿದೆ ಎಂದು ಆಫಿಶಿಯಲ್ ಅಂಕೆಸಂಖ್ಯೆಗಳ ಅಂದಾಜಾದರೂ, ಸೂಕ್ಷ್ಮಪರಿಶೋಧನೆಯ ಮೇರೆಗೆ ಅದು ಸುಮಾರು ೧೮ ಕೋಟಿಯಾಗಬಹುದೆಂದು ನಿರ್ಧರಿಸಲಾಗಿದೆ. ಈ ವಿಪತ್ತಿನ ನಿವಾರಣೆಗಾಗಿ ದೇಶದ ಯಾವತ್ತು ಮಹಾಜನರ ಉದಾರ ಸಹಾಯವನ್ನು ಕೋರಲಾಗಿದೆ.

ಲಕ್ನೋವಿನ ಗವರ್ನ್‌ಮೆಂಟ್ ಹೌಸಿನಲ್ಲಿ ಸೆಂಟ್ರಿಯಾಗಿದ್ದ ಅವಿೂರ್ ಸಿಂಗ್ ಎಂಬ ಸಿಪಾಯಿಗೆ ಯಾರೋ ರಾತ್ರಿ ಗುಂಡು ಹೊಡೆದರು. ಅವನಿಗೆ ಸ್ವಲ್ಪ ಗಾಯವಾಗಿದೆ. ಅವನೂ ಕತ್ತಲೆಯಲ್ಲಿ ಆ ಇಬ್ಬರು ದುಷ್ಟರ ಮೇಲೆ ಗುಂಡು ಹಾರಿಸಿದರೂ, ಅವರು ತಪ್ಪಿಸಿಕೊಂಡು ಜಾರಿದ್ದಾರೆ. ಪೊಲೀಸರ ತನಿಖೆ ನಡೆಯುತ್ತಿದೆ.

ಕೇರಳಾ ಯುನಿವರ್ಸಿಟಿಯ ಸ್ಥಾಪನೆಯ ಬಗೆಗೆ, ಒಂದು ವಿಜ್ಞಾಪನಾ ಪತ್ರಿಕೆಯು, ಕಲ್ಲಿಕೋಟೆಯಲ್ಲಿ ನಮ್ಮ ಗವರ್ನರರಿಗೆ ಸಮರ್ಪಿಸಲ್ಪಟ್ಟಲ್ಲಿ, ಕೊಚ್ಚಿ, ತಿರುವಾಂಕೂರು ಸರಕಾರಗಳನ್ನೂ ಈ ಕುರಿತು ಮಾತಾಡಿಸಿ ನೋಡಿ ಎಂಬ ಅಪ್ಪಣೆಯಾಗಿದೆ.

ಸಿಂಧ್ ಪ್ರಾಂತದ ಮುಖಂಡರೂ, ದಾನಶೂರರೂ ಆದ ಸೇಟ್ ಅಸ್ಮುಲ್‌ರವರನ್ನು, ಮಲಗಿ ನಿದ್ರಿಸುತ್ತಿದ್ದ ಹಾಗೇ ಯಾರೋ ಕೊಲೆ ಮಾಡಿದ್ದಾರೆ. ಅವರು ಈ ಬಾರಿಯ ಎಸೆಂಬ್ಲಿ ಚುನಾವಣೆಯ ಒಬ್ಬ ಉಮೇದುವಾರರಾಗಿದ್ದರು. ಇವರೊಂದಿಗೆ ನಕ್ಕದಲ್ಲಿ ಮಲಗಿದ್ದ ಅವರ ಚಿಕ್ಕ ಮಗನನ್ನೂ, ಕೊಡಲಿಯಿಂದ ಕಡಿದು, ಕೊಂದುಬಿಟ್ಟಿದ್ದಾರೆ.

ಇಸ್ಲಾಂ ಧರ್ಮವನ್ನು ಈಚಿಗೆ ಆಶ್ರೈಸಿದ್ದ ಮಿ. ಅಬ್ದುಲ್ಲಾ ಗಾಂಧಿಯವರು, ಹಿಂದೂ ಧರ್ಮವನ್ನೇ ಪುನಃ ಆಶ್ರೈಸಲು ನಿರ್ಧರಿಸಿರುವರೆಂದೂ, ಬೊಂಬಯಿಯ ಆರ್ಯಸಮಾಜದವರ ಆಶ್ರಯದಲ್ಲಿ ಇವರ ಶುದ್ಧೀಕರಣವು ಇಸ್ಪರಲ್ಲೇ ಜರಗುವುದರಲ್ಲಿದೆ ಎಂದೂ ಪ್ರಕಟವಾಗಿದೆ.

ಬೊಂಬಯಿಯ ಗಲಭೆಗಳು ಒಂದೆರಡು ದಿನಗಳಿಂದ ಸ್ವಲ್ಪ ಶಾಂತವಾಗಿದೆ. ಕೆಲವು ಬೀದಿಗಳಲ್ಲಿ, ದೀಪಾವಳಿ ವ್ಯಾಪಾರದ ಸಂಬಂಧ, ಸ್ಪೆಶಲ್ ಪೊಲೀಸರ ಏರ್ಪಾಡು ನಡೆದು, ಈ ಪರಿಣಾಮವಾಗಿದೆ. ಬೊಂಬಯಿಯ ಮಾನ್ಯ ಗವರ್ನರರು, ಗಲಭೆ ಇರುವ ಪ್ರದೇಶಗಳಿಗೆ ಅಕಸ್ಮಾತ್ತಾಗಿ ಭೇಟಿ ಕೊಟ್ಟು, ಜನರ ನಿರುತ್ಸಾಹವನ್ನು ಹೋಗಲಾಡಿಸಿದ್ದಾರೆ.

ಲಾಹೋರಿನಲ್ಲಿ ನಡೆದ ಸಮಗ್ರ ಭಾರತ ಷಾಹಿದಗಂಜ್ ಕಾನ್ಫರೆನ್ಸಿನಲ್ಲಿ, ಅಧ್ಯಕ್ಷರಾದ ಮೌಲಾನಾ ಶೌಕತ್ ಆಲಿ, ಎಂ. ಎಲ್. ಏ.ಯವರು, 'ನಾವು ಜಗಳವಾಡಬಾರದು; ಇತರ ಧರ್ಮಿಯರ ಮನಸ್ಸನ್ನು ನೋಯಿಸಬಾರದು' ಎಂದು ತಮ್ಮವರಿಗೆ ಬುದ್ಧಿವಾದ ಹೇಳಿದರು.

ಕುಂಭಕೋಣದಲ್ಲಿ 'ಪೀಪಲ್ಸ್ ಪಾರ್ಟಿ'ಯವರ ಒಂದು ವಿೂಟಿಂಗ್ ನಡೆದಾಗ, ಕಾಂಗ್ರೆಸನ್ನೂ, ಮಿ. ಗಾಂಧಿಯವರನ್ನೂ, ಶ್ರೀ. ರಾಜಗೋಪಾಲಾಚಾರ್ಯರನ್ನೂ ದೂರಿದುದರಿಂದ, ಸಭೆಯಲ್ಲಿ ಗಲಭೆಯಾಗಿ, ಪೋಲೀಸರು ಬಂದು, ಕೊನೆಗೆ ಸಭೆ ಮತ್ತೊಂದು ಬಾರಿ ನಡೆಯಲು ಯತ್ನಿಸಿದರೂ ಸಾಧ್ಯವಾಗದೆ, ಅಲ್ಲೇ ಕೊನೆಗೊಂಡಿತು.

ತಿರುವಾಂಕೂರು ಶ್ರೀಮನ್ಮಹಾರಾಜರವರು ದೊಡ್ಡದೊಂದು ಸಾಮಾಜಿಕ ಸುಧಾರಣೆಯನ್ನು ತಮ್ಮ ಸಂಸ್ಥಾನದಲ್ಲಿ ಪ್ರವೇಶಗೊಳಿಸುವ ಕೈಪೆ ತೋರಿದ್ದಾರೆ. ಸಂಸ್ಥಾನದ ಹೆಚ್ಚಿನ ದೇವಸ್ಥಾನಗಳನ್ನು ಅವರ್ಣೀಯರಿಗಾಗಿ ಬಾಗಿಲು ತೆರೆದಿಡಬೇಕೆಂದು ಮಹಾಪ್ರಭುಗಳ ಅಪ್ಪಣೆಯಾಗಿದೆ.

ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಒಫಿಶಿಯಲ್ ಕಾರ್ಯಕ್ರಮಗಳನ್ನು ಜರುಗಿಸುವ ವಿಧಾನವು ತೃಪ್ತಿಕರವಲ್ಲವೆಂದು, ಕೌನ್ಸಿಲಿನ ೨೦ ಮಂದಿ ಸದಸ್ಯರು ಸಭೆ ಬಿಟ್ಟು ಹೊರ ನಡೆದರು.

ತಿರುವಾಂಕೂರು ಶ್ರೀಮನ್ಮಹಾರಾಜರವರ ೨೫ನೆಯ ವರ್ಷವರ್ಧಂತಿಯು ತ್ರಿವೆಂದ್ರಮಿನಲ್ಲಿ ಅತ್ಯಂತ ವೈಭವಪೂರ್ವಕವಾಗಿ ಜರುಗಿತು. ಈ ಸಂಬಂಧ ಒಂದು ರಾಜದರ್ಬಾರೂ ಇದ್ದಿತು. ನಮ್ಮ ಮಾನ್ಯ ಗವರ್ನರ್ ಲಾರ್ಡ್ ಇರಸ್ಕೈನ್‌ರವರು, ಪತ್ನೀಸಮೇತರಾಗಿ ದಯಮಾಡಿಸಿದ್ದರು. ಈ ಸಂದರ್ಭದಲ್ಲಿ, ಅಲ್ಲಿನ ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರವರಿಗೆ 'ಸಚಿವೋತ್ತಮ'ರೆಂಬ ಬಿರುದು ದಯಪಾಲಿಸಲ್ಪಟ್ಟಿತು.

ನಾಗಪುರದ ದಿ॥ ನ್ಯಾಜಸ್ಟೇಟರು, ಅಲ್ಲಿನ 'ಮಹಾರಾಷ್ಟ್ರ' ವೆಂಬ ಪತ್ರಿಕೆ, 'ನೈಝಾಮರವರ ಸರಕಾರವು, ಅಲ್ಲಿನ ಹಿಂದೂ ಪ್ರಜೆಗಳನ್ನು ನಡೆಸಿದ ವಿಷಯದಲ್ಲಿ ಆರೋಪಗಳುಳ್ಳ ಲೇಖನ'ಗಳನ್ನು ಆಗಾಗ ಪ್ರಕಟಿಸಿದ ಸಂಬಂಧ, ಆ ಪತ್ರಿಕಾಧಿಕಾರಿಗಳಾದ ಮಿ. ಓಗ್ಲೇಯವರಿಂದ ೩ ಸಾವಿರ ರುಪಾಯಿಗಳ ಸೆಕ್ಯುರಿಟಿಯನ್ನು ಕೇಳಿದ್ದಾರೆ.

ಮದ್ರಾಸಿನ 'ಪೀಪಲ್ಸ್ ಪಾರ್ಟಿ'ಯ ಪರವಾಗಿ, 'ಪೀಪಲ್ಸ್ ವಾಯ್ಸ್' ಎಂಬ ಆಂಗ್ಲ ನಿತ್ಯಪತ್ರಿಕೆಯೊಂದು ಮದ್ರಾಸಿನಿಂದ ಹೊರಟಿದೆ. ಪಿತ್ತಪುರದ ಮಹಾರಾಜರು ಈ ಪಾರ್ಟಿಯ ಮುಖಂಡರು. ಶ್ರೀ. ಕೆ. ಈಶ್ವರ ದತ್ತರವರು ಈ ಪತ್ರಿಕೆಯ ಸಂಪಾದಕರು.

ಮೂಲ್ಕಿ ಪಾವಂಜೆ ಲಕ್ಷ್ಮೀನಾರಾಯಣ ಹರಿದಾಸರ

ಹರಿಕೀರ್ತನಾವಳಿ

ಹರಿದಾಸರ ಭಾವಚಿತ್ರ—ಜೀವನಚರಿತ್ರೆ ಸಹಿತ ಬೆಲೆ 0—8—0.

ಎಲ್ಲ ಪುಸ್ತಕವ್ಯಾಪಾರಿಗಳಲ್ಲೂ ದೊರೆವುದು.

ಟಪ್ಪಾಲಿನಲ್ಲಿ ಒಂದೇ ಪ್ರತಿ ಅಪೇಕ್ಷಿಸುವವರು ೩½ ಆಣೆ ಅಂಚೆಚೀಟು ಕಳುಹಿಸಬೇಕು.

ವಿಳಾಸ:— ವಿಕ್ಟೋರಿಯಾ ಮುದ್ರಾಶಾಲೆ,

12, 25—8. ಬಂಟ್ವಾಳ, ದ. ಕ.

ಆರೋಗ್ಯ

ಮತ್ತು

ಚೈತನ್ಯ

ಕ್ಕಾಗಿ

ಒಕಾಸಾ

ಸೇವಿಸಿ.

ಈ ಅತ್ಯುತ್ಕೃಷ್ಟವಾದ ಹೊರ್ಮೋನ್ ಟಾನಿಕಿನ ಪಾತ್ರೆಯಿಯೂ ತೀರ್ವವೂ ಆದ ಗುಣಕ್ಕೆ ಹೋಲಿಸಲು ಬರುವ ಅಥವಾ ಸಮೀಪವರ್ತಿಯಾಗಿರುವ ಬೇರಾವುದೂ ಇಲ್ಲ.



ಒಕಾಸಾದಲ್ಲಿ ವಿಪುಲವಾದ ಆರೋಗ್ಯವನ್ನೂ, ಚೈತನ್ಯವನ್ನೂ ದೊರಕಿಸಿಕೊಡುವ ಪದಾರ್ಥಗಳಿವೆ; ಅದು ನಿಮ್ಮ ದೇಹರಚನೆಯಲ್ಲಿರುವ ನಿಶ್ಶಕ್ತ ಮತ್ತು ನಿತ್ರಾಣದ ಪ್ರತಿಯೊಂದು ಜೀವ್ಮೆಯನ್ನೂ ಸಂಪೂರ್ಣವಾಗಿ ಹೋಗಲಾಡಿಸುತ್ತದೆ; ನಿಮ್ಮನ್ನು ಉತ್ತಮ ಆರೋಗ್ಯ, ಬಲವಾದ ನರ, ಹೆಚ್ಚಿನ ಶಕ್ತಿ ಮತ್ತು ವೃದ್ಧಿಯಾದ ಚೈತನ್ಯ ಇವುಗಳಿಂದ ಕೂಡಿದ ಒಬ್ಬ ಹೊಸ ಮನುಷ್ಯನನ್ನಾಗಿ ಮಾಡುತ್ತದೆ.

ತರುಣರಾಗಿ.

ಒಕಾಸಾವರೆಗೂ.

ಅದನ್ನು ಪಡೆಯಿರಿ, ನಿಮ್ಮ ಕೆಮಿಸ್ಟರಿಂದ ಅಥವಾ

OKASA CO., BERLIN (INDIA), LTD.,
12, Rampart Row, Fort,
P. O. Box 396, BOMBAY.

ಜಾನ್ಸಿಯ ಸವಿಾಪದ ಒಂದು ಹಳ್ಳಿ; ಅಲ್ಲೊಂದು ೨ ವರ್ಷದ ಗಂಡು ಮಗು. ಹುಟ್ಟುವಾಗಲೇ ಕುರುಡು. ಆದರೂ ಈ ಮಗು ಒಬ್ಬನು ಸೂಚಿಸುವ ರಾಮಾಯಣ, ಮಹಾಭಾರತದ ಯಾವ ಅಧ್ಯಾಯವನ್ನಾದರೂ, ಬಾಯಿಪಾಠ ಹೇಳಲು ಶಕ್ತವಾಗಿದೆ. ಗೀತೆಯ ಅತ್ಯಂತ ಕಠಿನ ಶ್ಲೋಕಗಳಾದರೂ ತಪ್ಪಿಲ್ಲದೆ ಹೇಳುತ್ತದೆ. ಈ ಆಶ್ಚರ್ಯವನ್ನು ನೋಡಲು, ಮಗುವಿನ ದರ್ಶನ ಮಾಡಲು ನಿತ್ಯವೂ ನೂರಾರು ಜನರು ಅಲ್ಲಿಗೆ ಬರುತ್ತಿದ್ದಾರೆ. ಈ ಮಗು ಸಾಧು ಸೂರ್‌ದಾಸ್‌ನ ಅವತಾರವೆಂದು ಜನರ ನಂಬಿಕೆ!

ದಿಲ್ಲಿಯಲ್ಲಿ ಮಕ್ಕಳನ್ನು ಕರೆದೊಯ್ದು, ಆ ಮೇಲೆ ಇಂತಿಷ್ಟು ರುಪಾಯಿಗಳನ್ನು ಕೊಟ್ಟಲ್ಲಿ ಅವನ್ನು ಹಿಂದಿರುಗಿಸುವೆವೆಂದು ರಕ್ಷಕರಿಗೆ ತಿಳಿಸಿ ಕೊನೆಗೆ ಆ ಹಣ ಬಂದ ಮೇಲೆ ಆ ಮಕ್ಕಳನ್ನು ಹಿಂದೆ ಕಳುಹುವ ಮೋಸಕೃತ್ಯಗಳು ದಿಲ್ಲಿಯಲ್ಲಿ ಆಗಾಗ ನಡೆಯಲಾರಂಭಿಸಿವೆ. ಅಮೆರಿಕದ ಈ ಸಂತೆ ಹಿಂದು ಸ್ಥಾನಕ್ಕೂ ಈಗ ಬಂತೇ?

ದ. ಕನ್ನಡ

ಧರ್ಮಸ್ಥಳ:—ಇದೇ ಬರುವ ಕಾರ್ತಿಕ ಬ। ೧೧ಯು ಬುಧವಾರ ತಾರೀಕು ೯—೧೨—೩೬ ಮೊದಲ್ಗೊಂಡು ಬ। ೩೦ಯು ರವಿವಾರ ತಾರೀಕು ೧೩—೧೨—೩೬ ವರೆಗೆ ಇಲ್ಲಿಯ ದೀಪೋತ್ಸವ ಜಾತ್ರೆಯು ಆಗುವುದು. ಈ ಮೊದಲು ತಿಳಿಸಿದಂತೆ, ವಸ್ತುಪ್ರದರ್ಶನವು ಕಾರಣಾಂತರದಿಂದ ಈ ವರ್ಷಕ್ಕೆ ನಿಲ್ಲಿಸಲ್ಪಟ್ಟು ವಿವಿಧ ಧರ್ಮಸಮ್ಮೇಳನವನ್ನು ಮಾತ್ರ ಜರಗಿಸುವುದಾಗಿದೆ.

ಸಮ್ಮೇಳನವು ಡಿಸೆಂಬರು ತಿಂಗಳು ೧೨ ಮತ್ತು ೧೩ನೇ ಶನಿವಾರ ಮತ್ತು ರವಿವಾರ ಎರಡು ದಿವಸಗಳಲ್ಲಿ ಮಧ್ಯಾಹ್ನ ೨ ಗಂಟೆಯ ನಂತರ ೫ ಗಂಟೆವರೆಗೆ ನಡೆಯಬೇಕಾಗಿ ಸಂಕಲ್ಪ. ಸಮ್ಮೇಳನದ ಪ್ರಾರಂಭೋತ್ಸವವನ್ನು ಮೊದಲನೆ ದಿವಸ ಶ್ರವಣಬೆಳ್ಗೊಳ ಮಠದ ಸ್ವಸ್ತಿ ಶ್ರೀ ಚಾರುಕೀರ್ತಿ ಸ್ವಾಮಿಗಳವರು (ಶ್ರೀ ಸೇಮಿಸಾಗರ ಸ್ವಾಮಿಯವರು) ಪ್ರಾರಂಭಿಸುವರು. ಶ್ರೀಯುತ ಕೆ.ಎಸ್. ನರಸಿಂಗರಾವ್, ಬಿ. ಎ., ಎಲ್. ಎಲ್., ನಿವೃತ್ತ ಜಡ್ಜರು ಅಧ್ಯಕ್ಷಸ್ಥಾನವನ್ನು ವಹಿಸುವರು. ಬೇರೆ ಬೇರೆ ಮತಾನುಯಾಯಿಗಳಾದ ಯೋಗ್ಯ ವಿದ್ವಾಂಸರು ಸಭೆಯಲ್ಲಿ ಮಾತಾಡಲಿಕ್ಕಿರುವರು.

ಪ್ರಥಮ ದಿವಸದಲ್ಲಿ,

'ತಮ್ಮ ಮತದ ಸನಾತನತ್ವಸಮರ್ಥನ'

ಎರಡನೆ ದಿವಸದಲ್ಲಿ,

'ವಿಶ್ವಪ್ರೇಮ' ಎಂಬ ವಿಷಯಗಳ ಕುರಿತು ಭಾಷಣಗಳು ಮಾಡಲ್ಪಡುವುವು. ಈ ಮಧ್ಯೆ 'ಅರ್ಥಿಕರಹಸ್ಯ'ವೆಂಬ ವಿಚಾರದಲ್ಲಿಯೂ ಆ ವಿಷಯ ತಿಳಿದ ಮಹನೀಯರುಗಳಿಂದ ಭಾಷಣ ಕೊಡುವಂಥ ಏರ್ಪಾಡು ಮಾಡಲ್ಪಡುವುದು.

ಈ ಸಭೆಯಲ್ಲಿ ಮುಂಚಾಗಿ ನಿರ್ಣಯಿಸಿದ ಮಹನೀಯರಲ್ಲದೆ ಬೇರೆಯವರಿಗೆ ಭಾಷಣ ಮಾಡಲು ಅವಕಾಶ ದೊರೆಯಲಾರದು.

ಮಾರ್ಗಶಿರ ಶು। ೧ಯು ಸೋಮವಾರ ಶ್ರೀ ಚಂದ್ರನಾಥಸ್ವಾಮಿ ಸನ್ನಿಧಿಯಲ್ಲಿ ಅಷ್ಟವಿಧಿಗೆ ಅಭಿಷೇಕ ಪೂಜೆ ನಡೆಯಲಿಕ್ಕಿದ್ದು, ಧಾರ್ಮಿಕ ಭಾಷಣಗಳಾಗುವುವು.

ಮುಂಡ್ಕೂರು:—ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಾಮಾನ್ಯ ಸಭೆಯು ಸೆಂಟರ್ ಶಾಲೆಯಲ್ಲಿ ತಾ. ೬—೧೧—೩೬ರಲ್ಲಿ ಉಳೆಪಾಡಿ ಬೋರ್ಡು ಶಾಲೆಯ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಾಹಿರಿ ಪಾಠ, ಸರ್ಕಿಟ್ ಸಭೆಯ ಪ್ರಯೋಜನದ ಕುರಿತು ಭಾಷಣ ಇತ್ಯಾದಿ ಕಾರ್ಯಕ್ರಮಗಳು ಜರಗಿ ಅನಂತರ ಅಧ್ಯಕ್ಷರ ಭಾಷಣದಿಂದ ಸಭೆಯು ಕೊನೆಗೊಂಡಿತು.

ಮುಂಡ್ಕೂರು ಪಂಚಾಯತಿ ಬೋರ್ಡಿನ ಪ್ರೋತ್ಸಾಹದಿಂದ ಸಾರ್ವಜನಿಕ ವಾಚನಮಂದಿರ, ಪುಸ್ತಕ ಭಂಡಾರ, ಕಾಲುಜೆಂಡಿನ ಕೂಟ ಇತ್ಯಾದಿಗಳು ಏರ್ಪಟ್ಟಿರುವುದು ಸಂತೋಷಕರ.

ಪಡ್ಪೆ:—ಕಳೆದ ತಾ. ೭ನೇ ಮಧ್ಯಾಹ್ನ ಘಂಟೆ ೧೯ಕ್ಕೆ 'ಪಡ್ಪೆ ಮುಸ್ಲಿಂ ಸೆಂಟರ್' ಅಧ್ಯಾಪಕರ ಒಂದು ಸಭೆಯು ಜೀವರತ್ನರು ಬೋರ್ಡು ಮಾಪಿಳಾ ಶಾಲೆ ಹೋಲನಲ್ಲಿ ಶ್ರೀ. ಸಿ. ನಾರಾಯಣನ್ ಸಂಬ್ಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಪರದಿ ವಾಚನ ಇತ್ಯಾದಿ ಕಾರ್ಯಕ್ರಮಗಳೂ ಅಧ್ಯಕ್ಷರ ಅರ್ಥಗರ್ಭಿತವಾದ ಉಪಸಂಹಾರಪ್ರಸಂಗವೂ ಆದ ಮೇಲೆ ಸಭೆ ಮುಕ್ತಾಯವಾಯಿತು.

ಕುಂದಾಪುರ:—ಈ ತಾಲೂಕಿನ ಉಪಾಧ್ಯಾಯರ ಸಹಕಾರ ಸಂಘದ ವರ್ಧಂತಿಯು ತಾ. ೨೧ನೇ ಶನಿವಾರ ಅ. ಘ. ೨-೩೦ಕ್ಕೆ ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಜರಗುವುದು. ಹೊಸ ವರ್ಷದ ಅಡಕತೆ ಸಭೆಯು ಮೆಂಬರರನ್ನು ಅರಿಸಲಿಕ್ಕಿರುವುದರಿಂದ ಮೆಂಬರರೆಲ್ಲರೂ ಹಾಜರಾಗಬೇಕಾಗಿ ವಿನಂತಿ.

ಇಲ್ಲಿಯ ಮುನ್ಸೀಫ್ ಕೋರ್ಟಿನ ನಾಜರರಾದ ರಾ. ಸಂಕಪ್ಪಯ್ಯನವರು (ಶಂಕರನಾರಾಯಣ ರಾಯರು) ಇದೇ ಕಳೆದ ತಾ. ೧೩ನೇ ಶುಕ್ರವಾರ ಬೆಳಿಗ್ಗೆ ೮ ಘಂಟೆ ಸಮಯ ದೈವಾಧೀನರಾದರು. ಮೃತರು ಯೋಗ್ಯ ಬ್ರಾಹ್ಮಣ ಮನೆತನದಲ್ಲಿ ಜನಿಸಿದವರಾಗಿದ್ದು ಶ್ರೀಮಂತರಾಗಿಯೂ ಇದ್ದರು. ಬಡಬರಿಗೆ ಹೆಂಬಾ ಉಪಕಾರಿಗಳಾಗಿದ್ದರು. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ.

ಇದೇ ತಾ. ೨೧ಕ್ಕೆ ಜರಗಲಿರುವ ಕರ್ನಾಟಕ ಸಾಹಿತ್ಯ ಸಂಘದ ಯಕ್ಷಗಾನ ಸಭೆಗೆ ಮಂಗಳೂರಿಂದ ಶ್ರೀ. ಮುಳಿಯ ತಿಮ್ಮಪ್ಪಯ್ಯನವರು, ಶ್ರೀ. ನಾರಾಯಣ ಕಿಲ್ಲೆಯವರು ಶ್ರೀ. ಮುಲ್ಪೆ ಶಂಕರನಾರಾಯಣ ಸಾಮುಕರು, ಅಕ್ಕುಳ ಎಫ್. ಎಚ್. ಒಡೆಯರು, ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು ಮೊದಲಾದವರು ಬರುತ್ತೇವಾಗಿ ಒಪ್ಪಿಕೊಂಡಿರುವರು. ಕುಂದಾಪುರದ ಸುಪ್ರಸಿದ್ಧ ಅರ್ಥಗಾರರೂ ಸೇರಲಿರುವರು.—ಎಂದು ತಿಳಿದುಬರುತ್ತದೆ.

ಸುರತ್ಕಲ್:—'ಆರೋಗ್ಯ ವಾರ' ಸಪ್ತಾರಂಭವು ಸ್ಥಳೀಯ 'ಪಂಚಾಯತ ಬೋರ್ಡ್'ನವರಿಂದ ಸಂಭ್ರಮದಿಂದ ನೆರವೇರಿಸಲಾಯಿತು. ಅಂದು ಬೆಳಿಗ್ಗೆ ಮಕ್ಕಳಿಗೆ ತೀಡಿ ಹಂಚೋಣದ ಸಮಾರಂಭವೂ ಶ್ರೀ। ಐ. ಕೃಷ್ಣ ರಾವ್ ಮತ್ತು ಶ್ರೀ। ಎಸ್. ಆರ್. ಹೆಬ್ಬಾರರುಗಳ ಭಾಷಣಗಳೂ ಇದ್ದುವು. ಅಪರಾಹ್ನ ೧ ಗಂಟೆ ೩ರಿಂದ ೪-೧೫ರ ವರೆಗೆ ರಾ। ಹೆಲ್ತ್ ಇನ್ಸ್‌ಪೆಕ್ಟರರೊಂದಿಗೆ ಪಂಚಾಯತ ಬೋರ್ಡ ಸಮಿತಿಯವರು ಸ್ಥಳೀಯ ಕಾಫೀ ಹೋಟಲುಗಳನ್ನು ಸಂದರ್ಶಿಸಿ ನಿರ್ಮಲಾದಿಗಳ ಕುರಿತು ಅನೇಕ ಉತ್ತಮ ಸಲಹೆಗಳನ್ನಿತ್ತು ಎಚ್ಚರಿಸಿದರು. ಗಂಟೆ ೪-೩೦ಕ್ಕೆ ಸರಿಯಾಗಿ 'ಸಹಕಾರ ಮಂದಿರ'ದಲ್ಲಿ, ಶ್ರೀ। ಇಡ್ಯ ಪದ್ಮನಾಭಯ್ಯನವರ ಅಧ್ಯಕ್ಷತೆಯಲ್ಲಿ 'ಸಾರ್ವಜನಿಕ ಸಭೆ'ಯು ಜರಗಿತು. ರಾ। ಹೆಲ್ತ್ ಇನ್ಸ್‌ಪೆಕ್ಟರರಿಂದ ಪ್ರಾರಂಭದ ಭಾಷಣವೂ, 'ಆರೋಗ್ಯಪಾಲನೆಯಲ್ಲಿ ಗ್ರಾಮಸ್ಥರ ಕರ್ತವ್ಯಗಳು' ಎಂಬುದರ ಕುರಿತು ತುಳು ಮತ್ತು ಕನ್ನಡ ಪುಡಿಗಳಲ್ಲಿ ಶ್ರೀ। ಎಸ್. ಆರ್. ಹೆಬ್ಬಾರ್ ಮತ್ತು ಶ್ರೀ। ತಮ್ಮಣ್ಣಯ್ಯ—ಇವರುಗಳಿಂದ ಸುರಸ ಭಾಷಣಗಳೂ ಆದ ಬಳಿಕ 'ಪಂಚಾಯತ ಬೋರ್ಡ' ಅಧ್ಯಕ್ಷರಾಪ್ತ ಶ್ರೀ। ಎಸ್. ಬಾಬುರಾಯ ಕಾಮತರು ಉತ್ತಮ ಭಾಷಣ ಮಾಡಿದರು. ತರುವಾಯ ರಾ। ಹೆಲ್ತ್ ಇನ್ಸ್‌ಪೆಕ್ಟರರಿಂದ 'ಆರೋಗ್ಯ ಬೋಧೆ'ಯ ಛಾಯಾಚಿತ್ರಪ್ರದರ್ಶನವಾದ ಬಳಿಕ, ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ಕರ್ನಾಟಕ

ಬಳ್ಳಾರಿಯಲ್ಲಿ ಪೋಲೀಸರು, ಗಾಜಿ ಎಸ್. ಕಳವಾಳ ಎಂಬವನನ್ನು, ಕೈದುಮಾಡಿದ್ದಾರೆ. ಅತನು ಮೈಸೂರ ಮುಸಲ್ಮಾನ ಅನಾಥಾಲಯದ ಹೆಸರಿನಿಂದ ನಿಧಿಸಂಗ್ರಹ ಮಾಡಿ ಅದನ್ನು ತಾನೇ ಉಪಯೋಗಿಸಿಕೊಳ್ಳುತ್ತಿದ್ದನೆಂಬದು ಈತನ ಮೇಲಿನ ಆಪಾದನೆ.

ಮೈಸೂರ ಸಂಸ್ಥಾನದಲ್ಲಿ ತಾಲೂಕು ಮತ್ತು ಜಿಲ್ಲಾ ಕಾಂಗ್ರೆಸ ಕಮಿಟಿಗಳನ್ನು ಸಂಘಟಿಸುವ ಕಾರ್ಯವು ನಡೆದಿದೆ. ಡಾ. ಹರ್ಡೀಕರರು, ಈ ನಿಮಿತ್ತ ಸಂಸ್ಥಾನಕ್ಕೆ ಪ್ರವಾಸಕ್ಕೆ ಬಂದಿದ್ದು, ಅವರು ಈ ವರೆಗೆ ೫ ಜಿಲ್ಲೆಗಳಲ್ಲಿ ಸಂಚಾರ ಮಾಡಿ, ಕಮಿಟಿಗಳನ್ನೂ ಸಂಘಟಿಸಿದ್ದಲ್ಲದೆ ಅಲ್ಲಲ್ಲಿ ಸಾರ್ವಜನಿಕ ಸಭೆ ಜರುಗಿಸಿ ಭಾಷಣಗಳನ್ನೂ ಮಾಡಿದರು.

ಬೆಳಗಾವಿಯಲ್ಲಿ ಶ್ರೀ. ಪಂಡಿತಪ್ಪ ಚಿಕ್ಕೋಡಿ ಇವರ ಸಂಪಾದಕತ್ವದ ಕೆಳಗೆ 'ವಿಭಾಕರ'ವೆಂಬ ಕನ್ನಡ ದಿನಪತ್ರಿಕೆಯು ಸದ್ಯದಲ್ಲೇ ಹೊರಡತಕ್ಕದ್ದಿದೆ.

ಬೆಂಗಳೂರಲಿ ೫ ಮೈಲುಗಳ ವಿಸ್ತೀರ್ಣದಲ್ಲಿ ಎಲ್ಲರೂ ಗಾನ-ಭಾಷಣಗಳನ್ನು ಕೇಳುವಂತೆ, ಒಂದು ರೇಡಿಯೊ ಸ್ಟೇಶನ್, ಸದ್ಯದಲ್ಲಿಯೇ ತೆರೆಯಲ್ಪಡುವುದು.

ಮೈಸೂರು ಸಂಸ್ಥಾನದ ವಿದ್ಯಾಶಾಖೆಯ ಸಮ್ಮೇಳನವು ಇದೇ ಡಿಸಂಬರ ತಾ. ೨೧, ೨೨, ೨೩ರಲ್ಲಿ ಚಿಕ್ಕಮಗಳೂರಲ್ಲಿ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ. ಇ. ಜಿ. ಮೆಕ್ ಅಲ್ಪ್ಯೆನ್, ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಜರಗುವುದು.

KANTI
Toilet Soap

ಚರ್ಮಕ್ಕೆ ತಾವರೆಯ ಪ್ರಭೆಯನ್ನು ಕೊಡುತ್ತದೆ

ಶುದ್ಧ ವನಸ್ಪತಿತೈಲಗಳಿಂದ ಸಿದ್ಧವಾಗಿ ಅನಂದಕರ ಸುಗಂಧದ್ರವ್ಯಗಳಿಂದ ಸುವಾಸಿತವಾಗಿದೆ. ಕಡಿಮೆ ಬೆಲೆಯಲ್ಲಿ, ವಿಲಾಸದ, ಶೃಂಗಾರದ ಒಂದು ಸಾಬೂನು.

ಸ್ವಸ್ತಿಕಾ ಆಯಿಲ್ ಮಿಲ್ಸ್, ಲಿಮಿಟೆಡ್
ವಡಾಲಾ - ಬೊಂಬಾಯಿ 15

ನನ್ನ ಉನ್ನತಿಯನ್ನೇ ನಾನು ಕಳಕೊಳ್ಳುತ್ತಿದ್ದೆ.
ನಾನು ಮೂರು ತಿಂಗಳ ರಜೆ ಪಡೆದು ಕೊಳ್ಳುವೆನು ಮತ್ತು ನಿಮ್ಮನ್ನು ನನ್ನ ಸ್ಥಾನದಲ್ಲಿ ನೇಮಿಸುವೆನು. ಅಂದರೆ ನೀವು ಸರಿಯಾಗಿ ಕೆಲಸ ನಡೆಸಿದರೆ ನಿಮಗೆ ಉನ್ನತ ಪದವಿ.
ನಾನು ಕಂಪೆನಿಯ ಕೈ ಬದುತ್ತಿದ್ದೇನೆ. ನನಗೆ ಲಾದ ಮಟ್ಟಿಗೆ ಕೆಲಸ ನಿರ್ವಹಿಸೋಣವೆಂದರೆ ಬಹಳ ಆಯಾಸವಾಗುವುದು
ನೀವು ವೈದ್ಯರಿಂದ ಪರೀಕ್ಷಿಸಿ ಕೊಳ್ಳಲೇ ಬೇಕು
ಹೌದು. ನೀವು ನರಗಳ ಅಬಲತೆಯಿಂದ ನರಳುವಿರಿ. ನಿಮ್ಮಲ್ಲಿ ಹೊಸ ಶಕ್ತಿಯನ್ನು ನೀವು ಎಷ್ಟು ಬೇಗನೇ ಪಡೆಯುವುದಿಲ್ಲಾ- ಅದಕ್ಕೆ ರಾತ್ರಿಮಲಗುವಾಗ ಹೋರ್ಲಿಕ್ಸ್ ತೆಗೆದುಕೊಳ್ಳುವುದು ಉತ್ತಮ
ಅಭಿನಂದನೆಗಳು! ಎಲ್ಲವೂ ಸುವ್ಯವಸ್ಥಿತವಾಗಿದೆ. ಹೇಗೆ? ಜಿಲ್ಲಾಅಧಿಕಾರಿಯ ಕೆಲಸವನ್ನು ಇಷ್ಟು ಸುಲಭವೇನು
HORLICKS

ಯಾವಾಗಲೂ ಆಯಾಸದಿಂದಿದ್ದರೆ ನಿಮಗೆ ಎಂದಿಗೂ ಜಯ ದೊರಕುವುದಿಲ್ಲ

ನಿಮಗೆ ಯಾವಾಗಲೂ ಆಯಾಸ ತೋರಿದರೆ ನಿಮ್ಮ ಶಕ್ತಿಯಷ್ಟು ಕೆಲಸ ಮಾಡಲಾರಿರಿ: ಇದಕ್ಕೆ ನಿಮ್ಮ **ನರಗಳ ಅಬಲತೆಯೇ** ಕಾರಣ. ಅಂದರೆ ವೆಚ್ಚವಾದ ಶಕ್ತಿಯನ್ನು ಬೇಗನೆ ಹೊಂದದಿರುವುದು, ಮುಂಜಾನೆ ಏಳುವಾಗ ದೇಹಾಲಸ್ಯವಿದ್ದು ದಿನವಹಿ ಕೆಲಸ ನಡೆಸಲು ಶಕ್ತಿ ಸಾಲದಿದ್ದರೆ ರಾತ್ರಿ ಮಲಗುವಾಗ ಒಂದು ಗ್ಲಾಸ್ ಹೋರ್ಲಿಕ್ಸ್‌ನ್ನು ಸೇವಿಸಿರಿ. ಅದು ನಿದ್ರಿಸುವಾಗ **ನರಗಳ ಅಬಲತೆ**ಯನ್ನು ಹೋಗಲಾಡಿಸಿ ವೆಚ್ಚವಾದ ಶಕ್ತಿಯನ್ನು ನಿಶ್ಚಯವಾಗಿಯೂ ಶೀಘ್ರದಲ್ಲೇ ಒದಗಿಸುವುದು.

ಹಸುವಿನ ರಸವತ್ತಾದ ಕೆನೆ, ಹಾಲಿನ ಬಳ್ಳೆಯ ಅಂಶ, ಗೋಧಿ, ಜವೇ ಗೋಧಿಗಳ ಪುಷ್ಟಿದಾಯಕವಾದ ಸತ್ವ ಸಾರ-ಇವುಗಳು ಹೋರ್ಲಿಕ್ಸ್‌ನಲ್ಲಿವೆ.
ಇದರಲ್ಲಿ ಪಿಷ್ಟಾಂಶವಿಲ್ಲ.

ಹೊರ್ಲಿಕ್ಸ್ ನರಗಳ ಅಬಲತೆಯನ್ನು ಹೋಗಲಾಡಿಸುವುದು.

ವಿಜ್ಞಾನ ಮತ್ತು ಧರ್ಮಗಳ ಸಂಘರ್ಷದಿಂದ ಸಾಹಿತ್ಯ

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ವಿಜ್ಞಾನವನ್ನು ಸಮರ್ಥಿಸುವ ಮತ್ತು ವಿಜ್ಞಾನವನ್ನು ಖಂಡಿಸುವ ಹೀಗೆ ಎರಡು ವಂಗಡಗಳಾಗಿ ಧರ್ಮ ಮತ್ತು ವಿಜ್ಞಾನಗಳೊಳಗೆ ಮಹಾ ಸಂಘರ್ಷಣೆಯಾಗುತ್ತಲಿತ್ತು. ಹತ್ತೊಂಭತ್ತನೇ ಶತಮಾನದ ಆರಂಭದಲ್ಲೇ ವಿಜ್ಞಾನ ಸಾಹಿತ್ಯದ ಶಕ್ತಿಯು ಬೆಳೆಯ ತೊಡಗಿ ಅರ್ಧ ಶತಮಾನಕ್ಕಾಗುವಾಗ ಬಲವಾಗಿಬಿಟ್ಟಿತು. ವಿಜ್ಞಾನವು ಭೌತಿಕ ಚಮತ್ಕಾರದಿಂದ ಜನತೆಯ ತಾರ್ಕಿಕಬುದ್ಧಿಯನ್ನು ತೃಪ್ತಿಗೊಳಿಸತೊಡಗಿತು. ಮತ್ತು ವಿಜ್ಞಾನವು ಹೊಸ ಹೊಸ ಆವಿಷ್ಕಾರಗಳಿಂದ ಜನರಲ್ಲಿ ಸಾಹಿತ್ಯ ಮತ್ತು ದರ್ಶನಗಳಿಂದ ಹೆಚ್ಚು ಉಪಯುಕ್ತವಾದುದೆಂಬುದನ್ನೂ ಸೃಷ್ಟಿರಹಸ್ಯವನ್ನು ಬಿಡಿಸಲಿಕ್ಕೆ ವಿಜ್ಞಾನವೇ ಸಮರ್ಥವೆಂಬುದನ್ನೂ ಮುಂದಟ್ಟುವಾಡತೊಡಗಿತು. ವಿಜ್ಞಾನದ ನವನೂತನ ಆವಿಷ್ಕಾರಗಳಿಂದ ಜನತೆಯಲ್ಲಿ ನಿಜವಾದ ಜ್ಞಾನ ವಿಜ್ಞಾನ, ವಿಜ್ಞಾನದಿಂದಲೇ ಲೋಕೋದ್ಧಾರವೆಂಬ ಭಾವನೆಯು ಹುಟ್ಟಿತು. ವಿಜ್ಞಾನದ ಉನ್ನತಿಯೊಂದಿಗೆ ಯಂತ್ರಗಳೂ ಅಭಿವೃದ್ಧಿಗೊಂಡುವು. ಯಂತ್ರಗಳು ಬೆಳೆದಂತೆ ಮಜೂರರ ಸಮಸ್ಯೆಯು ಮುಂದೆ ಬಂತು. ಹತ್ತು ಮಂದಿಯ ಕೆಲಸವನ್ನು ಒಂದು ಯಂತ್ರವು ಮಾಡುವುದರಿಂದ ನಿರುದ್ಯೋಗದ ರೋಗವು ಪ್ರಬಲವಾಯಿತು. ಸಂಬಳ ಕಡಿಮೆ, ಕೆಲಸದ ಸಮಯ ನಿರ್ಧಾರ ಮೊದಲಾದ ಹಲವು ಹದಿನೆಂಟು ಪ್ರಶ್ನೆಗಳು ಹುಟ್ಟಿದುವು. ಪುರಾತನ ಸಭ್ಯತೆಯು ಪಂಚಾಂಗದಲ್ಲೇ ಅಲುಗತೊಡಗಿ ವಿಜ್ಞಾನದ ಪ್ರವಾಹದಿಂದ ಸತ್ಯ-ಧರ್ಮ-ಶಾಂತಿಗಳು ನಾಶವಾಗುವುವೋ ಎಂಬ ಭಯಕ್ಕಾರಂಭವಾಗಿತ್ತು. ಸತ್ಯ ಮತ್ತು ಧರ್ಮಗಳನ್ನು ವಿಜ್ಞಾನದ ಆಕ್ರಮಣದಿಂದ ರಕ್ಷಿಸುವ ವಿಷಯದಲ್ಲಿ ವಿದ್ವಾಂಸರಲ್ಲಿ ವಿವಾದವುಂಟಾಗಿತ್ತು. ಹಳೆ ಹೊಸ ವಿಷಯಗಳ ಖಂಡನ-ಮಂಡನಗಳು ಜೋರಿನಿಂದ ಸಾಗಿತು. ಈ ಸಂಘರ್ಷಣಾಕಾಲದಲ್ಲಿ ಹಲವು ಪ್ರತ್ಯೇಕ ರೀತಿಯ ಸಾಹಿತ್ಯ ಹುಟ್ಟಿತು.

ಡಾರ್ವಿನನ 'Origin of the Species' ಎಂಬ ಪ್ರಸಿದ್ಧ ಗ್ರಂಥ ೧೮೫೯ರಲ್ಲಿ ಪ್ರಕಟವಾಯಿತು. ಸಾಮಯಿಕ ವಿಚಾರಗಳ ಮೇಲೆ ಅನುಕೂಲ-ಪ್ರತಿಕೂಲಗಳೆರಡೂ ಭಾಗಗಳಿಂದ ಹೆಚ್ಚು ಪ್ರಭಾವ ಬಿತ್ತು. ಕ್ರಮಿಕ ವಿಕಾಸದಿಂದ ಪ್ರಾಣಿಗಳ ಜಾತಿಭಿನ್ನತೆಯ ಸಿದ್ಧಾಂತವು ಪುರಾತನ ಐತಿಹಾಸಿಕ ಮತ್ತು ಧಾರ್ಮಿಕ ದೃಷ್ಟಿಯವರಿಗೆ ತೀರ ವಿರುದ್ಧವಾಗಿತ್ತು. ಡಾರ್ವಿನನು ಧಾರ್ಮಿಕ ವಿಶ್ವಾಸಗಳನ್ನಾಕ್ಷೇಪಿಸದಿದ್ದರೂ ಆತನ ಅನುಯಾಯಿಗಳು ಧಾರ್ಮಿಕ ವಿಶ್ವಾಸಗಳ ಮೇಲೆ ತುಂಬಾ ವಿವಾದ ನಡೆಸಿದರು. ತೋಮಸ್ ಹೆನ್ರಿ ಹಕ್ಸ್ಲೆಯು ವಿಜ್ಞಾನವಾದವನ್ನು ದೃಢಮೂಲಗೊಳಿಸಲಿಕ್ಕಾಗಿ ಬಹಳ ಪರಿಶ್ರಮ ಪಟ್ಟು ಧಾರ್ಮಿಕ ಪಂಗಡದವರೊಡನೆ ತುಂಬಾ ಜಗಳಾಡಿದನು. 'ಭೌತಿಕ ಪ್ರಕೃತಿಯಿಂದ ಹೊರಗಾದ ವಿಷಯವೇ ಇಲ್ಲ'ವೆಂದು ಆತನು ಕಂಡಿತನುಡಿದನು. ಧಾರ್ಮಿಕರನ್ನು ಅಜ್ಞೇಯವಾದಿಗಳೆಂದು ಕೂಡ ಕರೆದನು. ಸಾಮುವೆಲ್ ಬಟ್ಲರನೆಂಬವನು ಧಾರ್ಮಿಕ ಸಿದ್ಧಾಂತಗಳನ್ನೂ ಹಳೆ ಕಟ್ಟುಗಳನ್ನೂ ಕಟುವಾಗಿ ವಿಮರ್ಶಿಸಿದನು. ಚರ್ಚ್ ಮತ್ತು ಪಾದ್ರಿಗಳನ್ನು ಛಿನ್ನಭಿನ್ನ ಮಾಡಿದನು. ಡಾರ್ವಿನನ ಮುಖ್ಯಾನುಯಾಯಿಗಳಲ್ಲಿ ಇವನೂ ಒಬ್ಬನು.

ಆ ಕಾಲದ ಸಾಹಿತ್ಯದ ಮಹಾರಥಿಕರೆಲ್ಲಾ ವಿಜ್ಞಾನದ ಕಡೆಗಿರದೆ ಧರ್ಮದ ಕಡೆಗಿದ್ದರು. ಕಾರ್ಲಾಯಿಲ್, ರಸ್ಕಿನ್, ಟೆನಿಸನ್, ಬ್ರೌನಿಂಗ್ ಮೊದಲಾದವರು ಕ್ರೈಸ್ತಧರ್ಮವನ್ನು ವೈಜ್ಞಾನಿಕ ಆಕ್ರಮಣಗಳಿಂದ ಕಾಪಾಡಲೋಸುಗ ಧರ್ಮಕ್ಕೆ ಹೊಸ ರೂಪ ಕೊಟ್ಟು, ಜನರ ಮುಂದಿಟ್ಟರು. ಕಾರ್ಲಾಯಿಲನು 'ಸಂಸಾರಚಕ್ರವನ್ನು ನಡೆಸುವ ಶಕ್ತಿಯು ಸತ್ಯಧರ್ಮಗಳ ಶಕ್ತಿ. ಅದನ್ನು ವಿಶ್ವಾಸದಿಂದಲೇ ತಿಳಿಯಬೇಕು. ಸಂದೇಹದರ್ಶಿಯು ಆ ವಿಷಯದಲ್ಲಿ ಏನೂ ಮಾಡಲಾರನು. ಅವನ ಜನ್ಮ ಅವಿಶ್ವಾಸದಲ್ಲೇ ಕಳೆಯಬೇಕಾದೀತು. ಕೆಲಸ ಮಾಡಲಿಕ್ಕೆ ಅವನಿಗೆ ಸಮಯ ಹೊರಕದು' ಎಂದು ಹೇಳಿರುವನು.

ವಿಜ್ಞಾನ ವಿಷಯ

'ವಿಜ್ಞಾನಿ.'

ವಿಜ್ಞಾನವಾದಿಗಳನ್ನು ತುಂಬಾ ಹೀಯಾಳಿಸಿರುವನು ಕಾರ್ಲಾಯಿಲನು ಇಂಗ್ಲಿಷರ ಮುಂದಿಟ್ಟನು. ಕಾರ್ಲಾಯಿಲನ ಮಾತಿನಲ್ಲಿ ದೈವಿಕ ಶಕ್ತಿ ತುಂಬಿ ತುಳುಕುತ್ತಿತ್ತು. 'ಸತ್ಯವ ವಿಜಯ ಕರ್ಮದ ಮಹತ್ತು' ಇದೇ ಆತನ ಗೋಸ್ಪೆಲ್.

ಟೆನಿಸನ್ನನ ಮೇಲಾದ ವೈಜ್ಞಾನಿಕ ಪ್ರಭಾವವು ಆತನು ಬರೆದ 'ಇನ್ ಮೆಮೋರಿಯಂ' ಎಂಬ ಗ್ರಂಥದಲ್ಲಿ ಕಂಡುಬರುತ್ತದೆ. ಆ ಕಾಲದ ಜನತೆಯ ಮನೋವೃತ್ತಿಯೂ ಟೆನಿಸನ್ನನ ಮನೋವೃತ್ತಿಯೂ ಒಂದೇ ತರಹದ್ದಾಗಿತ್ತು. ಕವಿಮನಸ್ಸು ಸಂದಿಗ್ಧವಾಗಿದ್ದರೂ ಅವಿಶ್ವಾಸದಿಂದ ಕೂಡಿರಲಿಲ್ಲ.

'ಕಟ್ಟಿದರ ಅಂತ್ಯವು ಕೂಡ ಒಳ್ಳೆದೆಂದೇ ನಾವು ಯೋಚಿಸುತ್ತೇವೆ.' ದೇವರು ಮತ್ತು ಧರ್ಮದ ವಿಷಯದಲ್ಲಿ ನಾವು ವಿಶ್ವಾಸವನ್ನಿಡುತ್ತೇವೆ. ಜ್ಞಾನವನ್ನು ಪಡೆವುದಿಲ್ಲ. ನಾವು ಕಣ್ಣಿನಿಂದ ನೋಡುವ ವಸ್ತುಗಳ ಜ್ಞಾನವನ್ನು ಮಾತ್ರ ಪಡೆಯಬಹುದು.

ಎಳೆದು ತಂದು ಧರ್ಮದಲ್ಲಿ ವಿಶ್ವಾಸವಿಡುವ ಪ್ರವೃತ್ತಿಯನ್ನು ಟೆನಿಸನ್ನನ ಸಮಸಾಮಯಿಕನಾದ ಬ್ರೌನಿಂಗನಲ್ಲಿ ಕಾಣಬರುವುದಿಲ್ಲ. ಬ್ರೌನಿಂಗನ ವಿಶ್ವಾಸಕ್ಕೆ ಕ್ರೈಸ್ತಧರ್ಮವೇ ಅಡಿಗಲ್ಲು. ದೇವರು ಯೇಸುವಿನ ಮೂಲಕ ಪ್ರೇಮಸಂದೇಶವನ್ನು ಮನುಷ್ಯಲೋಕಕ್ಕೆ ಕಳುಹಿಸಿರುವನು. ಪ್ರೇಮವೇ ಜೀವನದ ಶ್ರೇಷ್ಠತೆ. ದೇವರು ಲೋಕವನ್ನು ಒಳ್ಳೇ ಕೆಲಸಗಳಿಗಾಗಿ ನಿರ್ಮಿಸಿರುವನು. ಇಲ್ಲಿ ಕಾಣುವ ಕಟ್ಟಿದು ಕೂಡ ನಮ್ಮ ಒಳ್ಳೆದಕ್ಕಾಗಿಯೇ. ಈ ಜೀವನದಲ್ಲೇ ನಮ್ಮ ಅಂತ್ಯವಾಗುವುದಿಲ್ಲ;—'ನನ್ನೊಂದಿಗೆ ಮುದುಕನಾಗು; ಆಗ ಎಲ್ಲಕ್ಕಿಂತ ಒಳ್ಳೇದಾಗಲಿದೆ. ಯಾರಿಗಾಗಿ ಮೊದಲನೇ ಭಾಗವಾಗಿ ನಿರ್ಮಿತವಾಯಿತೋ ಅದೇ ಜೀವನದ ಅಂತ್ಯ ಭಾಗ. ನಾನು ಸಂಪೂರ್ಣ ಕ್ರಮಣನ್ನು ನಿಶ್ಚಯಿಸಿದ್ದೇನೆಂದು ಯಾರು ಹೇಳುತ್ತಾನೋ ಅವನ ಕೈಯಲ್ಲಿ ನಮ್ಮ ಜೀವನವಿದೆ. ಜೀವನದ ಅರ್ಧ ಕ್ರಮ ಮಾತ್ರ ಕಾಣುತ್ತದೆ. ದೇವರಲ್ಲಿ ವಿಶ್ವಾಸವಿಟ್ಟು ಎಲ್ಲವನ್ನೂ ನೋಡು, ಹೆದರಬೇಡ.'

ಒಂದು ಕಡೆಯಿಂದ ಬ್ರೌನಿಂಗನಂತಹ ಕವಿಗಳು ಸತ್ಯದ ಮಹತ್ತನ್ನು ಸಾರುತ್ತಿರುವಾಗ ಒಂದೆಡೆಯಿಂದ ವಿಜ್ಞಾನವು ಧಾರ್ಮಿಕ ವಿಶ್ವಾಸದಲ್ಲಿ ಸಂದೇಹವನ್ನುಂಟುಮಾಡುತ್ತಿತ್ತು.

ಇಂದು ಇಂಗ್ಲೆಂಡಿನಲ್ಲಿ ವಿಜ್ಞಾನದ ಪ್ರಭಾವವೇ ಮುಖ್ಯವಾಗಿದ್ದರೂ ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಹೀಗಿರದೆ ಧಾರ್ಮಿಕ ವಿಶ್ವಾಸಿಗಳಲ್ಲಿ ತಳಮಳವೆಬ್ಬಿಸಿತ್ತು.

ಪಂಡಿತ ಜವಹರಲಾಲರ ಆತ್ಮಕಥೆ

೧೦೦೦ ಪುಟಗಳು! ಎರಡು ಸಂಪುಟಗಳು!!

ಡೆವಿ. ಅಷ್ಟಪತ್ರಕಾರ. ಈ ವರ್ಷ ಡಿಸೆಂಬರ್ ಅಂತ್ಯದಲ್ಲಿ ಪ್ರಕಟವಾಗುವುದು.
ಟಪಾಲು ಖರ್ಚು ಪ್ರತ್ಯೇಕ.

ಅತ್ಯುತ್ತಮ ಪ್ರತಿ	ರೂ. ೧೦—೦—೦	ಹಣ ಮುಂಗಡ ಕಳುಹಿಸುವವರಿಗೆ ಪ್ರಕಟಣ ಪೂರ್ವಕಾಲದ ಬೆಲೆ.	
ವಾಚನಾಲಯ ಪ್ರತಿ	,, ೭—೦—೦	ಅತ್ಯುತ್ತಮ ಪ್ರತಿ	ರೂ. ೧೦—೦—೦
ಸಾಮಾನ್ಯ ಪ್ರತಿ	,, ೫—೦—೦	ವಾಚನಾಲಯ ಪ್ರತಿ	,, ೬—೦—೦
		ಸಾಮಾನ್ಯ ಪ್ರತಿ	,, ೪—೮—೦
		ಟಪಾಲು ಖರ್ಚು ಮುಫತ್ತು.	

ಹಣವನ್ನು ನೇರ ಕಳುಹಿಸಬೇಕು. ಏಜಂಟರನ್ನು ನೇಮಿಸಿಲ್ಲ.
ಮುಂಗಡವಾಗಿ ಆರ್ಡರುಗಳನ್ನು ಕೊಟ್ಟು ವ್ಯಾಪಾರ ನಡೆಸುವ ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾವ ಕವಿಷನ್ ಕೊಡಲ್ಪಡುವುದು.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.,
ಸಂಪಾದಕರು: "ನವಜೀವನ" ಮತ್ತು "ಪುಸ್ತಕಗಳ ಪುಸ್ತಕ",
ಬಳೇಪೇಟೆ, ಬೆಂಗಳೂರು ಸಿಟಿ.

"GLOBE COMPETITION"

WIN RS. 12,000.

"GLOBE COMPETITION" OUTRIGHT "GLOBE COMPETITION".

CROSS-DIGITS COMPETITION NO. 1.

Special prize of Rs. 2000/- will be awarded for highest number of entries.

(Required that the all correct winners' solution should tally figure by figure with our sealed key solution.

Sealed Key Solution deposited with the Western Bank of India Ltd.

Entrance Fee Re. 1—per Entry. Closing Date 20th November.

1. In case of tie or ties the prize money will be equally divided at the discretion of the competition Editor. The winning competitor can get only one prize in this contest.

2. Arrange the numbers from 1 to 16 in the above squares, such that each row, column and diagonal total 34. Each number should be used once only. Any number of entries may be sent by individual competitor.

3. Any number of entries may be sent on plain paper along with the requisite fee of Re. 1-0-0 per entry by M. O. or Indian Postal Order.

4. All coupons must be filled in with the ink of type written. Pencil entries will be disqualified.

5. The result will be announced on the 25th November 1936 & will be sent to those competitors by post who send one anna stamped envelope with their address written in English along with the reference of the number of entries. Money Order receipt must accompany the solutions to facilitate working.

6. The Prize amount varies according to entries received. Amount will be divided among the successful competitors sending correct solutions agreeing figure by figure with our **Sealed key solution** in the bank.

GLOBE COMPETITION No. 1
(COUPON)



In entering this competition, I agree to accept the competition Editor's decision as Final and legally binding. Name:

Mr.....
Miss
Mrs.
ADDRESS.....
.....
.....
Postal O. No.....
Coupon No.

(Entry fee Re. 1-)
(on this coupon)
Cut here.
(Cut the above paper round the thick line & post **Along with the Money Order Receipt or Indian Postal Order.**

7. No responsibility can be accepted for any entry coupons lost, mislaid or delayed in the post. No correspondence can be entered into or interview granted, except at the competition Editor's discretion. The decision of the competition Editor on all the matters relating to this competition is absolutely final & legally binding & is an express condition of the entry.

8. In no case any entrance fee or money sent with entrance fees be refunded or credited to competition a-c.

9. Coupons must be cut round the thick line or written on a plain paper. No alteration or corrections whatsoever will be allowed. Mutilated answers will be disqualified. Competitors sending more than one entry must number them serially.

10. Any entry which does not comply with these rules & conditions is liable to be disqualified.

11. Competitors sending entries on plain paper must also understand that the decision of the competition Editor in all circumstances in regard to this competition is final & legally binding.

READ RULES & CONDITIONS CAREFULLY.

Address your fees and entries:—
To,
THE COMPETITION EDITOR,
"THE GLOBE COMPETITION"
Bunder Road, KARACHI.

ನಮ್ಮ ಬಟ್ಟೆಗಳು ಕೆಟ್ಟುಹೋಗದಂತೆಯೂ, ಬಹುಕಾಲ ಬಾಳಿಕೆ ಬರುವಂತೆಯೂ, ಮನಸ್ಸಿಗೆ ತೃಪ್ತಿಕರವಾಗಿಯೂ ರೀತಿಯಲ್ಲಿ ನಾನಾ ತರದ



ಸ್ಟೀಲು ಟ್ರಂಕುಗಳೂ, ಸೂಟ್ ಕೇಸುಗಳೂ, ಕ್ಯಾಬಿನ್ ಸೂಟ್ ಕೇಸುಗಳೂ, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳೂ, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳೂ, ಕ್ಯಾಷ್ ಬೋಕ್ಸ್ ಇವೇ ಮೊದಲಾದುವುಗಳು ವಿಕ್ರಯಕ್ಕೆ ಸಿದ್ಧವಿರುವವು. **ತ್ರಿಲೋಕ (ನಾರದ)** ಟ್ರೇಡ್‌ಮಾರ್ಕಿನ ಮುದ್ರೆಯು ಮತ್ತು ಒಳಗಡೆ ಲೇಬಲ್ ನಮ್ಮ ಪ್ರತಿಯೊಂದು ಪೆಟ್ಟಿಗೆಯಲ್ಲೂ ಇರುವುದು. ಕ್ರಯಕ್ಕೆ ತಕ್ಕ ವ್ಯಾಲು ಬೇಕಾದಲ್ಲಿ ಈ ಟ್ರೇಡ್‌ಮಾರ್ಕ್ ಇರುವ ಪೆಟ್ಟಿಗೆಗಳನ್ನು ಪರೀಕ್ಷಿಸಿ ಪಡೆಕೊಂಡು ಸಂತೋಷ ಪಡೆಯಿರಿ.

ವ್ಯಾಪಾರಸ್ಥರಿಗೆ ಸ್ಪರ್ಧಸಂದರ್ಭ. ನಮ್ಮ 'ಷೊ' ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಕಣ್ಣು ಆರ್ಡರು ಕೊಟ್ಟಿ ಇದರ ನಿಜತ್ವವನ್ನು ಪರೀಕ್ಷಿಸಿರಿ, ನಿಮಗೆ ಖಚಿತವಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಪ್ರೊಪ್ರೈಟರ್:—**ಜಿ. ಟಿ. ಮಾಣಿಕ ನಾಯಿಗರ್.**

ಹೆಡ್ ಆಫೀಸು: 22, ಬೇಕರ್ ಸ್ಟ್ರೀಟ್, ಜಿ. ಟಿ., ಮದ್ರಾಸು. ಬ್ರಾಂಚ್ ಆಫೀಸು: ರೈಲ್ವೇ ಗುಡ್ಸ್‌ಶೆಡ್ ಒಳಿ, ಮಂಗಳೂರು, ದ. ಕ.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್

ಟ್ರೇಡ್‌ಮಾರ್ಕ್.

ಡಾ. ವಾಮನ್ ಗೋಪಾಲರ

ಸರ್ಸಪರಿಲ್ಲಾ

5 ವರ್ಷಗಳ ಅಸುಖದಿಂದ ಮಿಲ್ಲಿಯಗಟ್ಟಿ ಹುಸರು, ರಕ್ತ ಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ। ಗೌತಮರಾವ್ ಕೇಶವರಾವ್‌ರವರ ಹೊಸಿಸ್ ಪ್ರೊಸ್ಪರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ। ಗೌತಮರಾವ್ ಕೇಶವ್ ಎಂಡ್ ಸನ್ಸ್, ಥಾಕೂರ್‌ದ್ವಾರ್ 2, ಬೊಂಬಾಯಿ.

JAYA LAXMI BANK, LTD.,

MANGALORE.

ಜಯಲಕ್ಷ್ಮೀ ಬೇಂಕ್,

ಲಿಮಿಟೆಡ್, ಮಂಗಳೂರು.

ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಡಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರೆಟರಿ.

ಕಂಠೀರವ

ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾ ಪತ್ರಿಕೆ.

ಚೆಂದಾ ವಿವರ.

	ಸ್ಥಳದವರಿಗೆ	ಪರಸ್ಥಳದವರಿಗೆ
೧ ವರ್ಷಕ್ಕೆ	ರೂ. ೨—೮—೦	ರೂ. ೪— ೨—೦
೬ ತಿಂಗಳುಗಳಿಗೆ	ರೂ. ೧—೪—೦	ರೂ. ೨— ೧—೦

ಬಿಡಿ ಸಂಚಿಕೆ ಬೆಲೆ ಮಂಗಳವಾರ ೦—೧—೦.
ಶುಕ್ರವಾರ ೦—೦—೬.

ಮಾದರಿ ಸಂಚಿಕೆಗಳು ಅಪೇಕ್ಷಕರಿಗೆ ಧರ್ಮಾರ್ಥವಾಗಿ ಕಳುಹಿಸಲ್ಪಡುವುವು.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಬಿಡಿ ಸಂಚಿಕೆಗಳು ವಿಕ್ರಯಕ್ಕೆ ಸಿಗುವುವು.

ನಮ್ಮ ಏಜೆಂಟರಿಲ್ಲದ ಸ್ಥಳಗಳಲ್ಲಿ ಏಜೆಂಟರಾಗಲಪೇಕ್ಷಿಸುವವರು ಕೂಡಲೇ ಬರಕೊಳ್ಳಬಹುದು. ಧಾರಾಳವಾದ ಕಮಿಶನ್ ಕೊಡಲಾದೀತು.

Circulation Manager,
THE KANTEERAVA,
MANGALORE.

ಒರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾೃಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874. ಹೆಡ್ ಆಫೀಸು—ಬೊಂಬಯಿ.

1935ನೇ ಇಸವಿಯ ವರದಿಯ ಸಾರಾಂಶ.

ಹೊರಡಿಸಲಾದ ಹೊಸ ವಿಮಾಪತ್ರಗಳು	ರೂ.	8,89,89,149
ವಾರ್ಷಿಕ ಉತ್ಪನ್ನ . .	,,	3,49,16,412
ಜಾರಿಯಲ್ಲಿರುವ ವಿಮಾಪತ್ರಗಳು	,,	59,25,3203,8
ಒಟ್ಟಿಗೆ ತೆತ್ತ 'ಕ್ಲೈಮು'ಗಳು	,,	17,43,21,855
ಫಂಡ್ ಹೆಚ್ಚಿದ ಮೊತ್ತ	,,	17,01,62,491

ಇಂಡಿಯದ ಪ್ರಾಮುಖ್ಯ ಜೀವವಿಮಾ ಕಾರ್ಯಾಲಯವಾದ

ಒರಿಯಂಟಲ್

ಸಂಸ್ಥೆಯ ಜನಪ್ರೀತಿಯನ್ನೂ, ಅದರ ದೃಢವಾದ ಸ್ಥಿತಿಯನ್ನೂ ಈ ಮೇಲಿನ ಅಂಕೆಸಂಖ್ಯೆಗಳು ಸ್ಪಷ್ಟೋಕ್ತಿಗಳಿಂದ ವಿಶದಗೊಳಿಸುತ್ತಿವೆ.

ಜನಪ್ರೀಯವೆನಿಸಿದ ಮತ್ತೂ ಅಭಿವೃದ್ಧಿ ಪಡೆಯುತ್ತಿರುವ

ಭಾರತೀಯ ಜೀವವಿಮಾ ಕಾರ್ಯಾಲಯದಲ್ಲಿ

ನಿಮ್ಮ ಜೀವವನ್ನು ವಿಮೆ ಇಳಿಸಲು

ವಿಳಂಬ ಮಾಡಬೇಡಿ.

ಹೆಚ್ಚಿನ ವಿವರಕ್ಕೆ ಬರೆಯಿರಿ:—

ಶಾಖಾ ಕಾರ್ಯದರ್ಶಿಗಳು, ಒರಿಯಂಟಲ್ ಲ್ಯಾೃಫ್ ಆಫೀಸ್, ಒರಿಯಂಟಲ್ ಬಿಲ್ಡಿಂಗ್ಸ್, ಬೆಂಗಳೂರು ಇವರಿಗೆ

ಅಥವಾ ಕಂಪೆನಿಯ ಈ ಕೆಳಗಿನ ಯಾವುದಾದರೊಂದು ಕಾರ್ಯಾಲಯಕ್ಕೆ

ಆಗ್ರಾ	ಕೊಲೊಂಬೊ	ಲಾಹೋರ್	ಪೇಶಾವರ
ಅಜ್ಮೀರ್	ಡಾಕೈ	ಲಕ್ನೋ	ಪೂನಾ
ಅಹಮ್ಮದಾಬಾದ್	ಢಿಲ್ಲಿ	ಮದ್ರಾಸ್	ರಾಯಿಪುರ
ಅಲ್ಲಹಾಬಾದ್	ಗೌಹತಿ	ಮ್ಯಾಂಡಲೇ	ರಾಜಶಾಹಿ
ಅಂಬಾಲ	ಗುಂಟೂರು	ಮಥುರಾ	ರಾಂಚಿ
ಅಮೃತಸರ	ಜಲಗಾಂ	ರಂಗೂನು	ರಾವಲ್ಪಿಂಡಿ
ಬಾರೇಲಿ	ಜಲಪೈಗುರಿ	ಮೊಂಬಾಸಾ	ಸಿಂಗಾಪೂರ್
ಬಳ್ಳಾರಿ	ಜೋಧ್ಪುರ	ಮುಲ್ತಾನ್	ಸಕ್ಕೂರ್
ಕಲ್ಕತ್ತಾ	ಜಬಲ್‌ಪೂರ್	ಮೈಸೂರು	ತ್ರಿಚಿನಾಪಳ್ಳಿ
ಕಲ್ಲಿಕೋಟೆ	ಕರಾಚಿ	ನಾಗ್ಪುರ	ತ್ರಿವೆಂದ್ರಮ್
ಕೊಯಂಬತ್ತೂರು	ಕೌಲಾಲಂಪೂರ್	ಪಾಟ್ನಾ	ವಿಶಾಖಪಟ್ಟಣ.

ಕೆ. ಆರ್. ಕೆ. ಭಟ್, ಎಸ್ಟ್ಯೂಯರ್,
ಎಕ್ಸ್‌ಟಿಂಗ್ ಇನ್ಸ್‌ಪೆಕ್ಟರ್, ಒರಿಯಂಟಲ್ ಲ್ಯಾೃಫ್ ಆಫೀಸು, ಪುಡಿಕೇರಿ.

ಡಿ. ವಾಸ್ ಎಂಡ್ ಸನ್ಸ್, ಏಜಂಟ್ಸ್,
ಮಂಗಳೂರು, ದ. ಕ.

Annual premium income over Rs. 5,00,000

Bonus declared Rs. 15 per thousand per annum

Insurance in Force over Rs. 1,00,00,000

... Life Fund over Rs. 10,00,000

Prompt settlement of claims.

Low rates of premiums and various attractive plans.

Attractive and liberal agency contracts are offered to honest, influential gentlemen

Inquiries solicited at:—

PADUBIDRI BROS.,

Chief Agents.

Maharashtra & Karnataka & East & West Khandesh Dist.,

BOMBAY 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.

ಶೀಸೆ 1ಕ್ಕೆ 12 ಆಣೆ; ಟ. ಖ. 9 ಆಣೆ.

ಸ್ಪ್ಲೀನೋಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ **ಚಕ್ಕಬಿಂದು** ದಿವ್ಯೌಷಧವು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.

ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟ್ಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸಪ್ಲೈ ಸಿಪ್ಪವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ನಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

ಆರೋಗ್ಯ ವಿಜ್ಞಾನ

(ಅಜುಕೋಷ)

ಕಣ್ಣುಗಳಿಗೆ ಹೆಚ್ಚು ಕೆಲಸ ಕೊಡುವುದು ತಲೆನೋವಿಗೆ ಕಾರಣ.

ಸಾಮಾನ್ಯವಾದ ಅಥವಾ ಕಠಿಣವಾದ ತಲೆನೋವಿಗೆ ಕಣ್ಣಿನಲ್ಲಿರುವ ಕೊರತೆಯಾಗಲೀ ಕಣ್ಣಿಗೆ ವಿಶೇಷ ಆಯಾಸವಾಗುವುದಾಗಲೀ ಕಾರಣವೆಂದು ಡಾಕ್ಟರರೊಬ್ಬರು ಹೇಳಿರುವರು. ತಲೆಯ ಪಾರ್ಶ್ವಗಳಲ್ಲಿ ಎಂದರೆ ಕೆನ್ನೆಗಳಲ್ಲಿ ಮತ್ತು ಮುಖದಲ್ಲಿ ಉಂಟಾಗುವ ಸಿಡಿತಗಳಲ್ಲಿ ೧೦೦ಕ್ಕೆ ೮೦ ಅಂಶವು ಕಣ್ಣು ಉರಿಯಿಂದ ಉಂಟಾಗುವುದು. ಕಣ್ಣುಗಳಿಗೆ ಮಿತಿಮೀರಿ ಕೆಲಸ ಕೊಟ್ಟರೆ ನೇತ್ರಖಂಡಗಳಿಗೆ ಆಯಾಸವಾಗಿ ತಲೆ ಸಿಡಿತ ಉಂಟಾಗುವುದು. ಒಂದೇ ಹುಬ್ಬಿನಲ್ಲಿ ಅಥವಾ ಒಂದೇ ಕೆನ್ನೆಯಲ್ಲಿ ಸಿಡಿತ ಉಂಟಾಗುವ ಪಕ್ಷದಲ್ಲಿ ಅದಕ್ಕೆ ಬರೇ ಕಣ್ಣುನೋವು ಮಾತ್ರ ಕಾರಣವಲ್ಲದೆ ಇತರ ಕಾರಣಗಳೂ ಇವೆಯೆಂದು ತಿಳಿಯಬೇಕು. ಸಿನೆಮಾ ನೋಡಿದರೆ ಕೆಲವರಿಗೆ ತಲೆನೋವು ಉಂಟಾಗುವುದಷ್ಟೆ? ಕಣ್ಣಿನ ಮಾಂಸಖಂಡಗಳಿಗೆ ತೀಕ್ಷ್ಣವಾದ ಕೆಲಸ ದೊರಕುವುದೇ ಇದಕ್ಕೆ ಕಾರಣ. ರೈಲು, ಮೋಟಾರು ಮೊದಲಾದ ವೇಗದ ವಾಹನಗಳಲ್ಲಿ ನಾವು ಸಂಚರಿಸುವಾಗ ಹೊರ ನೋಡಿದರೆ ಗಿಡಮರಗಳೆಲ್ಲಾ ಹಿಂದಕ್ಕೆ ಹೋಗುವಂತೆ ಕಾಣುವುದಷ್ಟೆ? ಹೀಗೆ ಕಾಣುವುದನ್ನು ನೋಡುವುದರಿಂದಲೂ ಕಣ್ಣಿಗೆ ಕೆಲಸ ಹೆಚ್ಚಿ ತಲೆಸಿಡಿತ ಉಂಟಾಗಬಹುದು. ರೈಲು, ಮೋಟಾರು ಮೊದಲಾದವುಗಳಲ್ಲಿ ಪ್ರಯಾಣಮಾಡುವಾಗ ಉಂಟಾಗುವ ತಲೆನೋವಿಗೆ ಕಣ್ಣಿನ ದುರ್ಬಲತೆಯೇ ಕಾರಣವಲ್ಲದೆ ಇತರ ಕಾರಣವಲ್ಲವೆಂದು ತಿಳಿಯಬೇಕು. ಯಾವಾಗಲೂ ತಲೆನೋವು ಕಾಣಿಸಿಕೊಳ್ಳುವವರು ಕಣ್ಣಿನ ದೋಷಗಳನ್ನು ತಿಳಿದುಕೊಂಡು ಚಿಕಿತ್ಸೆ ಮಾಡಿಸಿದರೇನೇ ತಲೆಸಿಡಿತ ನಿಂತೀತು.

'ಶರೀರಮಾದ್ಯಂ ಖಲು ಧರ್ಮಸಾಧನಂ'

ಎಂದು ನಮ್ಮ ಪೂರ್ವಿಕರು ಹೇಳಿರುವರಷ್ಟೆ, ಈ ಜೀವನವೆಂಬ ಮನೆಗೆ ಶರೀರವೇ ಸರಿಯಾದ ಪಂಚಾಂಗ; ಪಂಚಾಂಗವಿಲ್ಲದೆ ಮನೆ ಸರಿಯಾಗಿ ನಿಲ್ಲುವುದೆಂತು? ಹೀಗಿರುವಾಗ ಶರೀರವನ್ನು ಸರಿಯಾಗಿಟ್ಟುಕೊಳ್ಳುವುದು ನಮ್ಮ ಮೊದಲನೆಯ ಕೆಲಸ. ನಮ್ಮ ಪೂರ್ವಜರು ಸಾವಿರಾರು ವರ್ಷಗಳಿಂದ ಪರಿಶ್ರಮಪಟ್ಟು ಕೆಲಸಮಾಡುತ್ತಿದ್ದುದೇ ನಮ್ಮ ಶರೀರದ ಎಲುಬುಗಳು ಇಷ್ಟು ಗಟ್ಟಿಮುಟ್ಟಾಗಿರಲಿಕ್ಕೆ ಕಾರಣ. ಮನುಷ್ಯರು ಫೊತ್ತಮೊದಲು ಕಾಡಿನಲ್ಲಿ ವಾಸಮಾಡುತ್ತಿದ್ದಾಗ ಯಾವಾಗಲೂ ಕಾಡುಪ್ರಾಣಿಗಳೊಂದಿಗೆ ಜಗಳಾಡುತಿದ್ದುದರಿಂದಲೇ ಮನುಷ್ಯಶರೀರವು ಬಲಿಷ್ಠವಾಯಿತು. ಈಗಿನಂತೆ ಪರಿಶ್ರಮಮಾಡಲಿಕ್ಕೊಂದು ಪಂಗಡ, ಸುಖಪಡೆಯಲಿಕ್ಕೊಂದು ಪಂಗಡವೆಂಬ ಭೇದವು ಸೃಷ್ಟಿಯ ಆದಿಕಾಲದಲ್ಲಿದ್ದಿರಲಾರದು. ಆದರೆ ಅತಿಪರಿಶ್ರಮವು ಕೂಡ ಶರೀರಕ್ಕೆ ಹಾನಿಕರವೆಂಬುದನ್ನು ಮರೆಯಕೂಡದು.

× × × × ×

ನಮ್ಮ ಆಹಾರ.

ನಮ್ಮ ಆಹಾರದಲ್ಲಿ ಸಸ್ಯವರ್ಗವೆಂದರೆ ಕಾಯಿಪಲ್ಯಗಳೇ ಪ್ರಧಾನವಾಗಿವೆ. ಅಲ್ಲದೆ ಕೇವಲ ಶಾಕಾಹಾರದಿಂದಲೇ ಮನುಷ್ಯನು ಜೀವಿಸಲೂ ಬಲ್ಲನು. ಶಾಕಾಹಾರವನ್ನುಪಯೋಗಿಸದೆ ಕೇವಲ ಮಾಂಸಾಹಾರದಿಂದಲೇ ಇರುವುದು ಆರೋಗ್ಯಕ್ಕೆ ಹಿತವಲ್ಲ. ಬೇರೆ ಬೇರೆ ಪ್ರಕೃತಿಯ ಶರೀರವುಳ್ಳವರಿಗೆ ಬೇರೆ ಬೇರೆ ತರದ ಆಹಾರಗಳು ಶರೀರಕ್ಕಂಟುವುದರಿಂದ ಕೆಲವು ತರಕಾರಿಗಳ ಗುಣಗಳನ್ನು ಸಂಗ್ರಹಿಸಿ ಹೇಳುತ್ತೇನೆ.

ಬಟಾಟೆಯು ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ದೊರಕುವ, ಎಲ್ಲರಿಗೂ ಹಿಡಿಯುವ ವಸ್ತು. ಬಟಾಟೆಯಲ್ಲಿ ಜಲಾಂಶವು ಅಧಿಕವಿರುವುದರಿಂದ ಬರೇ ಬಟಾಟೆಯನ್ನೇ ಉಪಯೋಗಿಸುವುದು ಅಷ್ಟು ಹಿತವಲ್ಲ. ಇತರ ಶಾಕಾಹಾರ-ಮಾಂಸಾಹಾರಗಳೊಂದಿಗೆ ತಿನ್ನುವುದರಿಂದ ಬಟಾಟೆಯು ಶರೀರಕ್ಕೆ ಬಹಳ ಹಿತಕರವಾಗಿದೆ.

ಬದನೇಕಾಯಿಯು ನಮ್ಮ ದೇಶದಲ್ಲೆಲ್ಲೆಲ್ಲಿಯೂ ದೊರಕುವುದಷ್ಟೆ? ಇದರಲ್ಲಿ ಎಳೆ ಬದನೆಕಾಯಿಯು ವಾಯು ಮತ್ತು ಕಫಗಳನ್ನು ನಿವಾರಿಸಿ ರಕ್ತಪಿತ್ತವನ್ನು ಕಡಮೆಮಾಡುವ ಗುಣವಿದ್ದಿದೆ. ಬೆಳೆದ ಬದನೆಕಾಯಿಯಲ್ಲಿ ಅದಕ್ಕೆ ವಿಪರೀತವಾದ ಗುಣವು ಕಂಡುಬರುತ್ತದೆ.

ಬೆಂಡೆಕಾಯಿಯು ಮೂತ್ರವರ್ಧಕವೂ ಶರೀರಕ್ಕೆ ತಂಪನ್ನು ಕೊಡುವಂತಹದೂ ಆಗಿರುವುದಲ್ಲದೆ ಉರಿಮೂತ್ರ, ಜ್ವರ ಮೊದಲಾದ ರೋಗಗಳನ್ನು ನಾಶಿಸುವಂತಹದು ಕೂಡ ಆಗಿದೆ. ಅಮಶಂಕೆಯ ರೋಗಿಗಳಿಗೆ ಬೆಂಡೆಕಾಯಿಯು ಬಹಳ ಹಿತ.

ನೀರುಳ್ಳಿಯಲ್ಲಿ ಗಂಧಕದ ಅಂಶವು ತುಂಬಿರುವುದರಿಂದ ಶರೀರಬೆಳವಣಿಗೆಗೆ ನೀರುಳ್ಳಿ ಬಹಳ ಹಿತಕಾರಿಯಾಗಿದೆ. ಅಲ್ಲದೆ ನೀರುಳ್ಳಿಯಲ್ಲಿ ಜೀರ್ಣಾಂಗಗಳಿಗೆ ಬಲಕೊಡುವ ಗುಣವೂ ಇದೆ. ಕ್ಷೀಣವಾದ ಶರೀರಧಾತುಗಳನ್ನು ವೃದ್ಧಿಗೊಳಿಸುವ ಶಕ್ತಿಯು ನೀರುಳ್ಳಿಯಲ್ಲಿದೆಯೆಂಬುದನ್ನು ಯಾರೂ ಮರೆಯಕೂಡದು.

ಬಾಳೆಕಾಯಿ, ಬಾಳೆಹೂ, ಬಾಳೆದಿಂಡು ಇವುಗಳೆಲ್ಲವೂ ಆಹಾರಕ್ಕಾಗಿ ಉಪಯೋಗಿಸಲ್ಪಡುತ್ತವಷ್ಟೆ. ಬಾಳೆಹೂವಿನಲ್ಲಿ ಜೊಗರು ಗುಣವಿದ್ದು ರಕ್ತಾತಿಸಾರ ಮುಂತಾದ ರೋಗಗಳಲ್ಲಿ ಬಹಳ ಹಿತಕಾರಿಯಾಗಿದೆ. ಬಾಳೆಹಣ್ಣು ರುಚಿಸದವರು ಯಾರೂ ಇರಲಾರರು. ಬಾಳೆಹಣ್ಣಿನಲ್ಲಿ ನೂರರಲ್ಲಿ ೨೨ ಪಾಲು ಸಕ್ಕರೆಯೂ ಬಾಕಿ ಸುಣ್ಣ, ಕಬ್ಬಿಣ ಮೊದಲಾದ ಅನೇಕ ಶಕ್ತಿವರ್ಧಕ ಮೂಲವಸ್ತುಗಳೂ ಸೇರಿವೆ. ನೇಂದ್ರಬಾಳೆಹಣ್ಣಿನಲ್ಲಿದ್ದಷ್ಟು ಪೌಷ್ಟಿಕಶಕ್ತಿಯು ಯಾವ ಬಾಳೆಹಣ್ಣಿನಲ್ಲಿಯೂ ಇಲ್ಲ. ಬಾಳೆಹಣ್ಣಿನಲ್ಲಿ ಮಲಶೋಧನೆಮಾಡುವ ಶಕ್ತಿಯೂ ಪಿತ್ತವನ್ನು ಕಡಮೆಮಾಡುವ ಗುಣವೂ ಇದೆ. ಬಾಳೆಕಾಯಿಯು ಕೂಡ ಹೆಚ್ಚುಕಡಮೆ ಹಣ್ಣಿನ ಗುಣದಿಂದಲೇ ಕೂಡಿದ್ದರೂ ಮಲಬಂಧಕ ಗುಣವೊಂದು ಮಾತ್ರ ಹಣ್ಣಿನ ಗುಣಕ್ಕಿಂತ ವಿಪರೀತ ಗುಣವುಳ್ಳದ್ದಾಗಿದೆ.

ಎಳೆ ಸೌತೆಕಾಯಿಯು ಪಿತ್ತವನ್ನು ನಿವಾರಿಸಿ ವೀರ್ಯವೃದ್ಧಿಕರವಾಗಿದೆ. ಬೆಳೆದ ಸೌತೆಕಾಯಿಯು ಮೂಲವ್ಯಾಧಿ, ದಾಹ ಮೊದಲಾದುವನ್ನು ನಿವಾರಿಸುವುದು. ಸೌತೆಕಾಯಿಯು ಕಫವರ್ಧಕವೆಂಬುದು ನೆನಪಿರಲಿ.

ತೊಂಡೆಕಾಯಿಯು ಶ್ವಾಸಕೋಶಗಳಿಗೆ ಬಲ ಕೊಟ್ಟು ಕಾಮಲೆ ರೋಗವನ್ನು ನಿವಾರಿಸುವುದು. ತೊಂಡೆಕಾಯಿಯಲ್ಲಿ ಬುದ್ಧಿಯನ್ನು ಮಂದ್ಯೆಸುವ ಗುಣವಿದೆಯೆಂದು ಕೆಲವರು ಹೇಳುತ್ತಾರೆ.

ಎಚ್ಚರಿಕೆ! ಮೋಸಗಾರರ ವಿಷಯದಲ್ಲಿ ಎಚ್ಚರವಿರಲಿ.

(ಬಹುಮಾನ ರೂ. 100)

ಗುಪ್ತ ವಶೀಕರಣ ಯಂತ್ರ.

ಈ 'ಯಂತ್ರ'ವನ್ನು ಒಬ್ಬನು ತನ್ನ ಸ್ವಾಧೀನ ವಿರಿಸಿಕೊಂಡ ಮಾತ್ರದಿಂದಲೇ, ಅತ್ಯಂತ ಕಷ್ಟತರವಾದ ಉದ್ದೇಶವಾದರೂ ನೆರವೇರುವುದು. ಇದರಿಂದ ಕೆಟ್ಟ ಗ್ರಹಗಳ ಬಾಧೆ ತೊಲಗುವುದು; ಶತ್ರುಗಳ ಮೇಲೆ ಜಯಲಾಭ ದೊರಕುವುದು; ನಿಮಗೆ ಜೇಕಾಡಾಕೆ ನಿಮ್ಮ ಹಿಡಿತದೊಳಗೆ ಬರುವಂತಾಗುವುದು. ಪರೀಕ್ಷೆ, ವ್ಯಾಪಾರ, ವ್ಯಾಜ್ಯ ಮೊಕದ್ದಮೆಗಳಲ್ಲಿಯೂ, ಕುದುರೆಗಳ ಜೂಜು, ಸೋಡ್ತಿ, ನೌಕರಿಗಳಲ್ಲಿಯೂ, ಪುತ್ರ ಮತ್ತೂ ಅತುಳ ಸಂಪತ್ತಿನ ಪ್ರಾಪ್ತಿಯಲ್ಲಿಯೂ, ಋಣಪರಿಹಾರ, ಅಪಾಯಕಾರಕ ರೋಗನಿವಾರಣೆಯಲ್ಲಿಯೂ ನಿಮಗೆ ಜಯಲಾಭವು ಸಿಕ್ಕುವುದು. ಇದು ನಿಮ್ಮನ್ನು ಅದೃಷ್ಟಶಾಲಿಯಾಗಿ ಮಾಡುವುದು. ಯಾರು ಇದನ್ನು ಸುಳ್ಳೆಂದು ರುಜುವಾತು ಮಾಡಿಕೊಡುವರೋ ಅವರಿಗೆ ಬಹುಮಾನ ರೂ. 100. ಬೆಲೆ ರೂ. 2. ಬೆಳ್ಳಿಯ ಮುಚ್ಚಳದಕ್ಕೆ ರೂ. 3—4—0; ಚಿನ್ನದ ಮುಚ್ಚಳದಕ್ಕೆ ರೂ. 9.

Mahashakti Mantra Ashram,
No. 10, P. O. Katrisarai, GAYA.



CHEAPEST SWISS WRIST WATCh

YOU CAN BUY WITH CONFIDENCE, NOT A TOY, VERY DECENT & ACCURATE SO STRONG THAT WON'T STOP EVEN ON RIDING. GTD. 5 YEARS. NICKEL CASE 5/12/-, GOLDEN 6/12, RADIUM DIAL 4/. & EXTRA-F/POSTAGE FREE.

VALUE BACK IF UNSATISFIED.

G. T. CO. 185, MANICKTOLA ST., CALCUTTA.

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ ಮಕ್ಕಳನ್ನು ಕಾಪಾಡಿರಿ.

ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಆದೊಂದೇ ವಿಜಯನಗರಂ ಔಷಧ:

ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರದ್ದಾಗಿದ್ದರೂ ಫಲಕಾರಿಯಾಗಿ ಗುಣಪಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳಾ ಪಾಪಯ್ಯ್ಯ ಪಾತ್ರುಡು ಮತ್ತು ಸಹೋದರ,
(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),
98—99 ಜ್ರೋಡೀಸ್ ರೋಡ್, ಮೈಳಾಪುರ್, :: ಮದ್ರಾಸು.
(ರಾಮಕೃಷ್ಣ ಮಠದ ಎದುರು).

ಕೆಮೆಲ್ ಮತ್ತೂ ರಾಕ್ಸೀ ಫೌಂಟನ್ ಪೇನುಗಳು.



ಈ ಪೇನುಗಳು ಇಷ್ಟೊಂದು ಪ್ರಖ್ಯಾತಿಯನ್ನೂ, ಜನಪ್ರೀತಿಯನ್ನೂ ಸಂಪಾದಿಸಲು ಕಾರಣಗಳೇನು ಬಲ್ಲಿರಾ? ಈ ಕೆಳಗಿನ ಗುಣವಿಶೇಷಗಳೇ!—

(1) ಮುರಿಯಲಾರದ ಕೊಳವೆ.
(2) ಮೊದಲನೆ ತರಗತಿಯ 14 ಕ್ಯಾರೆಟಿನ ಬಂಗಾರದ ನಿಬ್ಬು; ಆದರೊಂದಿಗೆ 'ಇರಿಡಿಯಮ್ ಪಾಯಿಂಟ್'
(3) ಮೊದಲನೆಯ ತರಗತಿಯ ರೋಲ್ಡ್ ಗೋಲ್ಡಿನ ಸುತ್ತುಂಗುರ ಮತ್ತೂ 'ಕ್ಲಿಪ್'ಗಳು.
(4) ದೋಷರಹಿತವಾದ ಸಂಪೂರ್ಣ ರಚನೆ.
(5) ಇಚ್ಛಾನುಸಾರದ ಉಪಯೋಗಕ್ಕೆ ಗ್ಯಾರೆಂಟಿ.
(6) ಜನಪ್ರೀತಿಯನ್ನು ಸಂಪಾದಿಸಿದ ಯಾವತ್ತು ಬಣ್ಣಗಳಲ್ಲಿ, ಪಾರದರ್ಶಕವಾದ ಎಲ್ಲ ಮಾದರಿಗಳಲ್ಲಿ ದೊರೆಯುತ್ತವೆ.

Sole Distributors:—

HORNBY FOUNTAIN PEN DEPOT,
204, Hornby Road, Fort,
BOMBAY.

12, 18-8. Tel. CAMELPEN.

"ದಿ ಮೂಲ್ಕಿ ಗ್ರೌಂಡ್ ರೇಫ್ಲ್"

(ಮೂಲ್ಕಿ ಹ್ಯಾ ಸ್ಕೂಲಿನ ಸಹಾಯಾರ್ಥ)

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ., ಪ್ರೆಸಿಡೆಂಟ್.
ಡಾಕ್ಟರ್ ಯಂ. ಆರ್. ಕಾಮತ್, ಎಲ್. ಎಂ. ಪಿ. ವೈಸ್-ಪ್ರೆಸಿಡೆಂಟ್.
ಬಿ. ಭೋಜ ರಾವ್, ಎಸ್ಕ್ವಾಯರ್, ಕಾರ್ಯದರ್ಶಿ.

ಲೆಖ್ಖ ಆಖೈರಿ ತಾರೀಕು 25-1-1937. ಸೋಡ್ತಿ ತೆಗೆಯುವ ತಾರೀಕು 31-1-1937.

ಟಿಕೇಟು 1ರ ಖರೀದಿ ಆಣೆ ನಾಲ್ಕು ಮಾತ್ರ.
20 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5—0—0 ಮಾತ್ರ.

ಜನರಲ್ ಸಮಿತಿಯ ಇತರ ಸದಸ್ಯರು:

1. ಮಾ। ರಾ। ರಾ। ಎಮ್. ಆರ್. ಪೂಂಜ, ಅವರ್ಗಳ್. 2. ಚಾರ್ಲ್ಸ್ ಪಿ. ಆರಾನ್ಹಾ, ಎಸ್ಕ್ವಾಯರ್. ಮಾ। ರಾ। ರಾಗಳಾದ 3. ಜೋಳ ವಾಸುದೇವ ರಾವ್. 4. ವಿ. ನರಸಿಂಹ ಕಾಮತ್. 5. ವಿ. ಕೆ. ಪ್ರಭು. 6. ಎಮ್. ಚಂದಯ ಶೆಟ್ಟಿ. 7. ಕೆ. ರಾಜು ಹೆಗ್ಡೆ. 8. ಯು. ಕೃಷ್ಣ ರಾವ್. 9. ಯು. ಕೃಷ್ಣರಾಯ ಶೆಣೈ. 10. ಎಮ್. ಕೆ. ಬಸಪ್ಪ, ಅವರ್ಗಳ್. 11. ಎಮ್. ಬಿ. ಇದ್ದಿನಬ್ಬ, ಎಸ್ಕ್ವಾಯರ್. ಮಾ। ರಾ। ರಾಗಳಾದ 12. ಎಚ್. ಶ್ರೀನಿವಾಸ ಎ. ಶೆಣೈ. 13. ಎಚ್. ಸುಬ್ಬ ಚಂಪಾ. 14. ಎಮ್. ಕೆ. ಪೂವಪ್ಪ. 15. ಎಮ್. ಆರ್. ಸುವರ್ಣ. 16. ಕೆ. ಯು. ಪೈ, ಬಿ. ಎ. 17. ಯು. ದೇವರಾಯ ಶೆಣೈ. 18. ಪಂಡಿತ್ ಎಚ್. ವಾಸುದೇವಯ್ಯ. 19. ಪಿ. ಜೋಗಪ್ಪ ಕಾಮತ್. 20. ಬಿ. ಪದ್ಮನಾಭ ಭಟ್, ಅವರ್ಗಳ್. 21. ಆರ್. ಆರಾನ್ಹಾ, ಎಸ್ಕ್ವಾಯರ್. ಮಾ। ರಾ। ರಾಗಳಾದ 22. ಕೆ. ಕೃಷ್ಣ ರಾವ್, ಬಿ. ಎ., ಎಲ್. ಟಿ. 23. ಕೆ. ಅಣ್ಣಪ್ಪ ಭಟ್ಜೀ. 24. (ಡಾಕ್ಟರ್) ಎಮ್. ಉಮೇಶ ರಾವ್, ಎಲ್. ಎಮ್. ಎಂಡ್ ಎಸ್. 25. (ಡಾಕ್ಟರ್) ಕೆ. ಶ್ಯಾಮ ಶೆಟ್ಟಿ, ಎಲ್. ಎಮ್. ಪಿ. 26. ಯು. ವಿ. ಶೆಣೈ, ಅವರ್ಗಳ್. 27. ವೆರಿ ರೆವರೆಂಡ್ ಜೋಜ್ಫ್ ಮೆನೆಜಸ್, ಡಿ. ಡಿ. (ವಿಕಾರ್).

ಟಿಕೇಟು ಪುಸ್ತಕ ಇತ್ಯಾದಿ ವಿವರಕ್ಕೆ ಕಾರ್ಯದರ್ಶಿಯವರಿಗೆ ಬರಕೊಳ್ಳಿರಿ.

WANTED

In the South Kanara District young and ambitious men on very liberal terms, to represent the BHARAT INSURANCE COMPANY, LTD., LAHORE. An excellent opportunity to earn a decent living.

Apply to:—

DUTT & CO., *Chief Agents,* KARWAR.

ಭಾರತೀಯ ಚಲಚಿತ್ರದಲ್ಲಿ ಸಂಗೀತಕಲೆಯ ಸಮಾವೇಶ.

ಲೇಖಕ:—ಶ್ರೀ। ಬಿ. ಮಹಾಬಲೇಶ್ವರ ಶರ್ಮಾ.

(ಮುಂದುವರಿದುದು)

ವಾದನ.

ಗಾಯನವಾದ ಮೇಲೆ ಸಂಗೀತದ ಎರಡನೆ ಅಂಗವೆಂದರೆ ವಾದನಕಲೆ. ವಾದನವಿಲ್ಲದೆ ಗಾನವು ಸಂಪೂರ್ಣವಾಗುವ ದಿಲ್ಲ. ಎರಡು ಒಟ್ಟಿಗೆ ಕೂಡಿದರೆ ಮಾತ್ರ ಗಾನವು ಸುಶ್ರಾವ್ಯ ವೆನಿಸುವುದು. ಆದುದರಿಂದಲೇ ಗಾಯನದೊಡನೆ ವಾದ್ಯ ಯಂತ್ರಗಳನ್ನುಪಯೋಗಿಸುವರು. ಇಂದು ಭಾರತೀಯ ಪ್ರಾಚೀನ ವಾದ್ಯಯಂತ್ರಗಳ ಸ್ಥಾನವನ್ನು ವಿದೇಶೀಯ ವಾದ್ಯಗಳು ಆಕ್ರಮಿಸಿವೆ. ವೀಣೆ-ಸರೋದ-ಸಾರಂಗಿಗಳ ಸ್ಥಳಕ್ಕೆ ಹಾರ್ಮೋನಿಯಮ್ ಬಂದಿದೆ. ಜಲತರಂಗವನ್ನು ಪಿಯಾನೋ ಮೊದಲಾದ ನವೀನ ವಾದ್ಯಯಂತ್ರಗಳೋಡಿಸಿವೆ. ಈ ರೀತಿಯಿಂದ ಮೆಲ್ಲ ಮೆಲ್ಲನೆ ಪ್ರಾಚೀನ ಭಾರತೀಯ ವಾದ್ಯಗಳು ಲೋಪಹೊಂದುತ್ತಾ ಬರುತ್ತಿವೆ. ಈ ವಿಷಯವು ಕೆಳಗಿನ ಅಂಕೆಗಳಿಂದ ಸರಿಯಾಗಿ ತಿಳಿಯುವುದು. ವೀಣಾ-ಸರೋದ-ಸಾರಂಗೀವಾದಕರು ಶೇಕಡ ಐದರಂತೆಯೂ, ಜಲತರಂಗವಾದಕರು ಶೇಕಡಾ ಎರಡರಂತೆಯೂ, ಹಾರ್ಮೋನಿಯಮ್ ವಾದಕರು ಶೇಕಡಾ ನಾಲ್ವತ್ತರಂತೆಯೂ, ಪಿಯಾನೋ ವಾಯಲಿನ್ ವಾದಕರು ಶೇಕಡ ಆರರಂತೆಯೂ, ಇರುವರು. ಇದನ್ನು ನೋಡಿದರೆ ಇನ್ನು ಕೆಲವು ಸಮಯದಲ್ಲಿ ನಮ್ಮಲ್ಲಿಯ ವಾದ್ಯಯಂತ್ರಗಳು ನಾಮಾವಶೇಷವಾಗುವುದರಲ್ಲಿ ಸಂದೇಹವಿಲ್ಲ. ವಾದನಕಲೆಯಲ್ಲಿ ಕೂಡ ನಮ್ಮ ದೇಶವು ಹಿಂದಿನಿಂದಲೇ ಕೀರ್ತಿಪಡೆದಿದೆ. ತಾನಸೇನ, ವೀಣೆ ಶೇಷಣ್ಣ ಮುಂತಾದವರು ವಾದ್ಯ ಬಾಜಿಸಿದರೆ ದುಷ್ಟ ಪಶುಗಳು ಕೂಡ ಮೋಹಗೊಳ್ಳುತ್ತಿದ್ದುವಂತೆ; ಎಂದ ಮೇಲೆ ನಮ್ಮಲ್ಲಿ ಎಂತಹ ಪ್ರಸಿದ್ಧ ವಾದಕರಿದ್ದರೆಂಬುದು ತಿಳಿಯುವುದು. ಪಾಶ್ಚಾತ್ಯರಲ್ಲಿ ಬೇರೆ ಬೇರೆ ರೀತಿಗಳ ವಾದ್ಯಯಂತ್ರಗಳಿದ್ದರೂ ಅವೆಲ್ಲಾ ನಮ್ಮ ವೀಣೆ-ಜಲತರಂಗ-ಸಾರಂಗಿಗಳ ನವೀನರೂಪವಲ್ಲದೆ ಬೇರೇನೂ ಅಲ್ಲ.

ಫೆಗ್ಗಿ ಸಿಂಪಸನ್

ಚಲಚಿತ್ರಗಳಲ್ಲಿ ಭಾರತೀಯ ಮತ್ತು ಪಾಶ್ಚಾತ್ಯಗಳೆಂಬ ಎರಡು ರೀತಿ ವಾದ್ಯಗಳನ್ನು ಉಪಯೋಗಿಸುವರು. ಹೆಚ್ಚಾಗಿ ಹಾರ್ಮೋನಿಯಮ್, ತಬಲೆ, ಪಿಯಾನೋ, ವಾಯಲಿನ್ ಮುಂತಾದ ವಾದ್ಯಗಳು ಪ್ರಚಾರದಲ್ಲಿವೆ. ಕೆಲವು ದೃಶ್ಯಗಳಿಗೆ ವೀಣೆ, ಜಲತರಂಗ ಮೊದಲಾದ ವಾದ್ಯಗಳನ್ನು ಕೂಡ ಉಪಯೋಗಿಸುತ್ತಾರೆ. ವಾದ್ಯಯಂತ್ರಗಳನ್ನು ಉಪಯುಕ್ತ ಕಂಡಂತೆ ಉಪಯೋಗಿಸುವುದು ಸಂಗೀತನಿರ್ದೇಶಕರ ಕೆಲಸ. ಈ ವಿಷಯದಲ್ಲಿ ನುರಿತ ಸಂಗೀತನಿರ್ದೇಶಕರು ನಮ್ಮಲ್ಲಿ ಅತಿವಿರಳವಾಗಿರುವರು. ವಿವಾಹದೃಶ್ಯದಲ್ಲಿ ಎಂತಹ ವಾದ್ಯವನ್ನುಪಯೋಗಿಸಬೇಕು, ಭಾರತೀಯ ಮತ್ತು ವಿದೇಶೀಯ ನೃತ್ಯವಾಗುವ ಸಮಯ ಯಾವ ಯಾವ ವಾದ್ಯಗಳನ್ನುಪಯೋಗಿಸಬೇಕು, ಕರುಣಾದೃಶ್ಯ, ಯುದ್ಧದೃಶ್ಯ ಮುಂತಾದುವುಗಳಲ್ಲಿ ಯಾವ ರೀತಿಯ ವಾದ್ಯವನ್ನುಪಯೋಗಿಸಬೇಕು ಎಂದು ಮುಂತಾದ ವಿಷಯಗಳಲ್ಲಿ ನಮ್ಮಲ್ಲಿಯ ನಿರ್ದೇಶಕರಿಗೆ ಸರಿಯಾದ ಅನುಭವವಿರುವದಿಲ್ಲ. ಇದರಿಂದಾಗಿ ಕೆಲವು ಚಿತ್ರಗಳು ನೋಡಲಿಕ್ಕೆ ಸಾಧ್ಯವಿಲ್ಲದಷ್ಟು ಹಾಳಾಗಿ ಹೋಗಿವೆ. ಚಲಚಿತ್ರದಲ್ಲಿ ಪ್ರತ್ಯಕ್ಷ ವಾದ್ಯ (Front Music) ಮತ್ತು ನೇಪಥ್ಯವಾದ್ಯ (Back-ground Music) ಎಂಬ ಎರಡು ರೀತಿಗಳಿಂದ ವಾದ್ಯಗಳನ್ನುಪಯೋಗಿಸುವರು. ಇವುಗಳ ಬಾಜಿಸುವ ಕ್ರಮವೂ ಕೂಡ ದೃಶ್ಯಗಳಿಗೆ ಅನುಸರಿಸಿ ಬೇರೆ ಬೇರೆ ರೀತಿಗಳಲ್ಲಿವೆ. ಕ್ರಮ ಪ್ರಕಾರವಾಗಿ ವಾದ್ಯಗಳನ್ನುಪಯೋಗಿಸಿದರೆ ಚಿತ್ರಗಳಿಗೆ ಒಂದು ನವೀನ ಶಕ್ತಿಯುಂಟಾಗುತ್ತದೆ. ಪ್ರತ್ಯಕ್ಷವಾದ್ಯ—ಪ್ರತ್ಯಕ್ಷವಾದ್ಯದಲ್ಲಿ ಹಾರ್ಮೋನಿಯಮ್, ತಬಲೆ, ಸಾರಂಗೀ, ಸಿತಾರ್, ಪಿಯಾನೋ ಮೊದಲಾದ ವಾದ್ಯಯಂತ್ರಗಳನ್ನು ಉಪಯೋಗಿಸುವರು. ವಿವಾಹೋತ್ಸವ ನೃತ್ಯ, ಗಾಯನ, ರಾಜಪ್ರಸಾದ ಮುಂತಾದ ಸ್ಥಾನಗಳಲ್ಲಿ ಪ್ರತ್ಯಕ್ಷವಾದ್ಯದ ಆವಶ್ಯಕತೆ ಇರುವುದು. ಗಾಯನದ ಸಮಯ ರಾಗಗಳಿಗೆ ಹೊಂದಿಕೆಯಾಗುವಂತೆ ವಾದ್ಯವನ್ನು ಬಾಜಿಸುವುದು ಸಂಗೀತನಿರ್ದೇಶಕರ ಅನುಭವದ ಮೇಲೆ ಹೊಂದಿಕೊಂಡಿದೆ. ನೇಪಥ್ಯವಾದ್ಯ—ವರದೆಯ ಹಿಂದಿನಿಂದ ಬಾಜಿಸುವದೇ ನೇಪಥ್ಯವಾದ್ಯವು. ಇದು

ಸಿನೆಮಾ ಪುಟ

ಪ್ರತ್ಯಕ್ಷವಾದ್ಯಕ್ಕಿಂತ ಅಧಿಕ ಮಹತ್ವಪೂರ್ಣವಾಗಿದೆ. ಇದನ್ನು ಸರಿಯಾಗಿ ಪ್ರಯೋಗಿಸುವ ಕೆಲಸವು ಪ್ರತ್ಯಕ್ಷವಾದ್ಯವನ್ನುಪಯೋಗಿಸುವ ಕೆಲಸಕ್ಕಿಂತ ಕಠಿನತರವಾಗಿದೆ.. ಆದಕಾರಣ ಅನುಭವಿಕರಾದ ನಿರ್ದೇಶಕರಿಲ್ಲದಿದ್ದರೆ ಇಡೀ ಚಿತ್ರವೇ ಕೆಡುವ ಸಂಭವವುಂಟು. ಪ್ರಾರಂಭದಲ್ಲಿ ಭಾರತೀಯ ಚಲಚಿತ್ರಗಳಲ್ಲಿ ನೇಪಥ್ಯವಾದ್ಯವು ಇಷ್ಟು ಉತ್ತಮ ಸ್ಥಿತಿಯಲ್ಲಿರಲಿಲ್ಲ. ಆದರೆ ಈಗೀಗ ಕೆಲವು ಕಂಪೆನಿಗಳ ಚಿತ್ರಗಳಲ್ಲಿ ಉತ್ತಮ ರೀತಿಯಿಂದ ಪ್ರಯೋಗಿಸಿದ ನೇಪಥ್ಯವಾದ್ಯಗಳು ಕಂಡುಬರುತ್ತವೆ. ದೃಶ್ಯ ಮತ್ತು ಗತಿಗಳಿಗೆ ಸಂಬಂಧವಿರಿಸಿ, ವೀಣೆ, ಜಲತರಂಗ, ಪಿಯಾನೋ, ವಾಯಲಿನ್, ಸಿತಾರ್ ಮೊದಲಾದ ವಾದಗಳನ್ನು ನೇಪಥ್ಯವಾದ್ಯದಲ್ಲಿ ಉಪಯೋಗಿಸುವರು. ಕೆಲವು ಕಡೆ ಸಂವಾದಗಳಲ್ಲಿಯೂ ನೇಪಥ್ಯವಾದ್ಯವನ್ನು ತರುವರು. ಇದು ದೃಶ್ಯಗಳಿಗೆ ಅನ್ವಯಿಸಿರದಿದ್ದರೆ ಸರಿಯಾಗಿ ಜೋಡಣೆಯಾಗುವುದಿಲ್ಲ. ಎಂದರೆ ಅರಣ್ಯದೃಶ್ಯವೇ ಮೊದಲಾದುವುಗಳಲ್ಲಿ ವೀಣೆ, ವಾಯಲಿನ್‌ಗಳನ್ನುಪಯೋಗಿಸದೆ ಹಾರ್ಮೋನಿಯಮ್-ತಬಲೆಗಳನ್ನುಪಯೋಗಿಸಿದ್ದರೆ ದೃಶ್ಯದ ಸೌಂದರ್ಯವು ಕೆಟ್ಟುಹೋಗುವುದು. ಸಂವಾದ, ಕರುಣಾದೃಶ್ಯ ಮೊದಲಾದ ಕಡೆಯಲ್ಲಿ ವಾಯಲಿನ್ ಉಪಯೋಗಿಸಬೇಕು. ಸೈನಿಕರು, ಕುದುರೆಗಳು ಮುಂತಾದವುಗಳ ಗತಿಗಳಲ್ಲಿ ಯೋಗ್ಯ ನೇಪಥ್ಯ ವಾದ್ಯಗಳು ಬೇಕಾಗುವುವು. ದುರ್ವಾಂದಾರ್, ಚಂಡೀದಾಸ, ಪೂರಣಭಕ್ತ ಮೊದಲಾದುವು ಕೆಲವು ಚಿತ್ರಗಳು ನಮ್ಮಲ್ಲಿ ಉತ್ತಮ ರೀತಿಯ ನೇಪಥ್ಯಸಂಗೀತದಿಂದ ಕೂಡಿದುವುಗಳಾಗಿವೆ.

ನೇಪಥ್ಯವಾದ್ಯದಲ್ಲಿ ಕೂಡ ಅನುಭವಿಕರಾದ ಸಂಗೀತ ನಿರ್ದೇಶಕರ ಆವಶ್ಯಕತೆ ಇದೆ. ನೇಪಥ್ಯಸಂಗೀತದಲ್ಲಿ ನುರಿತವನೇ ಉತ್ತಮ ನಿರ್ದೇಶಕನೆನಿಸುವನು. ಈಗ ಪ್ರಭಾತ, ನ್ಯೂ

ಮಿಸ್ ಕಜ್ಜನ್

ಥಿಯೇಟರ್ಸ್, ಮುಂತಾದ ಕಂಪೆನಿಗಳಲ್ಲಿ ಅನುಭವಿಕರಾದ ನೇಪಥ್ಯಸಂಗೀತಜ್ಞರಿರುವರು. ಭಾರತೀಯ ನೇಪಥ್ಯವಾದ್ಯ, ಸಂಗೀತನಿರ್ದೇಶನ ಮುಂತಾದ ಕಾರ್ಯಗಳಲ್ಲಿ ಇನ್ನು ಕೂಡ ಆಗುವಷ್ಟು ಸುಧಾರಣೆಗಳಾಗಿಲ್ಲವೆಂದೇ ಹೇಳಬಹುದು. ಆದರೂ ಪ್ರಾರಂಭದಲ್ಲಿದ್ದುದಕ್ಕಿಂತ ಈಗ ಎಷ್ಟೋ ಪಾಲು ಉನ್ನತಿಯನ್ನು ಹೊಂದಿದೆ.

ನೃತ್ಯ.

ನೃತ್ಯಕಲೆಯು ಸಂಗೀತಕಲೆಯ ಮೂರನೆಯ ಅಂಶವಾಗಿದೆ. ಇದು ಕೂಡ ಭಾರತವರ್ಷದ ಪ್ರಾಚೀನಕಲೆಗಳಲ್ಲೊಂದು. ಭಾರತೀಯ ನೃತ್ಯಕಲೆಯ ಪರಿಪೂರ್ಣಸ್ಥಿತಿಯನ್ನು ನಮ್ಮ ದೇಶದ ಹಳೆಯ ಕಟ್ಟಡಗಳಲ್ಲಿಯೂ, ಗುಹೆಗಳಲ್ಲಿಯೂ ಕಾಣಬಹುದು. ಇಂದಿಗೆ ಸಾವಿರಾರು ವರ್ಷಗಳ ಹಿಂದೆಯೇ ನೃತ್ಯಕಲೆಯು ನಮ್ಮ ಭಾರತದಲ್ಲಿ ಅತ್ಯುನ್ನತಸ್ಥಿತಿಗೆ ಮುಟ್ಟಿತ್ತು. ಆಗ ಅದು ಕಲಾದೃಷ್ಟಿಯಿಂದ ನೋಡಲ್ಪಡುತ್ತಿದ್ದು ಮರ್ಯಾದೆಯ ಸ್ಥಾನದಲ್ಲಿತ್ತು. ಆದರೆ ಇಂದು ಅದೇ ನೃತ್ಯಕಲೆಯು ಪಾಶ್ಚಾತ್ಯರ ಸಂಪರ್ಕದಿಂದಾಗಿ ಮೂರಾಟದ ವಸ್ತುವೆನಿಸಿಕೊಂಡಿದೆ. ಪ್ರಾಚೀನಕಾಲದಲ್ಲಿ ಅದನ್ನು ಕುಲೀನ ಸ್ತ್ರೀಯರು ಕೂಡ ಕಷ್ಟಪಟ್ಟು ಅಭ್ಯಾಸಮಾಡುತಿದ್ದರು. ಅದೇ ಭಾರತದಲ್ಲಿ ಈಗ ಆ ಕಲೆಯು ವೇಶ್ಯೆಯರ ಮತ್ತು ಅವರಂತಹ ಕೆಳತರಗತಿಯ ಜನರ ಕೈಯಲ್ಲಿ ಸಿಕ್ಕಿ ದುರ್ಗತಿ ಹೊಂದುತ್ತಿದೆ. ಇಂದು ಕುಲೀನರು ಅದನ್ನು ಕಲಿಯುವ ಮಾತಂತಿರಲಿ, ನೋಡುವುದು ಸಹ ಘೃಣಿತಕಾರ್ಯವೆನಿಸಿಕೊಂಡಿದೆ. ಆದರೂ ನೃತ್ಯಕಲೆಯ ಈ ಅಧೋಗತಿಯ ಕಾಲದಲ್ಲಿಯೂ ಕೂಡ ಕೆಲವು ಕಲಾಕಾರರು ಅದನ್ನುಳಿಸಿಕೊಳ್ಳಲು ಸೊಂಟಗಟ್ಟುತ್ತಿರುವುದು ಸಂತೋಷದ ಸಂಗತಿಯಾಗಿದೆ. ಇಂತಹ ಜನರಲ್ಲಿ ಉದಯಶಂಕರ, ಬಾಗಜೀ, ಶರದಿಂದುಸಿಂಹ, ಸುನಲಿನೀದೇವಿ, ಆಶಾ ಓಝಾ ಮುಂತಾದವರ ಹೆಸರು ಉಲ್ಲೇಖನೀಯವಾಗಿದೆ. ಇವರೊಡನೆ ಈ ಕಲೆಯ ಉದ್ಧಾರಕ್ಕಾಗಿ ವಿಶ್ವಕವಿ ರವೀಂದ್ರರ ಶಾಂತಿನಿಕೇತನವೂ ಕೈಗೊಡುತ್ತಿದೆ. ಶಾಂತಿನಿಕೇತನವು ಇಷ್ಟರ ವರೆಗೆ ಅನೇಕ ನೃತ್ಯ

FOR YOUR DIAMONDS
ENQUIRE AT
SOWCAR
SRINIVAS RANGAPAI
SOWCAR MAHAL,
Car Street,
MANGALORE.

ಕಲಾಕೋವಿದರಿಗೆ ಜನ್ಮಕೊಟ್ಟು ಭಾರತಕ್ಕೊಂದು ದೊಡ್ಡ ಉಪಕಾರ ಮಾಡಿದೆಯೆಂದೆನ್ನಲು ಯಾವ ಅಡ್ಡಿಯೂ ಇಲ್ಲ. ನಮ್ಮ ದೇಶದವರಲ್ಲಿ ಈ ಕಲೆಯ ಮೂಲಕ ಪ್ರಪಂಚವಿಖ್ಯಾತರಾದವರೆಂದರೆ ಉದಯಶಂಕರರೊಬ್ಬರು ಎಂದು ಹೇಳಬಹುದು. ನೃತ್ಯಾಭಿನಯ ಮತ್ತು ಪಾದಗೀತವೆಂಬ ಎರಡು ರೀತಿಯ ನೃತ್ಯಗಳಿವೆ. ಉದಯಶಂಕರರು ನೃತ್ಯಾಭಿನಯಕಲೆಯ ಉತ್ತಮ ಕಲಾಕಾರರಾಗಿರುವರು. ಅವರಷ್ಟು ಕೀರ್ತಿಹೊಂದಿರದಿದ್ದರೂ ಆಶಾ ಓಝಾ ಮತ್ತು ಸುನಲಿನೀದೇವಿ ಇವರಿಬ್ಬರು ನೃತ್ಯಕಲೆಯ ಈ ಎರಡು ಭಾಗಗಳಲ್ಲಿಯೂ ಚೆನ್ನಾಗಿ ನುರಿತವರಾಗಿರುವರು.

ನೃತ್ಯಕಲೆಯು ಭಾರತೀಯ ಚಲಚಿತ್ರಜಗತ್ತಿನಲ್ಲಿ ಉತ್ತಮ ಸ್ಥಾನವನ್ನು ಹೊಂದಿದೆ. ಆದರೆ ಹೆಚ್ಚಾಗಿ ಚಲಚಿತ್ರಮಂದಿರಗಳಲ್ಲಿ ನೃತ್ಯಕಲೆಯು ವೇಶ್ಯಾನಟಿಯರ ಕೈಗೆ ದೊರೆತಿರುವುದು ದುಃಖದ ಸಂಗತಿಯಾಗಿದೆ. ದೇಶೀಯ ವೇಶ್ಯೆಯರು ಮಾತ್ರವಲ್ಲ; ಯುರೋಪಿಯನ್ ಮತ್ತು ಎಂಗ್ಲೋ-ಇಂಡಿಯನ್ ನರ್ತಕಿಯರು ಸಹ ನಮ್ಮಲ್ಲಿಯ ಚಲಚಿತ್ರಮಂದಿರಗಳಲ್ಲಿ ಸೇರಿ ತಮ್ಮ ಅರ್ಧ ನಗ್ನವೇ ಮೊದಲಾದ ನೃತ್ಯಗಳ ಮೂಲಕವಾಗಿ ಜನತೆಯ ಶೀಲವನ್ನು ಕೆಡಿಸುತ್ತಿರುವರು. ಇಂತಹ ನೃತ್ಯಗಳಿಗೆ ಕೂಡ ನಮ್ಮ ಜನರು ಹೇಸಿಕೆ ಎಣಿಸದೆ ಸಂತೋಷದಿಂದ ಅದನ್ನು ನೋಡಲು ಹಾತೊರೆಯುತ್ತಿರುವರು. ಇಂತಹ ನರ್ತಕಿಯರು ಜನರ ನಡತೆಯನ್ನು ಹಾಳುಮಾಡುವುದು ಮಾತ್ರವಲ್ಲದೆ ಚಲಚಿತ್ರಮಂದಿರಗಳ ಮಾಲಿಕರಿಂದ ಸಾವಿರಾರು ರೂಪಾಯಿಗಳನ್ನು ಸಹ ಗಳಿಸುತ್ತಿರುವರು.

ಈಗ ನಮ್ಮ ಚಲಚಿತ್ರಜಗತ್ತಿನಲ್ಲಿರುವ ಆಶಾ ಓಝಾ ಅಲಕನಂದಾ, ತಾರಕನಾಥ, ಸುನಲಿನೀದೇವಿ ಮುಂತಾದವರು ಪ್ರಸಿದ್ಧ ನರ್ತಕಿಯರಾಗಿಳುವರು. ಇವರು ಚಲಚಿತ್ರಜಗತ್ತಿಗಿಳಿದು ಹೆಚ್ಚು ಸಮಯವಾಗಿಲ್ಲ. ಇವರಿಂದ ನಮ್ಮ ನೃತ್ಯಕಲೆಯು ಉನ್ನತಿಹೊಂದುವ ಆಸೆ ಇದೆ. ವೇಶ್ಯೆಯರನ್ನು ಮತ್ತು ಅಶ್ಲೀಲ ನೃತ್ಯಗಳನ್ನು ಸಿನೆಮಾಕ್ಷೇತ್ರಕ್ಕೆಳಿಯಗೊಡದಿದ್ದರೆ ತುಂಬಾ ಶ್ರೇಯಸ್ಕರವಾದೀತು. ಇದರಿಂದ ವ್ಯರ್ಥವಾಗಿ ದ್ರವ್ಯವೂ ನಾಶವಾಗುವುದಿಲ್ಲ. ಈಗ ನಮ್ಮ ಭಾರತೀಯ ಚಲಚಿತ್ರ ಸಂಗೀತವು ಎಷ್ಟು ತ್ರುಟಿಪೂರ್ಣವಾಗಿದೆ ಎಂಬುದು ಪಾಠಕರಿಗೆ ತಿಳಿಯಬಹುದು. ಈ ತ್ರುಟಿಯು ಹೋಗಬೇಕಾದರೆ ಅನುಭವಿಕರಾದ ಸಂಗೀತನಿರ್ದೇಶಕರು, ಉಚ್ಚಕೋಟಿಯ ವಾದಕರು ಮತ್ತು ಶ್ರೇಷ್ಠ ನೃತ್ಯಕಲಾಭಿಜ್ಞರು ಇವರುಗಳ ಆವಶ್ಯಕತೆ ಇದೆ. ಚಲಚಿತ್ರನಿರ್ಮಾತರು ಇಂತಹರನ್ನಿಟ್ಟುಕೊಳ್ಳಲು ಪ್ರಯತ್ನಿಸಬೇಕು. ಅಂತಾದಾಗ ಮಾತ್ರ ಭಾರತೀಯ ಸಂಗೀತಚಿತ್ರಗಳು ಉಚ್ಚಕೋಟಿಯವುಗಳೆಂದು ಹೇಳಲ್ಪಡಬಹುದು.

ಇಂದು ಪ್ರಪಂಚದಲ್ಲಿ ಉಳಿದ ಎಲ್ಲಾ ವ್ಯಾಪಾರಗಳೂ ಮಾಂದ್ಯಸ್ಥಿತಿಯಲ್ಲಿದ್ದರೂ ಚಲಚಿತ್ರವೊಂದು ತನ್ನ ವ್ಯಾಪಾರದಲ್ಲಿ ಅಭಿವೃದ್ಧಿಹೊಂದುತ್ತಾ ಬರುತ್ತಿದೆ. ಚಿತ್ರಪಟನಿರ್ಮಾತರು ಮನಸ್ಸುಕೊಟ್ಟರೆ ಸಮಾಜಸುಧಾರಣೆಯನ್ನು ಕೂಡ ಚಲಚಿತ್ರದ ಮೂಲಕವಾಗಿಯೇ ಮಾಡಬಹುದು. ಸಮಾಜಸುಧಾರಣೆಯೊಡನೆ ಮನೋರಂಜನೆಯೂ ಕಲಾಪ್ರಚಾರ ಹಾಗೂ ವ್ಯಾಪಾರವೂ ವೃದ್ಧಿಹೊಂದುವುದು.

(ಶ್ರೀ. ಚಂದ್ರಶೇಖರ ಮಿಶ್ರ ಇವರ ಚಿತ್ರಸಂಗೀತವೆಂಬ ಲೇಖನವನ್ನನುಸರಿಸಿ ಬರೆದುದು.)

ಕನ್ನಡಿಗರೇ!

ಬೊಂಬಯಿಯಲ್ಲಿ ಬಂದಿಳಿದಾಗ ಎಲ್ಲುಳಿದು ಕೊಳ್ಳಬೇಕೆಂದು ತಿಳಿದಿರುವಿರಾ?

ವೆಲ್ಕಂ ಹೊಟೆಲು

(MADRAS BRAHMINS' LODGE.)

(ಸ್ಥಾಪನೆ:—1912.)

(ಜನರಲ್ ಪೋಸ್ಟಾಫೀಸಿನ ಬಳಿ)

ಫ್ರಿಯರ್ ರೋಡ್, ಫೋರ್ಟ್, ಬೊಂಬೈ.

ತಾರಿನ ಪತ್ರ:—"ಕಾಣೆಮಾರ್" ಟೆಲಿಫೋನ್:—21386

ಇದು ನಮ್ಮ 'ಸಿಲ್ವರ್ ಜುಬಿಲಿ' ವರ್ಷ! ಅಂದ ಬಳಿಕ ಹೆಚ್ಚಿನ ಪ್ರಶಂಸೆಗೆಡೆಯಿಲ್ಲ. ಸುಗ್ರಾಸ ಭೋಜನ, ಉತ್ಕೃಷ್ಟ ತಿಂಡಿ-ತೀರ್ಥಗಳು, ವಾಸಕ್ಕೆ ಸ್ವಚ್ಛವಾದ ಕೋಣೆಗಳು, ಬಲು ಶುಲಭ ದರ, ಹಣಕ್ಕೂ ಮಿಕ್ಕಿದ ಗುಣ—ಇವುಗಳು ಬೇಕೆಂದಿದ್ದರೆ ಈ ಸ್ಥಳವನ್ನೆಂದಿಗೂ ಮರೆಯಬೇಡಿರಿ.

ಧಾರವಾಡ ವನಿತಾ ಸೇವಾ ಸಮಾಜದ ೪ನೇ ವಾರ್ಷಿಕ ಮಹೋತ್ಸವವು.

(ಬರೆದು ಬಂದಷ್ಟು)

ಎಂದಿನಂತೆ ಧಾರವಾಡ ವ. ಸೇ. ಸ.ದ ೪ನೇ ವಾರ್ಷಿಕ ಮಹೋತ್ಸವವು ತಾ॥ ೬—೧೧—೩೬ನೇ ದಿನ ಶ್ರೀ. ಶಿವಪ್ರಣ್ಣಾ ತೆಂಗಿನಕಾಯಿ ಇವರ ಪ್ರೆಸ್ಸಿನಲ್ಲಿ ಶ್ರೀ. ಜೋಗ ವಿಶ್ವನಾಥರಾವ, ಎಮ್. ಎಲ್. ಸಿ., ವಕೀಲ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಒಳ್ಳೇ ವಿಜೃಂಭಣೆಯಿಂದ ಜರುಗಿತು. ಶಿಶುಸಪ್ತಾಹ ನಾಡಹಬ್ಬದಂತೆ ಹೆಣ್ಣುಮಕ್ಕಳ ವಿವಿಧತೆರನಾದ ಶಾರೀರಿಕ, ಬೌದ್ಧಿಕ ಹಾಗು ಆಧ್ಯಾತ್ಮಿಕ ಉನ್ನತಿಯ ದ್ಯೋತಕವಾದಂಥ ಮಹಿಲಾ ಸಪ್ತಾಹವನ್ನು ಜರುಗಿಸಬೇಕೆಂಬ ಸಮಾಜದ ಬಾಲಕರ ಬಯಕೆಯು ಆಚಾರತರಂಗದಲ್ಲಿ ಬರಲಿಕ್ಕೆ ಈ ಸಲ ಪ್ರಾರಂಭವ್ಹಾಯಿತೆಂದು ಹೇಳಬಹುದು. ನಿಜವಾಗಿ ವಾರ್ಷಿಕೋತ್ಸವವು ರವಿವಾರ ದಿನ ಜರಗಿದರೂ ಕೂಡ ಅದರ ಪ್ರಾರಂಭವು ಬುಧವಾರ ೨೮—೧೦—೩೬ರಿಂದ ಪ್ರಾರಂಭವಾಗಿರುತ್ತದೆ. ಅದು ಹೇಗೆಂದರೆ ಬುಧವಾರ ದಿನ ಬೆಳಿಗ್ಗೆ ತೀವ್ರ ಸಾಯಿಕಲ್ಲ ಹಾಗು ಮಂದ ಸಾಯಿಕಲ್ಲದ ಮೇಲಾಟವಾಗಿ ಇದರಲ್ಲಿ ಸಮಾಜದ ವಸತಿಗೃಹದಲ್ಲಿದ್ದ ಶ್ರೀ. ಸುಮಿತ್ರಾಬಾಯಿ ಶಿಂದೆಯವರು ೯ ಮಿನೀಟುಗಳಲ್ಲಿ ೩ ಮೈಲು ಮತ್ತು ಶ್ರೀ. ಬೀ. ಸೀತಮ್ಮ ಇವರು ೧೦ ಮಿನೀಟುಗಳಲ್ಲಿ ಸಾಯಕಲ್ಲ ನಡೆಸಿ ೧ನೇ ಹಾಗು ೨ನೇ ನಂಬರ ಮೆಚ್ಚು ಪಡೆದರು.

ಗುರುವಾರ ದಿನ ಶ್ರೀ. ಜಠಾರರವರ ಭಾವಿಯಲ್ಲಿ ತೀವ್ರ ಈಸುವ ಮೇಲಾಟವಾಗಿ ಇದರಲ್ಲಿ ಶ್ರೀ. ಸುಮಿತ್ರಾಬಾಯಿ ಶಿಂದೆ ಇವರು ೧ನೇ ಹಾಗು ಶ್ರೀ. ಇಂದಿರಾ ಪಾಟೋಳೆ ಮತ್ತು ಶ್ರೀ. ಶಾರದಾ ಕಂಪಲಿ ಇವರು ೨ನೇ ನಂ. ಬಂದರು. ಶ್ರೀ. ಸುಮಿತ್ರಾ ಇವರಿಗೆ ೧ನೇ ನಂ. ಮೆಚ್ಚು ಹಾಗು ಶ್ರೀ. ಮಳೀಮಠ ವಕೀಲರ ವಿಶಿಷ್ಟ ಮೆಚ್ಚು ಶ್ರೀ. ಶಾರದಾ ಇವರಿಗೆ ಕೊಡಲಾಯಿತು.

ಶುಕ್ರವಾರ ದಿನ ಬಹಳ ಹೊತ್ತು ಈಸುವ ಮೇಲಾಟ ಶ್ರೀ. ಇನಾಮದಾರವರ ಭಾವಿಯಲ್ಲಿ ಬೆಳಿಗ್ಗೆ ೭-೪೧ ಮಿನಿಟಿಗೆ ಪ್ರಾರಂಭವಾಗಿ ಸಂಜೆ ೬ ಗಂಟೆಗೆ ಪ್ರೇಕ್ಷಕರ ಒತ್ತಾಯದ ಮೂಲಕ ಕೊನೆಗಾಣಿಸಬೇಕಾಯಿತು. ಇದರಲ್ಲಿ ಶ್ರೀ. ಸುಮಿತ್ರಾಬಾಯಿ ಶಿಂದೆ ಹಾಗು ಬೀ. ಸೀತಮ್ಮ ಇವರು ೧೦ ತಾ. ೧೯ ಮಿನೀಟು ಶ್ರೀ. ಇಂದಿರಾ ಪಾಟೋಳೆ ಇವರು ಬೇರೆಯವರು ಬೇರೆ ಕಾರ್ಯಕ್ರಮದ ಮೂಲಕ ಮೋಸ ಮಾಡಿದ್ದರಿಂದ ಇನ್ನೂ ಈಸುವ ಲನಲವಿಕೆ ಹಾಗು ಶಕ್ತಿ ಇದ್ದರು ಕೂಡ ೪ ತಾ. ೯. ಮತ್ತು ೧೦ ವರ್ಷದ ಚಿಕ್ಕ ಬಾಲಿಕೆಯಾದರೂ ಕೂಡ ೪ ತಾ. ೪೯ ಮಿ. ಈಸಿ ಮೆಚ್ಚು ಪಡೆದಿರುವರು. ಶ್ರೀ. ಸುಮಿತ್ರಾಬಾಯಿ ಶಿಂದೆ ಇವರಿಗೆ ಶ್ರೀ. ಭೀಮರಾವ ಗುರುರಾವ ಕಾಳೆ ಮತ್ತು ಶ್ರೀ॥ ನರಸಿಂಗ ನಾರಾಯಣರಾವ ಭಿಸೆ ಇವರು ಮರಾಠಾ ಹಿತ ಚಿಂತಕ ಸಭೆಯ ವಾರಿಫತ ಒಂದು ರೂಪಾಯಿ ಬಕ್ಷಿಸ ಕೊಟ್ಟರು. ಇಂದಿರಾಬಾಯಿ ಪಾಟೋಳೆ ಇವರಿಗೆ ಶ್ರೀ॥ ಭೀಮರಾವ ಗುರುರಾವ ಧಾರವಾಡಕರ ಮತ್ತು ಶ್ರೀ॥ ನರಸಿಂಗ ನಾರಾಯಣರಾವ ಭಿಸೆ ಇವರು ಒಂದು ರೂಪಾಯಿ ಬಕ್ಷಿಸ ಕೊಟ್ಟರು ಮತ್ತು ಶ್ರೀ. ಈಶ್ವರಪ್ಪಾ ದಡವಾಡ, ಅರ್ಕಸಾಲಿಗರು, ಹೊಸಯಲ್ಲಾಪುರ ಇವರು ಒಂದು ಬೆಳ್ಳಿ ಪದಕವನ್ನು ಕೊಟ್ಟರು. ಸಮಾಜದ ಮೆಚ್ಚುಗೆಳಲ್ಲದೆ ಶ್ರೀ. ಡಾ. ಉಪಾಧ್ಯೆ, ಶ್ರೀ. ಬೆಟಗೇರಿ ರಾಮುರಾಯರ ಸ್ನೇಹಿತರೊಬ್ಬರು ಹಾಗು ಶ್ರೀ. ಭಿಸೆ, ಶ್ರೀ. ಕಾಳೆ, ಧಾರವಾಡಕರ ಮುಂತಾದವರು ವಿಶಿಷ್ಟ ಮೆಚ್ಚುಗಳನ್ನು ಹಾಗು ಪದಕಗಳನ್ನು ಕೊಟ್ಟರುವರು. ೧೦ ವರ್ಷದ ಚಿಕ್ಕ ಬಾಲಿಕೆಯಾದ ಶ್ರೀ॥ ಶಾರದಾ ಇವಳ ಈಸುವ ಶೈಲಿಯನ್ನು ನೋಡಿ ಪ್ರೇಕ್ಷಕರು ಬೆರಗಾಗಿ ಹೋದರು.

ಶನಿವಾರ ದಿನ ಸಮಾಜದ ಸಹಾಯಾರ್ಥವಾಗಿ ತಿಕೀಟ ಹಚ್ಚಿ ರಾತ್ರಿ ೧೦ ಗಂಟೆಗೆ ಶ್ರೀ. ಎನ್. ಕೆ. ಕುಲಕರ್ಣಿ ಕೃತ ತಾಯಿಯ ಗುಡಿ, ಉಷಃಪಾರಾಯಣ, ಶ್ರೀ॥ ಬೇಂದ್ರೆ ಕೃತ ತಿರುಕರ ಪಿಡಗು ಇವುಗಳನ್ನು ನಾಟ್ಯಕಲಾವಿತಾನ (ಥಿಯೆಟ್ರಿಕಲ್ಸ್) ಹಾಗೂ ಶ್ರೀ॥ ಪೈ ಇವರ ಗಾಯನ, ಶ್ರೀ॥ ಹೊಂಬಳರವರ ಕೊಳಲುವಾದನ ಹಾಗು ಶ್ರೀ॥ ಶ್ರೀನಿವಾಸರಾವ ಕುಲಕರ್ಣಿ ಇವರ ಹಾಗು ಸಮಾಜದ ವಿದ್ಯಾರ್ಥಿನಿಯವರ ನೃತ್ಯ ಜರಗಿತು. ಒಳ್ಳೆ ತೆರನಾಗಿ ಚಿಕ್ಕ ಬಾಲಿಕೆಯರಲ್ಲಿ ಅಭಿನಯಿಸಿದವರಿಗೆ ಶ್ರೀ॥ ಕೃಷ್ಣರಾವ ಮುದವೇಡಕರ, ಶ್ರೀ॥ ಸಂಪತ್ತಗಿರಿರಾವ, ಬೆಂಗಳೂರ ಹಾಗು ಪ್ರೋ॥ ಮುಗಳಿ ಈ ಪರೀಕ್ಷಕ ಮಂಡಲದವರ ನಿರ್ಣಯಕ್ಕನುಗುಣವಾಗಿ ಶ್ರೀ॥ ತುಂಗಾ ದೇವಾಂಗಮಠ, ಶ್ರೀ॥ ಇಂದಿರಾ ಪಾಟೋಳೆ ಹಾಗು ಶ್ರೀ॥ ಶಿವು ಒಣ್ಣೂರರವರಿಗೆ ಮೆಚ್ಚು ಕೊಡಲಾಯಿತು. ಇದರಲ್ಲಿ ಶ್ರೀ॥ ಬಾಯಪ್ಪ ಉರ್ಫ ಸುಧಾಬಾಯಿ ಶಿಂಪಿ ಇವರ ಅಭಿನಯವು ಒಳ್ಳೇ ತೆರನಾಗಿ ಎಲ್ಲರನ್ನು ಮಿಕ್ಕಿ ಹೋಗುವಂತಿದ್ದರೂ ಕೂಡ ಅವರನ್ನು ಚಿಕ್ಕ ಬಾಲಿಕೆಯರ ಕೂಡ ಹೋಲಿಸುವದು ಸರಿಯಲ್ಲೆಂದು ತಿಳಿದು ಪರೀಕ್ಷಕ ಮಂಡಲದವರು ಅವರನ್ನು ವಿಚಾರದಲ್ಲಿ ತೆಗೆದುಕೊಂಡಿರುವದಿಲ್ಲ. ಇಲ್ಲಿಯ ಕರ್ನಾಟಕ ನಾಟ್ಯಸಂಘದವರು ಒಳ್ಳೇ ಅಭಿನಯಕ್ಕಾಗಿ ಶ್ರೀ॥ ಸುಧಾಭಾಯಿ ಶಿಂಪಿ ಹಾಗು ಶ್ರೀ॥ ತುಂಗಾ ದೇವಾಂಗಮಠ ಇವರನ್ನು ಹೂಮಾಲೆ ಪದಕಗಳಿಂದ ಶ್ರೀ॥ ಕೃ. ಮುದವೇಡಕರರ ಮುಖಾಂತರವಾಗಿ ಅಭಿನಂದಿಸಿದರು. ಶ್ರೀ॥ ಮಹೇಂದ್ರಕರವರು ಶ್ರೀ॥ ಶಿವು ಒಣ್ಣೂರರವರಿಗೆ ವಿಶಿಷ್ಟ (ಸ್ಪೆಶಲ್) ಪದಕವನ್ನು ಕೊಟ್ಟಿರುವರು. ಒಳ್ಳೆತೆರನಾಗಿ ನೃತ್ಯ ಮಾಡಿದ್ದಕ್ಕಾಗಿ ಶ್ರೀ॥ ಶಾರ್ವತಿ ಗಾಣಿಗೇರ ಇವರಿಗೆ ವಿಶಿಷ್ಟ ಮೆಚ್ಚು ಹಾಗು ನೃತ್ಯ ಮಾಡಿದ ಶ್ರೀ॥ ಗಾಣಿಗೇರ, ಶ್ರೀ॥ ಸುಶೀಲಾಬಾಯಿ ಕಟ್ಟಿ, ಶ್ರೀ॥ ಕೃಷ್ಣಾ ಬಸ್ಸುರ ಹಾಗು ಶ್ರೀ॥ ಚಂದ್ರಾ ನಾಯಿಕ ಇವರಿಗೆ ಶ್ರೀ॥ ಆರ್. ಎಸ್. ಗಾಯಿಕವಾಡರವರು ಪದಕಗಳನ್ನು ಅರ್ಪಿಸಿದರು. ಒಳ್ಳೆತೆರನಾಗಿ ನೃತ್ಯ ಮಾಡಿದ್ದಕ್ಕಾಗಿ ಚಿಕ್ಕ ಬಾಲಿಕೆಯರಾದ ಶ್ರೀ॥ ಶಾರದಾ ಕಂಪ್ಲಿ ಹಾಗು ಶ್ರೀ॥ ಸರಸ್ವತಿ ಮಹಲೆ ಇವರಿಗೆ ವಿಶಿಷ್ಟ ಪದಕಗಳು ಕೊಡಲಾದವು.

ರವಿವಾರ ದಿನ ೪-೩೦ವರೆ ಗಂಟೆಗೆ ವಾರ್ಷಿಕೋತ್ಸವಕ್ಕೆ ಪ್ರಾರಂಭವಾಯಿತು. ಸ್ವಾಗತ ಪದ, ಚಪ್ಪರಬಂದದ ವಿದ್ಯಾರ್ಥಿನಿಯರ ಲೇಝಿಮು ಲಾಠಿ, ಶ್ರೀ॥ ಪೈಯವರ ಗಾಯನ, ಆಸನ, ಅಳುವ, ನಗುವ, ಪಂದ್ಯಾಟ ನೃತ್ಯ ಮುಂತಾದ ಕಾರ್ಯಕ್ರಮಗಳು ಜರುಗಿದ ತರುವಾಯ ಶ್ರೀ॥ ಬೇಂದ್ರೆಯವರು ಮಾರ್ಮಿಕ ತೆರದಿಂದ ಅಧ್ಯಕ್ಷರಾದ ಶ್ರೀ॥ ಜೋಗರಾಯರ ಪರಿಚಯವನ್ನು ಮಾಡಿಕೊಟ್ಟರು. ಅಧ್ಯಕ್ಷರು ಹಾಗು ಅವರ ಧರ್ಮಪತ್ನಿಯವರಾದ ಶ್ರೀ॥ ಪಾರ್ವತಿಬಾಯಿಯವರು ಸ್ಥಾನಾಪನ್ನರಾದ ನಂತರ ಶ್ರೀ॥ ಸುಧಾಬಾಯಿ ಶಿಂಪಿ ಇವರು ಸಮಾಜದ ೪ನೇ ವರ್ಷದ ವರದಿಯನ್ನೋದಿ ಹೇಳಿದರು. ಅದರ ಸಾರಾಂಶವೇನೆಂದರೆ ಶ್ರೀ॥ ರಾಣಿ ಬೋರಮ್ಮಣ್ಣಿಯವರು, ರಾವಸಾಹೇಬ ಹಳಕಟ್ಟಿ, ಶ್ರೀ॥ ಜೋಗ, ಶ್ರೀ॥ ಆರ್. ಎಸ್. ಹಿರೇಮಠ, ಪ್ರೋ॥ ಧೊವೇಶ್ವರಕರ, ಪ್ರೊ॥ ಮೌಲವಿ ಮುಂತಾದ ಮಹನೀಯರು ಸಮಾಜದ ಮುಂಡಲದಲ್ಲಿರುವರು. ಈ ಸಲ ಅವಿವಾಹಿತ, ವಿವಾಹಿತ ಹಾಗು ವಿಧವೆಯರು ಕೂಡಿ ಲಿಂಗಾಯತ ೩೩, ಬ್ರಾಹ್ಮಣ ೫೧, ಮಹಮ್ಮದಿ ೧೫ ಹಾಗು ಇತರರು ೩೩ ಅಂತೂ ೧೩೨ ವಿದ್ಯಾರ್ಥಿನಿಯರಿರುವರು. ಇದರಲ್ಲಿ ಬೇರೆ ಬೇರೆ ಪ್ರಾಂತಗಳಿಂದ ಬಂದಂಥ ೩೬ ವಿದ್ಯಾರ್ಥಿನಿಯರು ವಸತಿಗೃಹದಲ್ಲಿ ಇರುವರು. ೭ರಲ್ಲಿ ೫ ವಿದ್ಯಾರ್ಥಿನಿಯರು ಮೂಲಕಿ ಪರೀಕ್ಷೆಯಲ್ಲಿ ಪಾಸಾಗಿರುವರು. ಧರ್ಮಾರ್ಥ ಆಯುರ್ವೇದಿಯ ದನಾಖಾನೆಯಲ್ಲಿ ಬ್ರಾಹ್ಮಣ ೬೮೬, ಲಿಂಗಾಯತ ೩೭೧, ಮರಾಠಾ ೧೪೪, ಮುಸ್ಲಾನ ೧೩೩ ಮತ್ತು ಅಸ್ಪೃಶ್ಯ ಮುಂತಾದ ಇತರ ಜನರು ೨೩೩, ಅಂತೂ ೧೫೬೭ ಜನರಿಗೆ ಉಪಚಾರ ಮಾಡಲಾಗಿ ಇವುಗಳಲ್ಲಿ ೧೨೫೦ ಜನರು ಗುಣ ಹೊಂದಿರುವರು. ವಾಚನಾಲಯದಲ್ಲಿ ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ, ಹಿಂದಿ ಮುಂತಾದ ಪುಸ್ತಕಗಳು ೪೦೦೦ ವಿದ್ದು ೨೦ ವೃತ್ತಪತ್ರಿಕೆಗಳು, ೧೦ ಮಾಸಿಕಗಳು ಬರುತ್ತಲಿವೆ. ಇದರ ಲಾಭವನ್ನು ೭೦೦ ಸ್ತ್ರೀಯರು ತೆಗೆದುಕೊಂಡಿರುವರು. ಧರ್ಮಾರ್ಥ ಸ್ರಸೂತಿಗೃಹದಲ್ಲಿ ಲಿಂಗಾಯತ ೭, ಪಟೆಗಾರ ೧, ಮಹಮ್ಮದಿ ೧, ಕುರುಬರ ೧, ಮರಾಠಾ ೫, ಬೇಡರ ೨ ಮತ್ತು ಬ್ರಾಹ್ಮಣ ೧೪ ಅಂತೂ ೩೧ ಬಾಣಂತಿತನಗಳಾಗಿರುವುವು. ಇವುಗಳಲ್ಲಿ ಇಬ್ಬರಲ್ಲಿ ಅಕಾಲ ಗರ್ಭಪಾತವಾಗುವ ಸಂಭವವಿತ್ತು (ಥ್ರೇಟನ್ಡ್ ಅಬೋರ್ಶನ). ಒಂದು ಕಾಲ ಪ್ರಸೂತಿ (ಪ್ರಿಮೆಚುರ ಡಿಲಿವ್ಹರಿ), ಮೃತಗರ್ಭ ಎರಡು, ಶಸ್ತ್ರಗಳ ಸಹಾಯದಿಂದ ೨೫ ಸುರಕ್ಷಿತವಾಗಿರುವವು.

ಚಿಲ್ಡ್ರನ್ಸ ಆ್ಯಕ್ಟ ಪ್ರಕಾರ ಸುರಕ್ಷಿತ ಆಶ್ರಯಕ್ಕಾಗಿ (ಸೇಫ ಕಸ್ಟಡಿ) ೪ ಕೇಸುಗಳು ಬಂದಿದ್ದವು. ನೂರಾರು ಉಪನ್ಯಾಸಗಳಾಗಿರುವವು. ಆಯವು ೧೦,೧೬೧ ರೂ. ೧೪ ಆಣೆ ॥ ಪೈ. ವ್ಯಯವು ೧೦,೧೫೭ ರೂ. ೧೪ ಆಣೆ ೧ ಪೈಯಾಗಿ ೫. ರೂ. ೧೫ ಆಣೆ ೧೧॥ ಪೈ ವರ್ಷ ಅಖೈರ ಶಿಲ್ಲಿರುವದು. ಸಾಲ ಹೋಗಲಾಗಿ ಈ ಹೊತ್ತಿನ ಮಿತಿಗೆ ೨೬೬೦ ರೂ. ೪ ಆಣೆ.೪॥ ಪೈ ಇರುವದು. ಸತ್ತವರ ಸಲುವಾಗಿ ದುಃಖಪ್ರದರ್ಶನ, ಸಹಾಯಕರಿಗಾಗಿ ಕೃತಜ್ಞತಾಪ್ರದರ್ಶನ, ಆ ಮೇಲೆ ಸೌ॥ ಪಾರ್ವತಿಬಾಯಿ ಜೋಗರವರಿಂದ ವಾರ್ಷಿಕ ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿನಿಯರಿಗೆ ಮೆಚ್ಚು ಕೊಡಲಾದವು. ಶ್ರೀಮತಿ ಗೌರಮ್ಮ ಚಂದರಗಿ ಇವರ ೫ ರೂ. ಸ್ಕಾಲರಶಿಪ್ ಶ್ರೀ॥ ತುಂಗಾ ದೇವಾಂಗಮಠ ಇವಳಿಗೆ, ಶ್ರೀ॥ ಜೋಶಿ, ನರಗುಂದಕರ ಇವರ ನೈತಿಕ ಹಾಗೂ ಧಾರ್ಮಿಕ ಸ್ಕಾಲರಶಿಪ್ ಪರೀಕ್ಷೆಯಲ್ಲಿ ೧ ನೇ ನಂಬರ ೩ ರೂ. ಶ್ರೀ॥ ಕಲ್ಯಾಣಿ ಕೋಚೀಕರ ಇವಳಿಗೆ, ೨. ನೇ ನಂಬರ ೨ ರೂ. ಶ್ರೀ॥ ತಿಪ್ಪವ್ವ ಕುರಬರ ಇವಳಿಗೆ ಆಸನಕ್ಕಾಗಿ, ಶ್ರೀ॥ ಆರ್. ಎಸ್. ಗಾಯಕವಾಡ ಇವರ ವಿಶಿಷ್ಟ ಪದಕ ಹಾಗು ಮರ್ದಾನಿ ಆಟಗಳಲ್ಲಿ ತದಬೇತ ಇದ್ದದ್ದಕ್ಕಾಗಿ, ಒಂದು ಜಂಬಿಯಾ, ಶ್ರೀ॥ ಸುಮಿತ್ರಾ ಬಾಯಿ ಶಿಂದೆ ಇವರಿಗೆ, ಶ್ರೀ॥ ಕಮುದವೇಡೆಕರ ಹಾಗು ಶ್ರೀ॥ ಅಮ್ಮಿನ ಭಾವಿ ಮಾಸ್ತರ ಈ ಪರೀಕ್ಷಕ ಮಂಡಳದ ನಿರ್ಣಯಕ್ಕನುಗುಣವಾಗಿ ಆಳುವ ಪಂದ್ಯಾಟದಲ್ಲಿ, ಶ್ರೀ॥ ತಿಪ್ಪವ್ವ ಕುರಬರ ಹಾಗೂ ನಗುವದರಲ್ಲಿ ಶ್ರೀ॥ ಸುಧಾಬಾಯಿ ಶಿಂಪಿ ಇವರಿಗೆ ಮೆಚ್ಚು ಕೊಡಲಾದವು. ತರುವಾಯ ಅಧ್ಯಕ್ಷರು ಮಾಡಿದ ಭಾಷಣದ ಸಾರಾಂಶವೇನೆಂದರೆ:— ಇಷ್ಟು ಸ್ವಲ್ಪ ಕಾಲದಲ್ಲಿ ಇಷ್ಟು ವಿರೋಧಗಳಿಗೆ ಎದುರಿಸಿ ಇಷ್ಟು ಪ್ರಗತಿಯನ್ನು ಈ ಸಮಾಜವು ಮಾಡೀತೆಂದು ಕಲ್ಪನೆಯು ಸಹ ನನಗೆ ಸ್ವಪ್ನದಲ್ಲಿಯೂ ಬಂದಿದ್ದಿಲ. ಇಲ್ಲಿಗೆ ಬಂದು ಪ್ರತ್ಯಕ್ಷ ನೋಡಲಾಗಿ ಗಾಯನ, ವಾದನ, ನೃತ್ಯ ಮುಂತಾದ ಲಲಿತಕಲೆಗಳನ್ನು ಕಲಿಸುವಂತ, ಲಾಠಿ, ಲೇಝಿಯಂ, ಆಸನ, ಈಸುವ ಮುಂತಾದ ಶರೀರಾರೋಗ್ಯ ಬೆಳೆಸುವ ಶಿಕ್ಷಣ ಹಾಗೂ ಬೆತ್ತದ, ವೈದ್ಯಕೀಯ, ಹೊಲಿಗೆ ಮುಕತಾದ ಧಂಡೆಗಳ ಶಿಕ್ಷಣವಾದರೂ ಇಲ್ಲಿ ಕೊಡಲಾಗಿರುತ್ತದೆ. ಎಲ್ಲ ತೆರನಾಗಿ ಬೌದ್ಧಿಕ, ಶಾರೀರಕ, ಮಾನಸಿಕ, ನೈತಿಕ, ಸಾಮಾಜಿಕ

(೨ನೇ ಪುಟಕ್ಕೆ ಮುಂದರಿಸಿರಿ)

ಹೆಂಗಸರಿಗಾಗಿ

ಪ್ರಕೃತಿಯೊಂದಿಗೆ ನಿಮ್ಮ ಕೂದಲಿನ ಸೌಂದರ್ಯವನ್ನು ಪುನರುಜ್ಜೀವನಗೊಳಿಸಿರಿ.

ಅತ್ಯುತ್ಕೃಷ್ಟವಾದ ಕೇಶವರ್ಧಕ 'ಟಾನಿಕ್'

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)

ನಿಮ್ಮ ಕೂದಲಿನ ಸೌಂದರ್ಯ ಮತ್ತೂ ಬೆಳವಣಿಗೆಗಳಿಗೆ ಇದು ಅತ್ಯಮೂಲ್ಯವಾಗಿದೆ. ಇದು ಪ್ರತ್ಯೇಕವಾದ ಕಾಂತಿಯನ್ನು ಉಂಟುಮಾಡುವುದು; ಕೂದಲನ್ನು ಸೊಗಸಾಗಿ, ಉದ್ದವಾಗಿ, ರೇಶ್ಮೆಯಂತೆ ಮಾಡಿಬಿಡುವುದು; ಇದನ್ನು ಉಪಯೋಗಿಸುವವರೆಲ್ಲರಿಗೂ ಇದು ಬಹು ಮೋಹಕವಾಗಿದೆ. ಇದರ ಮಧುರ ಪರಿಮಳವು, ಇದರ ಗುಣವಿಶೇಷಗಳಂತೆಯೇ ನಿಮ್ಮನ್ನು ಸಂತೋಷಗೊಳಿಸುವುವು. ಇಂದೇ ಒಂದು ಬಾಟಲಿಯನ್ನು ಪರೀಕ್ಷಿಸಿರಿ. ಬಾಟಲಿಯೊಂದಕ್ಕೆ ರೂ. 1—0—0. ಅಥವಾ ಬಾಟಲಿ 3ಕ್ಕೆ ರೂ. 2—10—0. ವಿ. ಪಿ. ಚಾರ್ಜು ಪ್ರತ್ಯೇಕ. ಪೋಸ್ಟೇಜಿಗಾಗಿ 2½ ಆಣೆಯ ಸ್ಟಾಂಪ್ ಕಳುಹಿಸಿ ಇದರ ಮಾದರಿಯನ್ನು ಕೇಳಿ. ಅದು ನಿಮಗೆ ಉಚಿತ.

ಒಟ್ಟೋದಿಲ್ ಬಹಾರ್ (ರಿಜಿಸ್ಟರ್ಡ್)

ಈಗಿನ ದಿನಗಳಲ್ಲಿ ಜನಪ್ರೀತಿಯನ್ನು ಸಂಪಾದಿಸಿರುವ ಸುಗಂಧ ದ್ರವ್ಯವಿದು. ಇದರ ಮಧುರವಾಸ, ಮರುಳುಗೊಳಿಸುವ, ಬಹು ಕಾಲ ಉಳಿಯುವ ಈ ಗುಣಗಳಿಗಾಗಿ ಇದು ಬಹಳ ಪ್ರಸಿದ್ಧಿಪಡೆದಿದೆ. ಒಂದು ಕೈವಸ್ತ್ರದ ಮೇಲೆ ಚುಮುಕಿಸಿದ ಕೆಲವೇ ಬಿಂದುಗಳಿಂದ ಸುತ್ತಲೂ ಎತ್ತೆತ್ತಲೂ ವೈಭವಸೂಚಕವಾದ ಪರಿಮಳ ಗಂಧವು ಪಸರಿಸುತ್ತದೆ. ¼ ಔನ್ಸಿನ ಬಾಟಲಿಗೆ ರೂ. 2—0—0; ½ ಔನ್ಸಿನ ಬಾಟಲಿಗೆ ರೂ. 1—4—0; ವಿ. ಪಿ. ಚಾರ್ಜು ಪ್ರತ್ಯೇಕ; ಪೋಸ್ಟೇಜಿಗಾಗಿ 2 ಆಣೆ ಸ್ಟಾಂಪು ಕಳುಹಿಸಿ ಇದರ ಮಾದರಿಯನ್ನು ಕೇಳಿ; ಅದು ನಿಮಗೆ ಉಚಿತ.

ಕಾಮಿನಿಯಾ ಸೋಪ್ (ರಿಜಿಸ್ಟರ್ಡ್)

ಚರ್ಮಕ್ಕಿದು ಅತ್ಯಂತ ಶಾಸ್ತ್ರೀಯವಾಗಿ ಸಿದ್ಧವಾದ ಸಾಮಗ್ರಿ. ಮುಖದ ಮೇಲಿನ ಮಡವೆಗಳು, ನೆರಿಗೆಗಳು, ಕಲೆಗಳು ಇವನ್ನು ಹೋಗಲಾಡಿಸಿ, ಚರ್ಮವನ್ನು ಸುಂದರವಾಗಿ, ಹೊಸದಾಗಿ, ಯೌವನದಿಂದ ತುಂಬಿಸಿ ಇಡುತ್ತದೆ. ಇದು ಚರ್ಮವನ್ನು ಮೃದುವಾಗಿ, ಮುಖಮಲ್ಲಿನ ಹಾಗೆ ಮೂಡಿಸುವುದೂ ಅಲ್ಲದೆ, ನೋಟಕ್ಕೆ ಶುಭ್ರವಾಗಿಯೂ ಹಿತವಂತೆ ಬೆಳ್ಳಗಾಗಿಯೂ ಇರಿಸುತ್ತದೆ. ಇದು ಮನೋಹರವಾಗಿ ಸುವಾಸಿತವಾಗಿದೆ. ಬುಡ್ಡಿಯೊಂದಕ್ಕೆ ಆಣೆ 0—12—0. ವಿ. ಪಿ. ಚಾರ್ಜು ಪ್ರತ್ಯೇಕ.

ಉಷ್ಣ ಹವಾಮಾನಕ್ಕೆ ಅತ್ಯಂತ ಶ್ರೇಷ್ಠವಾದ ಅಲಂಕಾರದ ಸಾಬೂನುಗಳು.

ಕಾಮಿನಿಯಾ ಟ್ಯಾಲೆಟ್ ಸಾಬೂನುಗಳು (ರಿಜಿಸ್ಟರ್ಡ್)

ಸಂಪೂರ್ಣವಾದ ಆರೋಗ್ಯದಾಯಕ ಶಕ್ತಿಯಲ್ಲಿಯೂ, ಆಹ್ವಾತೀಯವಾದ ಸುವಾಸನೆಯಲ್ಲಿಯೂ ಇದರ ಸರಿಸಮಾನವಿಲ್ಲವೆಂದು ನಿದರ್ಶನಕ್ಕೆ ಬಂದಿರುವ ಅತ್ಯಂತ ಸೊಗಸಾದ ಸಾಬೂನುಗಳಿವು. ಅತ್ಯುತ್ಕೃಷ್ಟವಾದ ಹಲವು ಬಗೆಯ ಪರಿಮಳಗಳಿಂದ ಕೂಡಿ ಮಾರಾಟಕ್ಕೆ ದೊರೆಯುತ್ತವೆ. ಅವುಗಳಲ್ಲಿ ಕೆಲವು ಇವು—ವೈಟ್ ರೋಸ್, ಸ್ಯಾಂಡಲ್, ಲೆವೆಂಡರ್, ಡಿಲ್ ಬಹಾರ್, ಗ್ಲಿಸರಿನ್ (ಟ್ರಾನ್ಸ್‌ಪೇರೆಂಟ್) ಮೊದಲಾದುವು. ಮನಮೋಹಕವಾದ ಇವುಗಳ ಸುಗಂಧವು ಸ್ನಾನಕಾಲದಲ್ಲಿ ಮಹದಾನಂದವನ್ನು ಉಂಟುಮಾಡುತ್ತದೆ. ಮೂರು ತುಂಡು ಸಾಬೂನುಗಳ ಒಂದು ಪೆಟ್ಟಿಗೆ ರೂ. 1—0—0. ವಿ. ಪಿ. ಚಾರ್ಜು ಪ್ರತ್ಯೇಕ.

ಸೋಲ್ ಏಜಂಟ್ಸ್:—ಆಂಗ್ಲೊ-ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕೊ., 285, ಜುಮ್ಮಾ ಮಸೀದಿ, ಬೊಂಬಯಿ ನಂ. 2.

ಡಬ್ಲ್ಯೂ. ರ್ಥರ್ ಹೆಮೋರ್ಹಾಯ್ಡಲ್ ಆಯಿಂಟ್‌ಮೆಂಟ್



ಮೂಲವ್ಯಾಧಿಗೆ

ರಕ್ತ ಸುರಿಯುವ ಅಥವಾ ಸುರಿಯುವಂಥಾದ್ದು, ಒಡಕುಗಳು, ವ್ರಣ, ಸೋರುವ ಹುಣ್ಣು, ಕೆಲವೇ ಲೇಪನಗಳು ಶುಭ್ರಗೊಳಿಸುವಾಗ ಲೇ ಗುಣಪಡಿಸುತ್ತವೆ.

ಡಬ್ಲ್ಯೂ. ರ್ಥರ್ ಹೆಮೋರ್ಹಾಯ್ಡಲ್ ಆಯಿಂಟ್‌ಮೆಂಟ್.

ನಿಮ್ಮ ಕೆಮಿಸ್ಟರಿಂದ ಪಡೆಯಿರಿ.

Hemorrhoidal Ointment

ಕ್ರಯ ನಳಿಗೆಯೊಂದಕ್ಕೆ ರೂ. 1/12/-. ಅಂಚೆವೆಚ್ಚ ಬೇರೆ.

ಸೋಲ್ ಏಜೆಂಟರು:
ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ,
ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,
6, ಪ್ರಿನ್ಸ್‌ಸೆಸ್ ಸ್ಟ್ರೀಟ್, ಮುಂಬಾಯಿ.

ಈ ಹತ್ಯಾಪರಾಧವ್ಯಾರದು?

ಗರ್ಭಾಶಯರೋಗಗಳನ್ನು ಹೊರಗೋಡಿಸಲಿಕ್ಕೆ ದಾರಿ ಹುಡುಕದಿದ್ದ ಆಕೆಯದೇ ಎಂದು ಸತ್ಯವು ಪ್ರತಿಧ್ವನಿಗೊಡುತ್ತಿದೆ.

ಆಕೆಯ ಅಜಾಗರೂಕತೆಯಿಂದ ಯಾವುದೋ ಒಳಗೊಳಗೇ ಕತ್ತು ಹಿಸುಕಿಕೊಂದಂತೆ ಸಹಜಸಂತಾನವು ಆಕೆಗಿಲ್ಲದೇ ಹೋಗುತ್ತಿದೆ.

ಗರ್ಭಾಶಯರೋಗಗಳನ್ನು ಹೊರಗೋಡಿಸಿ ಆರೋಗ್ಯ ಸಂಪಾದಿಸಿದ ಸ್ತ್ರೀಗೆ ಸಹಜವಾದ ಸಂತಾನಸೌಖ್ಯವು ಲಭಿಸುತ್ತದೆ.

ಗರ್ಭಾಶಯರೋಗನಿವಾರಣೆಗೆ "ಲೋಧ್ರ" ವಿಟ್ಟದ್ದೇ ಹೆಸರು.

ಸಂತಾನಸಂಜೀವಿನಿ—ಆರೋಗ್ಯಪ್ರದಾಯಿನಿ "ಲೋಧ್ರ."

ಕೇಸರಿ ಕುಟೀರಂ, ಮದರಾಸು.

ಸ್ಕಿವಬ್ಸ್ ಎಗ್ಯೂ ಸ್ಪೆಸಿಫಿಕ್

ಅಂದರೆ

ಕುದುರೆ ಗುರ್ತಿನ ಜ್ವರದ ಔಷಧಿ

ವ್ಯಾಪಾರದ ಗುರುತು

50 ವರ್ಷಗಳಿಂದ ಪ್ರಸಿದ್ಧವಾದ ಔಷಧ

ಮಲೇರಿಯಾ ಇನ್‌ಫ್ಲುಯೆಂಜಾ

ಮತ್ತೂ ಇತರ ಜ್ವರಗಳಿಗೆ

ನಕಲಿ ಸಾಧನಗಳ ಕುರಿತು ಜೋಕೆ

'ಸ್ಕಿವಬ್ಸ್ ಎಗ್ಯೂ ಸ್ಪೆಸಿಫಿಕ್' ಆಶ್ಚರ್ಯಕರ ಕೆಲಸ ಮಾಡುತ್ತಿದೆ. ಅದನ್ನು ಉಪಯೋಗಿಸಿದವರೆಲ್ಲ ಅಹ ಕೊಟ್ಟು ಹೇಳುತ್ತಾರೆ.' ಜೆ. ಜೆ. ಫೆಸಿ, ಲೋಕೋ ಡಿಪಾರ್ಟ್‌ಮೆಂಟ್, ಎ. ಎಂಡ್ ಬಿ. ರೈಲ್ವೆ. ಅಸ್ಸಾಮ್.

MADON SONS & COMPANY
Qualified Chemists, Bombay. 2.



ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಇದೀಗ ಆದ್ವಿತೀಯ ಸಿದ್ಧೌಷಧ. ಈಗ ಚಾಲ್ತಿಯಲ್ಲಿರುವ ಹಿಂದುಸ್ಥಾನದ ಮತ್ತು ಆಂಗ್ಲೇಯ ಚಿಕಿತ್ಸೆಗಳು, ಹುಚ್ಚು, ನಿದ್ರಾಭಂಗ, ಮನೋಭ್ರಾಂತಿ, ಹಿಸ್ಟೇರಿಯಾ ಮತ್ತು ಅಪಸ್ಮಾರ ಮುಂತಾದ ಎಲ್ಲಾ ರೋಗಗಳಿಗೆ ನಿಷ್ಫಲವಾದಲ್ಲಿ, ಕೊನೆಗೆ ಒಂದಾವರ್ತಿಯಾದರೂ **ಪರಮಾಸನ್ ಮಾತ್ರೆಗಳನ್ನು** ಉಪಯೋಗಿಸಿ ಖಾತ್ರಿ ಮಾಡಿರಿ. ಇದನ್ನು ರೋಗಿಗಳಿಗೆ ಉಪಯೋಗಿಸಿ ಇದರ ಆಶ್ಚರ್ಯಕರವಾದ ಗುಣಗಳನ್ನು ನೋಡಿ, ಅನೇಕ ಪಂಡಿತ, ಡಾಕ್ಟರುಗಳು ಹೊಗಳಿ ಕೊಟ್ಟ ಸರ್ಟಿಫಿಕೇಟುಗಳು ಇದರ ಕೀರ್ತಿಯನ್ನು ವರ್ಣಿಸುತ್ತವೆ. ಈ ಮಾತ್ರೆಗಳಿಂದ ಚಿಕಿತ್ಸೆಮಾಡಿದರೆ ರೋಗಿಗಳನ್ನು ಎಂದೆಂದಿಗೂ ಮೆಂಟಲ್ ಆಸ್ಪತ್ರೆಗೆ ಕಳುಹಿಸುವ ಅಗತ್ಯವಿರದು. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 4—0—0, ಪಾತ್ರ, ವ್ಯಾಪಾರಸ್ಥರಿಗೆ ಕಮಿಷನ್ ಕೊಡಲಾಗುವುದು.

ಮಂಗಳೂರಿನಲ್ಲಿ **ಕಾರ್ನಾಡ್ ಶಿವರಾವ್,** ಮಾರ್ಕೆಟ್ ರೋಡ್
ಇವರಲ್ಲಿ ಮಾತ್ರೆಗಳು ಮಾರಾಟಕ್ಕೆ ದೊರೆಯುವವು.

C. V. KAMATH,
Hysteria & Mental Expert, Post Udipi.

(೧೪ನೇ ಪುಟದಿಂದ)

ಹಾಗು ರಾಜಕೀಯ ಮುಂತಾದ ಸ್ತ್ರೀಯರ ಏಳ್ಗೆಗಾಗಿ ಹೆಣಗಾಡುವ ಸಂಸ್ಥೆಯೆಂದರೆ ನಮ್ಮ ಸಂಯುಕ್ತ ಕರ್ನಾಟಕದಲ್ಲಿ ಇದೊಂದೇ ಇದ್ದರೂ ಒಳ್ಳೇ ದಾರಿಯಿಂದ ನಡೆದದೆಂದು ಹೇಳ ಬಹುದು. ಇದರ ವೈಶಿಷ್ಟ್ಯವೆಂದರೆ ಯಾವ ತೆರವಾದ ಜಾತಿ, ಕುಲ ಉಚ್ಚ ನೀಚವೆಂಬ ಕಲ್ಪನೆಯನ್ನು ಬಿಟ್ಟು ಎಲ್ಲ ಸ್ತ್ರೀಯರೊಂದೆಂಬ ರಾಷ್ಟ್ರದ ಏಳ್ಗೆಗೆ ಆವಶ್ಯಕವಾದಂಥ ಸಮತಾ ಭಾವನೆಯಿಂದ ಕೆಲಸ ಮಾಡುತ್ತಿರುವದು. ಆರ್ಯಸಂಸ್ಕೃತಿಯ ತಿರುಳನ್ನು ಬಿಡದೆ ಬದಲಾಯಿಸಿದ ಈಗಿನ ಕಾಲಕ್ಕನುಗುಣವಾದ ಶಿಕ್ಷಣವು ಇಲ್ಲಿಯ ಹೊರ್ತು ಬೇರೆ ಶಾಲೆಗಳಲ್ಲಿ ಸಿಗುವದಿಲ್ಲ. ವರ್ಷಾ ೧೦—೧೫ ಸಾವಿರ ಖರ್ಚಿನ ಹೊಣೆಯನ್ನು ಹೊತ್ತು ಜಾಲಕರು ನಡೆಸಿದ ಕಾರ್ಯವು ಅಷ್ಟೊಂದು ಅಲಕ್ಷ್ಯ ಮಾಡತಕ್ಕಂಥಾದಲ್ಲ. ಇದಕ್ಕೆ ಸಾಕಷ್ಟು ಜನರು ಸಹಾಯ ಮಾಡದೆ ಇದ್ದದ್ದು ನೋಡಿ ನನಗೆ ವಿಷಾದವೆನಿಸುತ್ತದೆ. ಇದಕ್ಕೆ ಸ್ಥಾಯಿಸ್ವರೂಪ ಬರಬೇಕಾದರೆ ಸ್ವತಂತ್ರ ಕಟ್ಟಡ ಹಾಗೂ ಶಾಶ್ವತನಿಧಿಯ ಆವಶ್ಯಕತೆಯುಂಟು. ಇದೊಂದು ಧಾರವಾಡಕ್ಕೆ ಅಲ್ಲ ಆದರೆ ಇಡೀ ಕರ್ನಾಟಕಕ್ಕೆ ಭೂಷಣಪ್ರಾಯವಾದಂಥ ಸಂಸ್ಥೆಯು. ಇವರು ನಮ್ಮ ಸಹಾಯಕ್ಕೆ ಪ್ರತಿಫಲವಾದರೂ ಧರ್ಮಾರ್ಥ ಆಯುರ್ವೇದಿಯ ದವಾಖಾನೆ, ಧರ್ಮಾರ್ಥ ಪ್ರಸೂತಿಗೃಹ, ಶಿಕ್ಷಣ ಮುಂತಾದವುಗಳಿಂದ ಕೊಡುತ್ತಿರುವರು. ಕಾರಣ ಎಲ್ಲರೂ ಇದಕ್ಕೆ ಸಹಾಯ ಮಾಡಿ ಇದನ್ನು ಮುಂದಕ್ಕೆ ತರುವಿರೆಂದು ಆಶಿಸಿ ನನಗೆ ಹಾಗು ನನ್ನ ಪತ್ನಿಯವರಿಗೆ ಈ ಸನ್ಮಾನವನ್ನಿತ್ತು ಗೌರವಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ಹಾಗು ಸಮಾಜದ ಜಾಲಕರಿಗೂ ನಾನು ತುಂಬಾ ಋಣಿಯಾಗಿದ್ದೇನೆ.

ಆ ಮೇಲೆ ಶ್ರೀ॥ ಶಿವಲಿಂಗಶಾಸ್ತ್ರಿಗಳು ಶ್ರೀ॥ ಜೋಗರಾಯರಿಗೆ, ಹಾಗು ಶ್ರೀಮತಿ ಶಾಂತಾಬಾಯಿ ಮಳಿಮಠ ಇವರು ಸೌ॥ ಪಾರ್ವತಿಬಾಯಿ ಜೋಗ ಇವರಿಗೆ ತಾಂಬೂಲ ಹಾಗು ಪೂಮಾಲೆಗಳನ್ನರ್ಪಿಸಿದ ನಂತರ ಶ್ರೀ॥ ಡಿ. ಎಲ್. ಪಾಟೀಲರು ಶ್ರೀ॥ ಜೋಗರಾಯರ ಅನುರು ಅಧ್ಯಕ್ಷಸ್ಥಾನ ಸ್ವೀಕರಿಸುವ ಮೊದಲೆ ೫೦೦ ರೂ. ಕೊಡಲೊಪ್ಪಿ ೨೦೦ ರೂ. ಕೊಟ್ಟು ಬೇಗನೆ ೬೦೦ ರೂ. ಕೊಡಲು ವಚನ ಕೊಟ್ಟದ್ದಕ್ಕಾಗಿ, ಸೌ॥ ಪಾರ್ವತಿಬಾಯಿ ಜೋಗ ಇವರು ಮೆಚ್ಚು ಕೊಟ್ಟಿದ್ದಕ್ಕಾಗಿ, ಶ್ರೀ॥ ಎಸ್. ಕೆ. ಕುಲಕರ್ಣಿ ಹಾಗು ಅವರ ಸಂಗಡಿಗರು, ಶ್ರೀ॥ ಎನ್. ಕೆ. ಕುಲಕರ್ಣಿ ಹಾಗು ಅವರ ಸಂಗಡಿಗರು, ಶ್ರೀ॥ ಹೊಂಬಳ ಹಾಗು ಅವರ ಸಂಗಡಿಗರು, ನೃತ್ಯ, ಗಾಯನ, ವಾದನ ಮಾಡಿದ್ದಕ್ಕಾಗಿ, ನಾಟಕ ಬರೆದುಕಲಿಸಿದ್ದಕ್ಕಾಗಿ, ಶ್ರೀ॥ ಶಿವಪ್ಪಣ್ಣ ಟಿಂಗಿನಕಾಯಿಯವರು ಥೇಟರ ಕೊಟ್ಟದ್ದಕ್ಕಾಗಿ, ಶ್ರೀ॥ ಶಂಭುರಾವ ಕಿರ್ಲೋಸ್ಕರ ಹಾಗು ಸದರ್ನ ಮರಾಠಾ ಬ್ಯಾಂಕಿನವರು ಖುರ್ಚಿ ಹಾಗು ಮ್ಯಾಟುಗಳನ್ನು ಕೊಟ್ಟದ್ದಕ್ಕಾಗಿ, ಶ್ರೀ॥ ಸಿ. ಎಸ್. ದೇಸಾಯಿ ಇವರು ವಿದ್ಯುದ್ದೀಪಗಳನ್ನು ಕೊಟ್ಟಿದ್ದಕ್ಕಾಗಿ, ಶ್ರೀ॥ ನಿಂಗಪ್ಪಾ ಸಾಂಬ್ರಾಣಿ ಇವರು ತಿಕೀಟು ಕ್ಯಾನ್‌ವ್ಹಾಸಮಾಡಿ ಮಿಕ್ಕ ರೀತಿಯಿಂದ ಸಹಾಯ ಮಾಡಿದ್ದಕ್ಕಾಗಿ, ಡಿ॥ ಮ್ಯಾಜಿಸ್ಟ್ರೇಟ, ಸಿಟಿ ಮ್ಯಾಜಿಸ್ಟ್ರೇಟ, ಇವರು ಎಂಟರಟೇನಮೆಂಟ ಟ್ಯಾಕ್ಸ ಮಾಫ ಮಾಡಿ ನಾಟಕಕ್ಕೆ ಪರವಾನಿಗೆ ಕೊಟ್ಟ ಬಗ್ಗೆ, ಶ್ರೀ॥ ಡಾ॥ ಉಪಾಧ್ಯೆ, ಶ್ರೀಮತಿ ಗೌರಮ್ಮ ಚಂದರಗಿ, ಶ್ರೀ॥ ಭಿಸೆ, ಕಾಳೆ, ಗಾಯಕವಾಡ, ಧಾರವಾಡಕರ ಬೆಟಿಗೇರಿಯವರ ಸ್ನೇಹಿತರು, ನಾಟ್ಯಕಲಾ ಸಂಘದವರು, ಮಹೇಂದ್ರಕರ, ಮುಳಿಮಠ, ಸಾಠ ಮುಂತಾದ ಮಹನೀಯರು ಮೆಚ್ಚಿ ಹಾಗೂ ಪದಕಗಳನ್ನು ಕೊಟ್ಟಿದ್ದಕ್ಕಾಗಿ, ಶ್ರೀ॥ ಕೃ. ಮುದವೇಡಕರ, ಶ್ರೀ॥ ಸಂಪತ್ತಗಿರಿರಾವ, ಪ್ರೊ॥ ಮುಗಳಿ, ಶ್ರೀ॥ ಅಮ್ಮಿನಭಾವಿ ಮಾಸ್ತರ ಇವರು ಪರೀಕ್ಷಕ ಮಂಡಳದಲ್ಲಿ ಕೆಲಸ ಮಾಡಿದ್ದಕ್ಕಾಗಿ, ಪ್ರೊ॥ ಜಠಾರ ಹಾಗು ಶ್ರೀ. ಇನಾಮದಾರ ಲಕ್ಷ್ಮಣರಾಯರು ಈಸಲು ಭಾವಿಗಳನ್ನು ಕೊಟ್ಟಿದ್ದಕ್ಕಾಗಿ, ಶ್ರೀ॥ ರಾಮರಾವ ಬೇಟಗೇರಿ ಇವರು. ಈಸು ಕಲಿಸಿದ್ದಕ್ಕಾಗಿ, ಶ್ರೀ॥ ಬೇಂದ್ರೆ ಹಾಗು ಶ್ರೀ॥ ಮುಳಿಮಠ ಇವರು ಹಲವು ತೆರವಾಗಿ ಸಹಾಯ ಮಾಡಿದ್ದಕ್ಕಾಗಿ ಅಂತೂ ಜ್ಞಾತ ಅಜ್ಞಾತವಾಗಿ ಸಹಾಯ ಮಾಡಿದ ಎಲ್ಲ ಮಹನೀಯರ ಉಪಕಾರ ಸ್ಮರಿಸಿದ ತರುವಾಯ ರಾಷ್ಟ್ರಗೀತ ಹಾಗು ತಾಂಬೂಲವಾದನಂತರ ಸಭೆಯು ಮುಗಿಯಿತು.

GUPTA MAHA MANTRA

ಅತ್ಯುತ್ಕೃಷ್ಟವಾಗಿಯೂ ಉಜ್ವಲವಾಗಿದೆ. ಅತ್ಯಂತ ಕಷ್ಟಸಾಧ್ಯವಾದ ಎಂಥ ಉದ್ದೇಶವಾದರೂ ಇದನ್ನು ಉಚ್ಚರಿಸಿದ ಮಾತ್ರದಿಂದಲೇ, ಸಾಧಿಸಲಾಗುವುದು. ನಿಮಗೆ ಅಪೇಕ್ಷೆ ಇರುವವಳು ಬಹಳ ಕಠಿಣ ಚಿತ್ತಳಾಗಿಯೂ ಗರ್ವಿಷ್ಠಳಾಗಿಯೂ ಇರಬಹುದಾದರೂ ಆಕೆ, ಇದರಿಂದ ನಿಮ್ಮ ಬಳಿ ಸಾರುವಳು. ಇದು ಪರೀಕ್ಷೆಗಳಲ್ಲಿ, ವ್ಯಾಜ್ಯಸಾಜ್ಯಗಳಲ್ಲಿ, ಸೋಡ್ತಿಗಳಲ್ಲಿ ಜಯಲಾಭವನ್ನು ನಿಮಗೆ ಕೊಡಿಸುವುದಲ್ಲದೆ, ನಿಮಗೆ ಉದ್ಯೋಗ, ಅಭಿವೃದ್ಧಿ, ಪುತ್ರಸಂತಾನ ಮತ್ತೂ ಸಂಪತ್ತನ್ನೂ ಕೊಡುವುದು. ಅದು ನಿಮ್ಮನ್ನು ಅದೃಷ್ಟ ಶಾಲಿಯನ್ನಾಗಿಯೂ ಮಾಡುವುದು .೭ ರುಪಾಯಿಗಳನ್ನು ಕಳುಹಿಸಿ, ಜಯಲಾಭ ಪಡೆಯಿರಿ. ಅಥವಾ ಅದು ಸುಳ್ಳೆಂದು ತೋರಿಸಿಕೊಟ್ಟು 50 ರೂಪಾಯಿಗಳ ಬಹುಮಾನ ಪಡೆಯಿರಿ. ಮೋಸಗಾರರ ಕುರಿತು ಜಾಗ್ರತೆ ಇರಲಿ.

PRASIDHA MANTRA ASHRAM,
No. 45 P. O. Katrisarai, (Gaya)

For all kinds of
NEAT & ACCURATE PRINTING
please consult
The
Saraswathi Printing Works, Ltd.,
MANGALORE, S. K.

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO., POST-CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗ ಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣ ಪರತ

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋಸ್ತಥಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ, ತಾರುಣವಾದ ಚಿಂತೆಯಿಂದಲೂ, ಅಭ್ಯಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಆವುಗಳು ಜೋಲುಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರು ಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೈಪ್ಪಟಿಪ್ಪವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರವೃದ್ಧಿಯನ್ನೂ ಸ್ತನಗಳ ಪೌಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತಥ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ. 3.

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟುದೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7. ವಾತರೋಗ.

THE GENERAL INSURANCE BANK OF INDIA LIMITED,

MANGALORE.

ESTD. 1933.

BENEFIT AMOUNT PAID EXCEEDS RS. 20,950/— | AS ON 30TH JUNE 1936. | RESERVE FUND EXCEEDS RS. 7,360/—

WE HAVE THREE SCHEMES FOR YOU

LIFE **MARRIAGE** **BIRTH**

ADMISSION FEE RS. 5/8/- ONLY.
(By Instalments if required)
MONTHLY PREMIUM RUPEE ONE ONLY.

Chairman:— M. R. Ry. Philip J. Chandran, Avgl., B. A., Retired Dt. Registrar and Assistant Registrar of Joint Stock Companies, S. K., Mangalore.

WANTED SPECIAL AGENTS AND REPRESENTATIVES ON LIBERAL TERMS.

For Full Prospectus and Agency Terms please apply to:—

THE GENERAL INSURANCE BANK OF INDIA LIMITED,
H. O. MANGALORE, S. K.

Mangalore, 1—11—1936.

P. K. MENON,
Secretary.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ಕಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ **ದ್ರಾಕ್ಷಾಮೃತ** ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೇಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಸಂತರ ತಿಳಿದೀತು.

ಪ್ರಸಾದ:—ಸಸಿಕನಲ್ಲಿ ಒಂದು ತೊಲೆ ಮತ್ತು ಸಂಜಿಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ.
೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಸ್ಟು ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು-ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ್, ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ. ‖ ಕಾರ್ಕಳ—ವಿ. ವಿ. ಶೆಣೈ. ಕುಂದಾಪುರ-ಕೆ. ಆರ್. ಭಡಜೀ. ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊಅರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

MODERN PRINTING AT MODERATE RATES!

CONSULT

The Saraswathi Printing Works, Limited,

CANTONMENT, MANGALORE.

ವೆಂಕಟಗಿರಿ ಮಹಾತ್ಮೆ

೭೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಮುಟ್ಟುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಮುದ್ರಿತ ಮುದ್ರಣ.

ಬೆಲೆ ರೂಪಾಯಿ ೧—೮—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವೀಕೃತರಾದ ಮೂಲ್ಕಿ ಕವಿ ರಾಮು ಕೃಷ್ಣಯ್ಯನವರಿಂದ ಭಾವಿನಿ ಪಟ್ಟಣಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುಕೂಲ ಪಡಸಲ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಆಕ್ಟಪತ್ರದ 168 ಪುಟಗಳು. ಕಿತ್ತಾ ನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಗುಪ್ತಮಂತ್ರ

100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸಲಾಗದ ಕೆಲಸಗಳು ಈ 'ಮಂತ್ರ'ದ ಏಳು ಬಾರಿಯ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಅದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಅದು ಒಳ್ಳೆಯ ಫಲ ಕೊಡುವುದು. ಅಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಓದಿದಾಗ ಅವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹಂಬಲು ಹುಟ್ಟುವುದು. ಇದಕ್ಕೆ 'ವಶೀಕರಣ ಮಂತ್ರ'ವೆನ್ನುವರು. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು, ನಿಮಗೆ ಕೆಲಸವನ್ನೊ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ನಮ್ಮ ಬಹುಮಾನ—ರೂ. 100! ಪೋಸ್ಟೇಜ್ ಕೂಡ ಬೆಲೆ ರೂ. 2—7—0. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Siddha Manthra Ashram,
No. 174, P. O. Katri Sarai, (GAYA.)

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಮರಾಠಿ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಚೀಜುಗಳ ಗ್ರಾಮೋಫೋನ್‌ಗಳಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ. ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort MIRAJ. (S.M.C.)

ಲಲಿತಕಲಾದರ್ಶಕ ಸಂಗೀತ ಶಾಲೆ,

ಕಾಳಿಕಾಂಬಾ ದೇವಸ್ಥಾನ ರಸ್ತೆ,
ಮಂಗಳೂರು.
(ESTD. 1931.)

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಶಾಸ್ತ್ರೀಯವಾಗಿ ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಮಾಸ್ಟರ್ ಎಚ್. ನಾರಾಯಣ ರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್ ಮತ್ತು ಉಭಯಸಂಗೀತವಿದ್ಯಾವಿಶಾರದ.

ಕೂದಲು ರಂಗು ಬಿಡಿ.

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಲ್ಲುತ್ತದೆ. ಬೇರಿನಿಂದಲೇ, ಬಿಳಿ ಕೂದಲು ಕಪ್ಪಾಗಿ ಬೆಳೆದು, 60 ವರ್ಷದ ವರೆಗೂ ಹಾಗೇ ಉಳಿಯುತ್ತದೆ. ಹಾಗಾಗದಿದ್ದರೆ, ಎರಡಪ್ಪು ಬೆಲೆಯನ್ನು ಹಿಂದಿರುಗಿಸುವೆವೆಂದು ಗ್ಯಾರೆಂಟಿ. ಕೆಲವು ಬಿಳಿ ಕೂದಲುಗಳಿದ್ದರೆ, ರೂ. 3ರ ಬಾಟಲಿಗೂ, ಹೆಚ್ಚು ಬಿಳಿ ಕೂದಲಿದ್ದರೆ ರೂ. 5ರ ಬಾಟಲಿಗೂ ಅರ್ಧ ಭಾಗಕ್ಕೂ ಹೆಚ್ಚಾಗಿ ಅಥವಾ ಪೂರಾ ಭಾಗದಲ್ಲಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೂ ಆರ್ಡರ್ ಮಾಡಿ.

BAL KALA STORES,
12, 28-7. **P. O. Kansi Simri (Darbhanga.**

GUARANTEED HYGIENIC RUBBER GOODS

(PROPHYLACTIC)

Of superior quality. Dozen Rs. 3/12. Six annas postage stamps will get you one as sample.

K. Agency,
(Dept. C),
MANGALORE No. 13.

ಮಾರ್ಗೊ ಸೋಪ್

ಬೇಸಿಗೆಯ ಕಾಲಕ್ಕೂ ಚರ್ಮದ ಮೃದುತ್ವಕ್ಕೂ
ಅತ್ಯುತ್ಕೃಷ್ಟವಾದುದು.

ಇದೇ ಪ್ರಥಮವಾದ ಮತ್ತೂ ಆಗಿರತಕ್ಕ ಒಂದೇ ಒಂದು "ನೀಮ್" ಸಾಬೂನು.

ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಮತ್ತು ಸ್ಥಳೀಯ ಸ್ಟೋಕಿಸ್ಟರಲ್ಲಿ ದೊರೆಯುತ್ತದೆ.

"ನೀಮ್" ಟೂತ್‌ಪೇಸ್ಟ್

ಭಾರತೀಯರು ಅನಾದಿಕಾಲದಿಂದಲೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವ "ನೀಮ್" ಬೇವಿನ ಕಡ್ಡಿಯ ವಿಷಹಾರಿಯಾದ ಮತ್ತು ಸ್ತಂಭಕವಾದ ಗುಣಗಳೆ ಅವರ ಆರೋಗ್ಯಕರವಾದ ಹಲ್ಲುಗಳ ಗುಟ್ಟೆಂದು ತಿಳಿಯಲಾಗಿದೆ.

ಕಾಲ್ಕೆಮಿಕೊ ನೀಮ್ ಟೂತ್‌ಪೇಸ್ಟ್

ಬೇವಿನ ಕಡ್ಡಿಯ ಎಲ್ಲಾ ಗುಣಗಳನ್ನು ಉಳ್ಳುದಾಗಿದೆಯಲ್ಲದೆ ಪರಿಣಾಮಕಾರಿಯಾಗಿ ಹಲ್ಲನ್ನು ಶುದ್ಧಗೊಳಿಸುವದಕ್ಕೆ ಆಧುನಿಕ ದಂತ ವೈದ್ಯ ಶಾಸ್ತ್ರಕ್ಕೆ ತಿಳಿದಿರುವ ಪದಾರ್ಥಗಳನ್ನು ಒಳಕೊಂಡಿದೆ.

ಸೀಸವಿಲ್ಲದ ಟಿನ್ನಿನ ಕೊಲ್ಲ್ಯಾಪ್ಸಿಬಲ್ ಟ್ಯೂಬುಗಳಲ್ಲಿದೆ.

ದಂತನುಂಜನವನ್ನು ಅಪೇಕ್ಷಿಸುವವರ ಉಪಯೋಗಕ್ಕಾಗಿ ನಮ್ಮ

ಮಾರ್ಗೊಪ್ರಿಸ್ "ನೀಮ್ ಹಲ್ಲುಪುಡಿ"

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟೆ ಬಜಾರ್.
ಯು. ಆರ್. ಶೆಣೈ ಎಂಡ್ ಸನ್ಸ್, ರಥಬೀದಿ.
ಸ್ಕೂಲ್ ಬುಕ್ ಕೋ, ರಥಬೀದಿ.

ಐತಿಹ್ಯ.

ಯಶಸ್ಸಿಯಾದ ಪ್ರತಿಯೊಂದು ಸಾಹಸೋದ್ಯಮದ ಬೆನ್ನೆಲುಬು ಐತಿಹ್ಯವೇ. ಮುಖ್ಯ ಶಕ್ತಿಯಾದ—ಐತಿಹ್ಯವು, ಅಲ್ಲಿಲ್ಲದಿದ್ದರೆ, ಸಂಸ್ಥೆಗಳೂ ಮನುಷ್ಯವರ್ಗದಂತೆ, ನಶಿಸಿಹೋಗುತ್ತವೆ. ಮೂವತ್ತು ವರ್ಷಗಳ ಯಶಸ್ಸಿನ ಆಡಳಿತದ ಕಾಲದಲ್ಲಿ "ನ್ಯಾಶನಲಿನ" ಐತಿಹ್ಯವು ಬೆಳೆಯುತ್ತ ಬಂದಿದೆ. "ನ್ಯಾಶನಲ್" ಇಂದೇನಾಗಿದೆಯೋ, ಆ ಸ್ಥಾನಕ್ಕೆ ತಂದಿರಿಸಿದುದು ಅದೇ.

ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,

ಹೆಡ್ ಆಫೀಸ್: ಕಲ್ಕತ್ತಾ.

ಏಜೆನ್ಸಿ ಪರತ್ತು ಮೊದಲಾದುವುಗಳಿಗೆ ಬರೆದುಕೊಳ್ಳಿ:—

ದಿ ಆರ್ಗನ್ಯಾಜಿಂಗ್ ಸೆಕ್ರಟರಿ,
ಸಬ್ ಆಫೀಸ್,
171-ನ್ಯೂ ಸ್ಟ್ರೀಟ್, ಮಧುರೆ.

ಬ್ರಾಂಚ್ ಸೆಕ್ರಟರಿ,
ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
362, ಚೈನಾ ಬಜಾರ್ ರೋಡ್,
ಎಸ್ಪ್ಲನೇಡ್, ಮದ್ರಾಸ್.

ದಿ ಸಬ್ ಬ್ರಾಂಚ್ ಸೆಕ್ರಟರಿ,
ದೇವಾಂಗ ಬ್ಯಾಂಕ್ ಬಿಲ್ಡಿಂಗ್ಸ್,
ಕೆಂಪೇ ಗೌಡ ರೋಡ್,
ಬೆಂಗಳೂರು ಸಿಟಿ.

ಬೆಂಕಿ, ಮೋಟರು ಮತ್ತೂ ಕೆಲಸಗಾರರ
ಪರಿಹಾರಗಳ ವಿಮೆಯ ಸಂಬಂಧ
ಏಸೋಶಿಯೇಟೆಡ್
ನ್ಯಾಶನಲ್ ಫಯರ್ ಎಂಡ್ ಜನರಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್‌ನ್ನು ಕೇಳಿ.

S. K. M.

ಸಿದ್ಧ ಕಲ್ಪ ಮಕರಧ್ವಜ

(ರಿಜಿಸ್ಟರ್ಡ್)

ನಿಶ್ಶಕ್ತಿ, ನರಗಳ ಬಲಹೀನತೆ, ಅಜೀರ್ಣ, ಉಬ್ಬುಸ, ಮೇಹವ್ಯಾಧಿ, ಮೇಹ ವ್ರಣಗಳು; ಸ್ತ್ರೀ ಸಂಬಂಧದಿಂದುಂಟಾಗುವ ವ್ಯಾಧಿಗಳು, ಸ್ತ್ರೀಯರ ಗರ್ಭಾಶಯ ಮತ್ತು ಸೂತಿಕಾ ಸಂಬಂಧವಾದ ಎಲ್ಲಾ ವ್ಯಾಧಿಗಳು, ಚಿಕ್ಕಂದಿನ ದುರ್ನಡತೆಯ ಪರಿಣಾಮವಾಗಿ ಉಂಟಾಗುವ ವೀರ್ಯಕ್ಷಯ ಮತ್ತು ಬಲಹೀನತೆ ಇವುಗಳಿಗೆಲ್ಲಾ ಮಹಾಮಹಿಮೆಯುಳ್ಳ ದಿವ್ಯೌಷಧ ಇದು ಒಂದೇ. ೫೦ ವರ್ಷಗಳಿಂದ ಪ್ರಖ್ಯಾತಿಹೊಂದಿ ಅನೇಕ ಸುವರ್ಣ ಪದಕಗಳನ್ನೂ ಮತ್ತು ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ.

ಕ್ರಯ ೬೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ರೂ. ೦೦.

THE MADRAS
AYURVEDIC PHARMACY (LTD.),
Madras—P. O. Box 151, 289 Esplanade,
180, Mount Rd., MADRAS.

THE BANK OF MANGALORE, LTD.

MANGALORE.

Head Office:— **Mangalore.**

ESTD. 1931.

Branches:— **Mangalore, Panemangalore, Mudabidri & Padubidri.**

Chairman:—**Philip J. Chandran,** B. A.,
Retd. Dt. Registrar & Asst. Registrar of Joint Stock Companies.

On & from 1st of November 1936 Fixed Deposits will be received at following rates of interest.

For	3	months	4 %
,,	6	,,	4½ %
,	12	,,	5½ %
,	24	,, & upwards	6 %

Interest Payable Quarterly.

U. R. Pai,
N. Upendra Pai,
Managing Directors.